ಶ್ರೀ ಸಿದ್ದರಾಮಯ್ಯ(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ವಿಷಯ ನಿಯಮ 60ರ ಅಡಿಯಲ್ಲಿ ತರುವ ವಿಷಯವಲ್ಲ, ನಿಯಮ 69ಕ್ಕೆ convert ಮಾಡುವ ವಿಷಯವೂ ಅಲ್ಲ. ಮಾಡಿ ಬಿಟ್ಟಿದ್ದೀರಿ. I am not questioning your order.

(ಗೊಂದಲ)

ಶ್ರೀ ಬಿ.ಜೆ. ಪುಟ್ಟಸ್ವಾಮಿ:ಪತ್ರಿಕೆಗಳಲ್ಲಿ ಬಂದ ವಿಷಯದ ಬಗ್ಗೆ ಸದನದಲ್ಲಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಾದರೆ ಅವರು writing ನಲ್ಲಿ ಏನು ಕೊಡುತ್ತಾರೋ ಕೊಡಲಿ.

(ಗೊಂದಲ)

ಶ್ರೀ ವೆಂಕಟರಾವ್ ನಾಡಗೌಡ: ಈಗಾಗಲೇ ಮಾನ್ಯ ಅಧ್ಯಕ್ಷರು Ruling ಕೊಟ್ಟಿದ್ದಾರೆ, ನೀವು ಅದನ್ನು ಪ್ರಶ್ನೆ ಮಾಡುವ ಹಾಗಿಲ್ಲ. ನೀವೇ ಪ್ರಶ್ನೆ ಮಾಡಿಕೊಂಡು ಕುಳಿತರೆ ಹೇಗೆ?

ಶ್ರೀ ಬಿ.ಜೆ.ಪುಟ್ಟಸ್ವಾಮಿ: ಖಂಡಿತ ಒಪ್ಪುತ್ತೇನೆ.

3. ನಿಯಮ 69ರ ಮೇರೆಗೆ ಮುಂದುವರಿದ ಚರ್ಚೆ

ವಿಷಯ: ರಾಜ್ಯದಲ್ಲಿ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) :. ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ಬರದ ಬಗ್ಗೆ ಚರ್ಚೆ ಮಾಡುವಾಗ ಕರ್ನಾಟಕದಲ್ಲಿ ಬರ ಎಷ್ಟು ಭೀಕರವಾಗಿದೆ, ಕಳೆದ ವರ್ಷ ಮತ್ತು ಈ ವರ್ಷ ಮುಂಗಾರು ಹೇಗೆ ದುರ್ಬಲವಾಗಿದೆ ಎಂಬ ಚಿತ್ರವನ್ನು ಸದನದ ಮುಂದೆ ಇಟ್ಟಿದ್ದೆ. ಬಹುಶಃ ಅವೆಲ್ಲವೂ ಕೂಡ ಸರ್ಕಾರದ ಗಮನದಲ್ಲಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ನನ್ನೆ ನಾನು ಏನೇನು ಹೇಳಿದ್ದೆ ಅವೆಲ್ಲವೂ ಕೂಡ based on facts, based on information furnished by the Government and my information is also there. ಮಳೆ ಕೈಕೊಟ್ಟ ಮೇಲೆ ನಾನೂ ಅನೇಕ ಜಿಲ್ಲೆಗಳಿಗೆ ಅಂದರೆ ಚಿತ್ರದುರ್ಗ, ತುಮಕೂರು, ಚಾಮರಾಜನಗರ, ಮೈಸೂರು, ಮಂಡ್ಯ, ಚಿಕ್ಕನಾಯಕನಹಳ್ಳಿಗೆ ಭೇಟಿ ನೀಡಿದ್ದೆ. ತುಮಕೂರು ಮತ್ತು ಚಿತ್ರದುರ್ಗದಲ್ಲಂತೂ ಬಿತ್ತನೆ ಆಗಿಯೇ ಇಲ್ಲ. ತುಮಕೂರಿನ ಚಿಕ್ಕನಾಯಕನಹಳ್ಳಿ, 3–4 ತಾಲ್ಲೂಕುಗಳಲ್ಲಿ pre-monsoon ಬಿತ್ತನೆ ಮಾಡಿದ್ದರು, ಆದರೆ ಆ ಬೆಳೆ ಪೂರ್ತಿ ಒಣಗಿ ಹೋಯಿತು. ನಮ್ಮ ಮೈಸೂರಿನಲ್ಲಿ ಬಿತ್ತನೆ ಮಾಡಿದ್ದರು, ಹಾಸನದಲ್ಲಿ, ತುಮಕೂರಿನಲ್ಲಿ ಬಿತ್ತನೆ

ಮಾಡಿದ್ದರು, ಚಿತ್ರದುರ್ಗದಲ್ಲಿ ಸ್ವಲ್ಪ ಬಿತ್ತನೆ ಮಾಡಿದ್ದರು. ಅವೆಲ್ಲವೂ ಕೂಡ ಇವತ್ತು ಒಣಗಿ ಹೋಗಿದೆ. Totally 90% of the crop has lost. ಸುಮಾರು 20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಿದ್ದರೆಂದು ನಾನು ನೆನ್ನೆ ಹೇಳಿದ್ದೆ. ಅದರಲ್ಲಿ 90% ನಷ್ಟವಾಗಿದೆ. ಇದು ಈ ವರ್ಷ ರೈತರಿಗಾದ ದೊಡ್ಡ ಅನ್ಯಾಯ. This year also. ನಾನು ಕಳೆದ ವರ್ಷದ್ದು ಹೇಳುತ್ತಿಲ್ಲ. ಕಳೆದ ವರ್ಷ ಸುಮಾರು 5–6 ಸಾವಿರ ಕೋಟಿ ರೂಪಾಯಿಗಳಷ್ಟು ಬೆಳೆ ಬೇರೆ ಬೇರೆ ರೀತಿಯಲ್ಲಿ ನಷ್ಟವಾಗಿದೆ ಎಂದು ಸರ್ಕಾರದವರೇ memorandum ಕೊಟ್ಟಿದ್ದಾರೆ, ಒಪ್ಪಿಕೊಂಡಿದ್ದಾರೆ, ಅನೇಕ ಸಾರಿ ಸದನದಲ್ಲಿ ಕೂಡ ಹೇಳಿದ್ದಾರೆ. ಈ ವರ್ಷ pre-monsoon and monsoon ಇವರೆಡರಿಂದ ಇಷ್ಟು ಬೆಳೆ ನಷ್ಟವಾಗಿದೆ. ಜೊತೆಗೆ, ಈ ಮಾನ್‌ಸೂನ್ ನಲ್ಲಿ ಬೆಳೆಯುವ ಬೆಳೆಯನ್ನು ಖಾರಿಫ್ ಕ್ರಾಫ್ ಎಂದು ಹೇಳುತ್ತೇವೆ. ಈ ಮುಂಗಾರು ಬೆಳೆ ಒಟ್ಟು 74 ಲಕ್ಷ 70 ಸಾವಿರ ಹೆಕ್ಟೇರ್ ಎಂದು ಏನು ಹೇಳುತ್ತೇವೆ, ಅದರಲ್ಲಿ 82% ಮುಂಗಾರಿನಲ್ಲಿ ಕವರ್ ಆಗುತ್ತದೆ. Out of 82%, 11% is pre-monsoon, 71% is monsoon. Pre-monsoon ಎಲ್ಲಾ ಹೋಯಿತು. ಈಗ 71% ನಲ್ಲಿ ಬಿತ್ತನೆಯಾಗಿಲ್ಲ. ಇಲ್ಲಿ ಬಹಳಷ್ಟು ಜನ ರೈತರ ಮಕ್ಕಳಿದ್ದಾರೆ. ಜುಲೈ 15ರವರೆಗೆ ಮಾತ್ರ ಮುಂಗಾರು ಎನ್ನುತೇವೆ. ಬಹಳ ಲೇಟ್ ಎಂದರೆ ಜುಲೈ ಎಂಡ್ ಎಂದು ಹೇಳಬಹುದು. ಅಂದರೆ ಮುಂಗಾರು ಮಳೆ ಬರದಿದ್ದರಿಂದ ಮುಂಗಾರು ಬಿತ್ತನೆ ಆಗಲಿಲ್ಲ. ಈಗ alternative crop ಹಾಕುತ್ತೇವೆಂದು ಹೇಳುತ್ತಾರೆ. Agriculture Department ನವರು ನಾವು alternative crop ತಯಾರು ಮಾಡಿಕೊಂಡಿದ್ದೇವೆಂದು ಹೇಳುತ್ತಾರೆ. ಏನು ಹಾಕಬಹುದು? ಈಗ ದಕ್ಷಿಣ ಒಳನಾಡಿನಲ್ಲಿ ಶೇಂಗಾ ಬಿತ್ತನೆ ಮಾಡಬಹುದು, ರಾಗಿ, ಮೆಕ್ಕೆ ಜೋಳ ಬಿತ್ತನೆ ಮಾಡಬಹುದು. ನೀರು ಬಿಟ್ಟಮೇಲೆ ಕಬ್ಬು, ಬತ್ತ ಬಿತ್ತನೆ ಮಾಡಬಹುದು. ಇದರ ಭೀಕರತೆ ಎಷ್ಟಿದೆ ಎಂಬುದನ್ನು ಸರ್ಕಾರದ ಗಮನ ಸೆಳೆಯಲಿಕ್ಕೋಸ್ಕರ ಈ ಮಾತುಗಳನ್ನು ನಾನು ಹೇಳುತ್ತಿದ್ದೇನೆ. Not with any other intension. 74 ಲಕ್ಷ 70 ಸಾವಿರ ಹೆಕ್ಟೇರ್ ಮುಂಗಾರಿನಲ್ಲಿ totally 124 ಲಕ್ಷ ಮೆಟ್ರಿಕ್ ಟನ್ ವಾರ್ಷಿಕವಾಗಿ ಆಹಾರ ಉತ್ಪಾದನೆಯಾಗುತ್ತದೆಂದು ಲೆಕ್ಕವಿಟ್ಟುಕೊಂಡಿದ್ದೇವೆ. ಕೇವಲ ಮುಂಗಾರು ಒಂದರಲ್ಲಿಯೇ about 109, 110 metric tonne ಆಹಾರ ಉತ್ಪಾದನೆ ಆಗುತ್ತದೆಂದು ಲೆಕ್ಕ. ಮಾನ್ಯ ಈಶ್ವರಪ್ಪನವರೆ ತಾವು Revenue and Rural Development Minister ಆಗಿದ್ದೀರಿ. ಕೃಷಿ

ಸಚಿವರು ಸದನದಲ್ಲಿ ಕಾಣಿಸುತ್ತಿಲ್ಲ. ಬರಗಾಲದ ಮೇಲೆ ಚರ್ಚೆ ಮಾಡುವಾಗ ಕೃಷಿ ಸಚಿವರು ಇಲ್ಲವೆಂದರೆ ಹೇಗೆ?

ಶ್ರೀ ಬಿ.ಜೆ. ಪುಟ್ಟಸ್ವಾಮಿ :ಮಾನ್ಯ ಸಚಿವರು ಇಲ್ಲಿಯೇ ಇದ್ದಾರೆ, ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾಹಿತಿ ತೆಗೆದುಕೊಳ್ಳುತ್ತಿದ್ದೀರಾ? ನಾನೇ ಮಾಹಿತಿ ಕೊಡುತ್ತಿದ್ದೇನೆ, ನೀವು ಅದನ್ನು ಬರೆದುಕೊಂಡರೆ ಸಾಕು. ನಾನು ಕೊಡುವ ಮಾಹಿತಿಯೆಲ್ಲಾ ಸರ್ಕಾರ ಕೊಟ್ಟ ಮಾಹಿತಿಯೇ ಆಗಿದೆ. Whatever information I am giving is the information obtained by the Government. ಇವೆಲ್ಲಾ ಸತ್ಯ. 82% accounted for monsoon. Out of 82 lakh hectares ನಲ್ಲಿ 11% pre-monsoon, 71% monsoon. ಇದ್ದು ಬಿಟ್ಟು ಅವರು ಏನು ಮಾಹಿತಿ ಕೊಡುತ್ತಾರೆ? ರೈತರು ಏನು ಮಾಡಬೇಕು ಹೇಳಿ? ಇವರು ನೋಡಿದರೆ ಒಬ್ಬೊಬ್ಬರ ಮನೆಗೆ ಹೋಗಿ ಊಟ ಮಾಡಿಕೊಂಡು, ಕುಳಿತುಕೊಂಡು, ಜಗಳವಾಡಿಕೊಂಡು ಇದ್ದಾರೆ. ರಾತ್ರಿ ಮಾನ್ಯ ಮುಖ್ಯಮಂತ್ರಿಯವರಾದ ಜಗದೀಶ್ ಶೆಟ್ಟರ್ ಮನೆಯಲ್ಲಿ ಮೀಟಿಂಗ್. ಇನ್ನೊಂದು ಕಡೆ ಸದಾನಂದಗೌಡರ ಮನೆಯಲ್ಲಿ ಮೀಟಿಂಗ್. ಬರದ ಬಗ್ಗೆ ಯೋಚನೆ ಮಾಡುವುದಕ್ಕೆ ಇವರಿಗೆ ಸಮಯವೆಲ್ಲಿದೆ? Where is the time for the govt. To think over the drought?ಇವರನ್ನು ಏನೆಂದು ಕರೆಯಬೇಕು ನೀವೇ ಹೇಳಿ. ಇವರಿಗೆ ಯಾವ ಪದ ಬಳಸಿದರೂ ಕಡಿಮೆಯೇ. ರಾತ್ರಿಯೂ, ಬೆಳಗ್ಗೆಯೂ ಮೀಟಿಂಗ್, ಇವತ್ತು ರಾತ್ರಿಯೂ ಮೀಟಿಂಗ್ ನಡೆಯುತ್ತದೆ. ರಾಜ್ಯದ ಜನರು ಇದನ್ನೆಲ್ಲ ನೋಡುತ್ತಿದ್ದಾರೆ. ಇವರು ಮೀಟಿಂಗ್‌ನಲ್ಲಿ ರುಚಿಕರವಾದ ಭೋಜನ ಮಾಡಿಕೊಂಡು ಇದ್ದಾರೆ. ಬರದ ಬಗ್ಗೆ ಇವರಿಗೆ ಎಲ್ಲಿ ಯೋಚನೆ ಬರುತ್ತದೆ? ರೈತರು ತಮ್ಮ ದನಕರುಗಳಿಗೆ ಮೇವಿಲ್ಲದೆ ಕಾಡಿಗೆ ಅಟ್ಟಿದ್ದಾರೆ. ಪತ್ರಿಕೆಯಲ್ಲಿ ಒಂದು ಚಿತ್ರ ಪ್ರಕಟಿಸಿ, ಇವೆಲ್ಲ ಗುಳೆ ಹೋಗುತ್ತಿರುವ ದನಗಳು ಎಂದು ಬರೆದಿದ್ದಾರೆ. ಇದು ಹಾವೇರಿ ಜಿಲ್ಲೆಯ ಚಿತ್ರ. ಹಾವೇರಿ ಜಿಲ್ಲೆಯಲ್ಲಿ ಅನ್ನ ಹುಡುಕಿಕೊಂಡು ರೈತರು ಕೃಷಿ ಕಾರ್ಮಿಕರು ಗುಳೆ ಹೋಗುವುದು ಸಹಜ ತೀವ್ರ ಬರಗಾಲದಿಂದ ತತ್ತರಿಸಿರುವ ಜಾಜುವಾರುಗಳು ಹಸಿವನ್ನು ತಣಿಸಿಕೊಳ್ಳಲು ಮೇವು ಹುಡುಕಿಕೊಂಡು ಗುಳೆ ಹೋಗುತ್ತಿರುವುದು ಉತ್ತರ ಕರ್ನಾಟಕದಲ್ಲಿ ಸಾಮನ್ಯವಾಗಿದೆ ಎಂದು ಹೇಳಿ, ಗದಗ ಜಿಲ್ಲೆಯ ಯಲ್ಲಾಪುರ, ಹಾವೇರಿ ಜಿಲ್ಲೆಯ ಇಚ್ಚಂಗಿ, ಬೈರಾಪುರ, ಮೆಲ್ಲಳ್ಳಿ ಇಂಥ ಅನೇಕ ಊರುಗಳಲ್ಲಿ ಈ ರೀತಿ ಆಗುತ್ತಿದೆ ಎಂದು ಪತ್ರಿಕೆಯಲ್ಲಿ ಬರೆದಿದ್ದಾರೆ. ಅಲ್ಲದೆ, ಕೊಪ್ಪಳ ಜಿಲ್ಲೆಯ ಹೊಸರಿತ್ತಿಯಲ್ಲಿ ಕಾಡು ಇದೆ. ಆ ಕಾಡಿಗೆ ಆ ಊರಿನ

ಜನರು ದನಗಳನ್ನೆಲ್ಲ ಬಿಟ್ಟಿದ್ದಾರೆ. ಆ ಕಾಡಿನಲ್ಲಿ ದನಗಳನ್ನು ನೋಡಿಕೊಳ್ಳುವವರಿಗೆ ಅಲ್ಲಿ ವಾಸಕ್ಕೆ ಜಾಗವೆಲ್ಲಿದೆ? ಅವರು ಮರದ ಪೊಟರೆಯೊಳಗೆ ಕುಳಿತುಕೊಳ್ಳುವುದು, ಅಲ್ಲಿಯ ಮರದ ಕೆಳಗೆ ಮಲಗಿಕೊಳ್ಳುವುದು ಮಾಡುತ್ತಿದ್ದಾರೆ. ಈ ರೀತಿಯ ಕಷ್ಟದಲ್ಲಿದ್ದಾರೆ. ಇಂಥ ಕಷ್ಟದಲ್ಲಿ ಆ ಜನ ಕಣ್ಣೀರಿನಲ್ಲಿ ಕೈ ತೊಳೆಯುವಾಗ ಇವರು ಕುರ್ಚಿಗೋಸ್ಕರ ಕಿತ್ತಾಟ ಮಾಡಿಕೊಂಡು, ರೈತರನ್ನು ಮರೆತುಬಿಟ್ಟಿದ್ದಾರಲ್ಲ. ಇವರಿಂದ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸಲಿಕ್ಕೆ ಸಾಧ್ಯವೇ? Government is totally failed. Miserably failed and not at all bothered. They have no concern. ಇದು ಬಹಳ ಸ್ಪಷ್ಟವಾಗಿ ಇವರ ನಡವಳಿಕೆಗಳಿಂದ ಗೋಚರವಾಗುತ್ತಿದೆ. ಜನರೂ ಕೂಡ ಇದನ್ನು ಅರ್ಥ ಮಾಡಿಕೊಂಡಿದ್ದಾರೆ. ನಮಗೇನೂ ಹಣಕ್ಕೆ ತೊಂದರೆ ಇಲ್ಲ, ಬೇಕಾದಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ, 122 ಕೋಟಿ ರೂಪಾಯಿಗಳು ಡಿ.ಸಿ. ಗಳ PD account ನಲ್ಲಿದೆ ಎನ್ನುತ್ತಾರೆ.ಕೇಂದ್ರ ಸರ್ಕಾರ ನಮಗೆ ಹಣ ಕೊಡಲಿಲ್ಲ ಎನ್ನುತ್ತೀರಿ. ನೀವು ಎಷ್ಟು ಹಣ ಖರ್ಚು ಮಾಡಿದ್ದೀರಿ? ಕೇಂದ್ರ ಸರ್ಕಾರ ಹಣ ಕೊಡಬೇಕು. ನೀವು ಎಷ್ಟು ಹಣ ಕೊಟ್ಟಿದ್ದೀರಿ? 2011-12ರಲ್ಲಿ ಇವರು 182 ಕೋಟಿ ರೂಪಾಯಿಗಳನ್ನು release ಮಾಡಿದ್ದಾರೆ. ಕೇಂದ್ರ ಸರ್ಕಾರದಿಂದ SDRFನಲ್ಲಿ 169 ಕೋಟಿ ರೂಪಾಯಿ, NDRFನಲ್ಲಿ 70 ಕೋಟಿ ರೂಪಾಯಿ ಮತ್ತೆ ಇನ್ನೊಂದು ಸಾರಿ 282 ಕೋಟಿ ರೂಪಾಯಿ ಬಂದಿದೆ. ಈ ವರ್ಷದ SDRF ನಲ್ಲಿ 86 ಕೋಟಿ ರೂಪಾಯಿ ಬಂದಿದೆ. ಅಂದರೆ, ಸುಮಾರು 620 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬಂದಿದೆ. ಇವರು ಕಳೆದ ವರ್ಷ ಖರ್ಚು ಮಾಡಿರುವ ಹಣ ಎಷ್ಟೆಂದರೆ, SDRF ನಲ್ಲಿ 182 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ,ಕೇಂದ್ರ ಸರ್ಕಾರದವರು 282 ಕೋಟಿ ರೂಪಾಯಿಗಳನ್ನು ಜೂನ್ 30 ರಂದು ಬಿಡುಗಡೆ ಮಾಡಿದ ಮೇಲೆ ಇವರು ಜುಲೈ 16 ರಂದು 238 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ. ಅದರಲ್ಲಿ ಇಲ್ಲಿಯವರೆಗೂ ಒಂದು ರೂಪಾಯಿಯೂ ಖರ್ಚಾಗಿಲ್ಲ. 238 ಕೋಟಿ ರೂಪಾಯಿಗಳಲ್ಲಿ not a single rupee is spent. The money is released on 16th July. ಆಮೇಲೆ ಇನ್ನೇನು ಹೇಳುತ್ತಾರೆ, 2011-12 ರಲ್ಲಿ 175 ಕೋಟಿ rural development ಗೆ, ಕುಡಿಯುವ ನೀರಿಗೆ ಬಿಡುಗಡೆ ಮಾಡಿದ್ದೇವೆ. ಈ ವರ್ಷ 2012-13ಕ್ಕೆ 47 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ. 175+47+182 ಕೋಟಿ ಒಟ್ಟು ಎಷ್ಟಾಯಿತು? Not even Rs. 400 Crore. But in NDRF

you got more than Rs. 600 Crore. Why you have not utilized the entire amount? Show me a single rupee whichhas been released from theGovernment of Karnataka. ಕೇಂದ್ರ ಸರ್ಕಾರದಿಂದ 600 ಕೋಟಿ ಬಂದಿದೆ. ಇನ್ನು 86 ಕೋಟಿ ಡಿಸೆಂಬರ್‌ಗೆ ಬರುತ್ತದೆ. ಅದನ್ನೆಲ್ಲಾ ಸೇರಿಸಿದರೆ 700 ಕೋಟಿಯಾಗುತ್ತದೆ. ಅದರೆ, ನೀವು ಹೋದ ವರ್ಷ ಖರ್ಚು ಮಾಡಿರುವುದು 182 ಕೋಟಿ. ಈ ವರ್ಷ ಇನ್ನೂ ಒಂದು ರೂಪಾಯಿ ಖರ್ಚು ಮಾಡಿಲ್ಲ. Is this the way to tackle the drought? ಜನ ಗುಳೇ ಹೋಗುತ್ತಿದ್ದಾರೆ. ಮೊನ್ನೆ ಕೊಪ್ಪಳದಿಂದ ಬರುತ್ತಿದ್ದಂಥ 55 ಜನ railway accident ನಲ್ಲಿ ಸತ್ತು ಹೋಗಿಬಿಟ್ಟರು. ಈ ವಿಚಾರ ತಾವು ಪೇಪರ್‌ನಲ್ಲಿ ಓದಿದ್ದೀರಿ. ಹೋದ ಸಾರಿ ಸದಾನಂದಗೌಡರವರು ಉತ್ತರ ಕೊಡುವಾಗ ಯಾರು ಗುಳೇ ಹೋಗುತ್ತಿಲ್ಲವೆಂದು ಹೇಳಿದ್ದರು. ಆ 55 ಜನ ಏಕೆ ಬಂದು ಸತ್ತರು ಸ್ವಾಮಿ? ಸುಮ್ಮನೆ ಬೆಂಗಳೂರಿಗೆ ಬರುತ್ತಿದ್ದವರು ಸತ್ತರಲ್ಲ, ಅವರೇನು ತೀರ್ಥಯಾತ್ರೆಗೆ ಬಂದು ಸತ್ತು ಹೋದರೆ? 55 ಜನ ಮೊನ್ನೆ ಕೊಪ್ಪಳದಿಂದ ಕೂಲಿ ಮಾಡುವುದಕ್ಕೆ ಬರತಕ್ಕಂಥವರು railway accidentನಲ್ಲಿ ಆಮಾನುಷವಾದ ರೀತಿಯಲ್ಲಿ ಎಲ್ಲರೂ ಸತ್ತು ಹೋದರು. ಬಾಡಿ ಎಲ್ಲಾ ಸುಟ್ಟು ಕರಕಲಾಗಿ ಹೋಗಿತ್ತು. ಈ ಸರ್ಕಾರಕ್ಕೆ ಏನಾದರೂ ಮಾನವೀಯತೆ ಇದೆಯೆ? ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಏನು ಮಾಡುತ್ತಿಲ್ಲ. ಒಂದು ಕಡೆಗೆ ಕರೆಂಟ್ ಇಲ್ಲ. ಇವತ್ತು 50% ಮಾತ್ರ, ಇದೆ whatever the requirement is. 176 MU ಬೇಕಾಗಿರುವುದು ಎಂದು ಹೇಳಿದರು. ನಾನು ಮೊನ್ನೆ ಮೈಸೂರಿನಲ್ಲಿ ಚಾಮುಂಡೇಶ್ವರಿ ಕಂಪನಿಯವರನ್ನು ನಿಮಗೆ normal ಆಗಿ ಎಷ್ಟು ಬೇಕು ಎಂದು ಕೇಳಿದೆ. ಸುಮಾರು 1800 MW ವಿದ್ಯುತ್ ಬೇಕೆಂದು ಹೇಳಿದರು. But they are giving only 770 MW. ಮೈಸೂರು ಜಿಲ್ಲೆಗೆ 350 MW ಬೇಕು ಆದರೆ 170 MW ಕೊಡುತ್ತಾರೆ. Can you manage? ಅದರಲ್ಲಿ ಈ ಲೆಕ್ಕದೊಳಗೆ transmission loss, distribution loss, theft ಎಲ್ಲಾ ಹೋಗುತ್ತದೆ. ಅದಕ್ಕೋಸ್ಕರ ಹಳ್ಳಿಗಾಡಿನಲ್ಲಿ ಎರಡು ಗಂಟೆನೂ ಕೂಡ ವಿದ್ಯುತ್ ಕೊಡುತ್ತಿಲ್ಲ. Load shedding is unlimited. ನಾನು ವಿವರವಾಗಿ ಕೆ.ಇ.ಬಿ ಇಲಾಖೆಯ ಡಿಮ್ಯಾಂಡ್ ಮೇಲೆ ಮಾತನಾಡುವಾಗ ಮಾತನಾಡುತ್ತೇನೆ. ಕಳೆದ ವರ್ಷ ಇಡೀ ರಾಜ್ಯದಲ್ಲಿ ಸುಮಾರು 20 ಸಾವಿರ ಟಿ.ಸಿ.ಗಳು ಸುಟ್ಟು ಹೋಗಿವೆ. ಇವರು 18 ಸಾವಿರ ರಿಪೇರಿ ಮಾಡಿದ್ದೇವೆಂದು ಹೇಳುತ್ತಾರೆ ಇನ್ನೂ 2 ಸಾವಿರ ರಿಪೇರಿ ಮಾಡಲಿಕ್ಕೆ ಆಗಲಿಲ್ಲ. ಕುಡಿಯುವ

ನೀರಿಗೆ ಸೆಪರೇಟ್ ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. " ನಿರಂತರ ಜ್ಯೋತಿ" ಕೊಡುತ್ತೇವೆಂದು ಹೇಳಿ ಇಲ್ಲಿ ನಿರಂತರ load shedding ನಿರಂತರ ಜ್ಯೋತಿ ಬದಲಾಗಿ ನಿರಂತರ load shedding. This is the actual position in villages. ಇಷ್ಟು ಬರಗಾಲವಿದೆ, ಬಡವರಿಗೆ ಸರಿಯಾಗಿ ಬಿಪಿಎಲ್ ಕಾರ್ಡುಹಂಚಲಿಲ್ಲ. ಅವರಿಗೆ ಉದ್ಯೋಗವೂ ಇಲ್ಲ. NREGS ಕೆಲಸ ನಡೆಯುತ್ತಿಲ್ಲ. Security pension ಗಳು ಸರಿಯಾಗಿ ಬರುತ್ತಿಲ್ಲ. ಈಗ ಮಾನ್ಯ ಈಶ್ವರಪ್ಪನವರು ಮಂತ್ರಿಗಳಾಗಿದ್ದಾರೆ, ಇದನ್ನೆಲ್ಲಾ ರಿವ್ಯೂ ಮಾಡಿ.Security pensionಗಳು ಕೆಲವು ಕಡೆಗೆ ಆರಾರು ತಿಂಗಳುಗಳಿಂದ ಹಿಡಿದು ಒಂದು ವರ್ಷದವರೆಗೆ ನಿಂತು ಹೋಗಿವೆ in the name of verification. ಕಳೆದ ವರ್ಷ ಹೊಸದಾಗಿ order ಮಾಡಿದರು. But money has not been released. Ordersತೆಗೆದುಕೊಂಡು ಹೋದರೆ ಟ್ರಜರಿಯಲ್ಲಿ ದುಡ್ಡು ಕೊಡುವುದಿಲ್ಲ.ದುಡ್ಡು ಬಂದಿಲ್ಲವೆಂದು ಹೇಳುತ್ತಾರೆ. ಅನೇಕ ಜನ ಬಡವರು ಖಾಯಿಲೆ ಬಂದರೆ ಔಷಧಿ ತೆಗೆದುಕೊಳ್ಳುವುದಕ್ಕೆ ಈ ದುಡ್ಡಿನ ಮೇಲೆ depend ಆಗಿರುತ್ತಾರೆ. Even that has not been properly implemented. ಅನೇಕ ಸಾರಿ ನಮ್ಮ ಜಿಲ್ಲೆಯಲ್ಲಿ ರೆವಿನ್ಯೂ ಇಲಾಖೆಯವರಿಗೆ ಇದನ್ನು ರಿವ್ಯೂ ಮಾಡಿ ಅವರಿಗೆ ಕೊಡಿ ಎಂದು ಹೇಳಿದೆ. ಅದಕ್ಕೆ ಅವರುineligible ಅನ್ನು ನಾವು remove ಮಾಡುತ್ತೇವೆ, verfication ಮಾಡುತ್ತೇವೆಂದು ಹೇಳಿದರು. In the name of verification, ಬಹಳ ಜನರದ್ದು ರದ್ದು ಮಾಡಿದರು. ಸುಮಾರು 12 ಲಕ್ಷ security pension ಗಳು ರದ್ದಾಗವೆ. ಬಿಪಿಎಲ್ ಕಾರ್ಡುಗಳು ಸುಮಾರು 30 ಲಕ್ಷ ರದ್ದಾಗಿವೆ. ಆ ಬಿಪಿಎಲ್ ಕಾರ್ಡು ಇಲ್ಲದೇ ಹೋದರೆ ಆಸ್ಪತ್ರೆಯಲ್ಲಿ ಬೆನಿಫಿಟ್ಸ್ ಸಿಕ್ಕುವುದಿಲ್ಲ. ಇದು ನಿಮಗೆ ಗೊತ್ತಿದೆ ಅಲ್ಲವೆ? ಏನು ಮಾಡಬೇಕು?Where do they go? ಇಲ್ಲಾ ಆತ್ಮಹತ್ಯೆ ಮಾಡಿಕೊಳ್ಳಬೇಕು, ಇಲ್ಲ ಬದುಕುವುದಕ್ಕೆ ಇನ್ನೇನ್ನಾದರೂ ಮಾಡಬೇಕು. ಬೇರೆ ಇನ್ನೇನ್ನಾದರೂ criminal activities ಮಾಡಬೇಕು. These are the two ways left to them. ಇಲ್ಲ criminal activitiesಮಾಡಬೇಕು, ಇಲ್ಲ ಆತ್ಮಹತ್ಯೆ ಮಾಡಿಕೊಳ್ಳಬೇಕು. ಪಾಪ, ಅವರಿಗೆ ಇವೆರಡೇ ಉಳಿದಿರುವುದು. This is the situation. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಕಂದಾಯ ಮಂತ್ರಿಗಳಿಗೆ ಒತ್ತಾಯ ಮಾಡುತ್ತೇನೆ. ಕೂಡಲೇ ಇವತ್ತೇ ಯಾವ್ಯಾವುದು pension ಗಳು ಬಾಕಿ ಇವೆ, ಅದು window pension ಇರಬಹುದು, oldage pension

ಇರಬಹುದು, ಅಥವಾ ಅಂಗವಿಕಲರ pension ಇರಬಹುದು, ಅಥವಾ ಸಂಧ್ಯ ಸುರಕ್ಷಾ ಇರಬಹುದು, ಆ ಎಲ್ಲದಕ್ಕೂ ಕೂಡಲೇ ಹಣ ಬಿಡುಗಡೆ ಮಾಡಿ. Please release without any further delay. ಆಮೇಲೆ ಇನ್ನೊಂದು ಮಾಡಿದ್ದಾರೆ. ಆ ಬಿಪಿಎಲ್ ಕಾರ್ಡಿಗೆ ಇನ್ನೊಂದು income certificate ಬೇಕೆಂದು condition ಹಾಕಿದ್ದಾರೆ. ಸರ್ವೆ ಮಾಡಿದ್ದಾರೆ. ಅದು ಇಲ್ಲದೇ ಹೋದರೆ ಇಲ್ಲ. Ineligible ಆಗಿರುವುದನ್ನು ತೆಗೆದು ಹಾಕಿದ್ದೇವೆಂದು ಹೇಳಿದ್ದಾರೆ. ಆಹಾರ ಮಂತ್ರಿಗಳು ಎಲ್ಲಿದ್ದಾರೆ? ಜೀವರಾಜ್‌ರವರೆ, ಹೊಸ ಮಂತ್ರಿಗಳು, ಬನ್ನಿ. ಹೀಗೇಕೆ? ಜೀವರಾಜ್‌ರವರೆ, ನೀವು ಹೊಸದಾಗಿ ಬಂದಿದ್ದೀರಿ, ಉತ್ಸಾಹ ಇದೆ. ಬಾರಿ ಹೋರಾಟ ಮಾಡಿ ಮಂತ್ರಿ ಪದವಿ ತೆಗೆದುಕೊಂಡಿದ್ದೀರಿ.

ಶ್ರೀ ಡಿ.ಎನ್.ಜೀವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು): ತಾವು income certificate ಬಗ್ಗೆ ಹೇಳಿದಿರಿ. ಹಳೆಯ ಕಾರ್ಡಿಗೆ income certificateಕೇಳಿಲ್ಲ. ಹೊಸ ಕಾರ್ಡುಗಳು ಮತ್ತು ತಾತ್ಕಾಲಿಕ ಕಾರ್ಡುಗಳೆಂದು ಏನು ಕೊಟ್ಟಿದ್ದಾರೆ, ಹೊಸ ಕಾರ್ಡುಗೆ ಅರ್ಜಿ ಕೊಟ್ಟಿದ್ದಾರೆ ಅದಕ್ಕೆ income certificateಬೇಕೆಂದು ಹೇಳಿತ್ತು. ಅದನ್ನು ಈಗ ಬದಲಾಯಿಸುತ್ತಿದ್ದೇವೆ. ಈ ನೆಮ್ಮದಿ ಕೇಂದ್ರದಿಂದ ಹಾಕುವುದು ಏನಿಲ್ಲ. ನೆಮ್ಮದಿ ಕೇಂದ್ರಕ್ಕೆ ಅರ್ಜಿ ಹಾಕಿ income certificateಅನ್ನು ತೆಗೆದುಕೊಂಡು ಕೊಡಬೇಕಾಗಿಲ್ಲ. ತಹಸೀಲ್ದಾರ್ ಕಡೆಯಿಂದ ದೃಢೀಕರಣ ಕೊಟ್ಟರೆ ಸಾಕೆಂದು ಹೇಳಿದೆ. ತಹಸೀಲ್ದಾರ್ ದೃಢೀಕರಣ ಕೊಟ್ಟರೆ income certificateಕೊಡುತ್ತಾರೆ.

ಶ್ರೀ ಯು.ಟಿ.ಖಾದರ್: ತಹಸೀಲ್ದಾರ್‌ರವರು ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ.

ಶ್ರೀ ಡಿ. ಎನ್.ಜೀವರಾಜ್: ಹೊಸ ಕಾರ್ಡಿಗೆ ಕೊಡಬೇಕಾದರೆ ಬಿಪಿಎಲ್ ಎನ್ನುವುದಕ್ಕೆ ಮಾನದಂಡ ಯಾವುದು ಸಾರ್ ? ಒಂದು ಏನಾದರೊಂದು ಮಾನದಂಡ ಮಾಡಬೇಕು ಅಲ್ಲವೆ? ಆದ್ದರಿಂದ, ಒಂದು ಬಿಪಿಎಲ್ ಕಾರ್ಡುಗೆ income certificateಬೇಕಾದರೆ ನೆಮ್ಮದಿ ಕೇಂದ್ರಕ್ಕೆ ಅರ್ಜಿ ಕೊಟ್ಟ ನಂತರ ಇದನ್ನು ಪರಿಶೀಲನೆ ಮಾಡುವುದಕ್ಕೆVA, RI ಹೋಗಿ ನೋಡಿಕೊಂಡು ಬಂದು ಇದನ್ನು ಕೊಡುವುದಕ್ಕೆ long process ಆಗುತ್ತದೆಂಬ ಕಾರಣಕ್ಕಾಗಿ ತಹಸೀಲ್ದಾರ್ ಮತ್ತು ಆರ್.ಐ.ಇವರ ಆದಾಯ ಇಷ್ಟೆಂದು ದೃಢೀಕರಣ ಕೊಟ್ಟರೆ ಸಾಕೆಂದು ಈಗ ಮಾಡಲಾಗಿದೆ. ತಾವು ಹಿರಿಯರಿದ್ದೀರಿ,

ಆದ್ದರಿಂದ, ತಾವು ಇದರ ಬಗ್ಗೆ ಏನಾದರು ಸಲಹೆ ಕೊಟ್ಟರೆ ಅದನ್ನು ನಾವು consider ಮಾಡುತ್ತೇವೆ.

ಶ್ರೀ ಬಂಡೆಪ್ಪ ಕಾಶಂಪೂರ್:– ಮಾನ್ಯ ಅಧ್ಯಕ್ಷರೆ, ತಾತ್ಕಾಲಿಕವೆಂದು ಈಗಾಗಲೇ ಕೊಟ್ಟಿರುವಂಥವುಗಳಿಗೂ ಕೂಡ ಮತ್ತೆ ಏತಕ್ಕೆ income certificateಕೇಳುತ್ತಿದ್ದೀರಿ? ಏಕೆಂದರೆ, ಇವರೆಲ್ಲರು ಈಗಾಗಲೇ ನೆಮ್ಮದಿ ಕೇಂದ್ರದಲ್ಲಿ ಎಲ್ಲಾ ದಾಖಲೆಗಳನ್ನು ಕೊಟ್ಟು ತಾತ್ಕಾಲಿಕವೆಂದು ನಿಮ್ಮ ಸರ್ಕಾರಕ್ಕೆ ಇದನ್ನು ಇಷ್ಯೂ ಮಾಡಿತ್ತು. ಕಂಪ್ಯೂಟರ್‌ನಲ್ಲಿ ಈಗ ಹೊಸದಾಗಿ ಅಳವಡಿಸಿರುವದಕ್ಕೆ income certificateಕೇಳಿ. ಈಗಾಗಲೇ ತಾತ್ಕಾಲಿಕವಾಗಿ ಇರುವಂಥವುಗಳಿಗೆ ಮತ್ತೆ ಏಕೆ ಕೇಳುತ್ತೀರಿ?

ಶ್ರೀ ಡಿ.ಎನ್.ಜೀವರಾಜ್:– ಆ ಸಂದರ್ಭದಲ್ಲಿ affidavit ಹಾಕಿದವರೆಲ್ಲರಿಗೂ ಸಹ ಕಾರ್ಡ್ ಕೊಟ್ಟಿದೆ. ಮತ್ತೆ verification ಮಾಡಲಾಗುತ್ತದೆಂದು ಆಗ ಹೇಳಲಾಗಿತ್ತು. ಆದ್ದರಿಂದ, verfication ಸಮಯದಲ್ಲಿ income certificate ಕೇಳಲಾಗಿದೆ. ಆ ದಿವಸ ಅವರು ಸ್ವಯಂ ಘೋಷಿತವಾಗಿ ಹಾಕಿಕೊಂಡಿದ್ದಂಥ affidivate ಮೇಲೆ ಕಾರ್ಡ್ ಕೊಡಲಾಗಿತ್ತು. ಅದನ್ನು ಈಗ permanent ಮಾಡಬೇಕಾಗಿರುವುದರಿಂದ ಕೇಳಲಾಗುತ್ತದೆ. ಇವತ್ತಿನದಿವಸ ಏನಾಗಿದೆ ಎಂದರೆ, ತುಂಬಾ ಸಾಹುಕಾರರು ಅಂದರೆ, 4–5 ಎಕರೆ ಅಡಿಕೆ ತೋಟ ಇದ್ದವರಿಗೂ ಸಹ ಕಾರ್ಡ್ ಬಂದಿರುವುದನ್ನು ನಾವು ನೋಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ:– ಮೊದಲು ನಾವು ಹೇಳುವುದನ್ನು ಕೇಳಿ. ಆನಂತರ ತಾವು ಮಾತನಾಡಿ. ಶಿವಲಿಂಗೇಗೌಡ ತಾವು ಮಾತನಾಡುತ್ತೀರಾ?

ಅಧ್ಯಕ್ಷರು:– ತಾವು ಆನಂತರ ಮಾತನಾಡಿ.

ಶ್ರೀ ಸಿದ್ದರಾಮಯ್ಯ:–ಮಾನ್ಯ ಶಿವಲಿಂಗೇಗೌಡರೆ, ತಾವು ಮಾತನಾಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ಪಡಿತರ ಚೀಟಿ ವಿಚಾರದ ಬಗ್ಗೆ ಹೇಳುವುದಾದರೆ, ಮಾನ್ಯಜೀವರಾಜ್‌ರವರು ಹೊಸದಾಗಿ ಆಹಾರ ಇಲಾಖೆಯ ಮಂತ್ರಿಗಳಾಗಿರುವುದು ಬಹಳ ಸಂತೋಷ. ಪಡಿತರ ಚೀಟಿ ಸಮಸ್ಯೆಯನ್ನು ಇವರು ಬಗೆಹರಿಸುತ್ತಾರೆಂದು ನಾವು ತಿಳಿದುಕೊಂಡಿದ್ದೇವೆ. ಪಾರ್ಲಿಮೆಂಟ್ ಚುನಾವಣೆ ಸಂದರ್ಭದಲ್ಲಿ ತಾವು ಏನು ಮಾಡಿದ್ದಿರೆಂದರೆ, ನೆಮ್ಮದಿ ಕೇಂದ್ರದ ಮುಂದೆ ಬಂದು affidavit ಕೊಟ್ಟವರೆಲ್ಲರಿಗೂ ನಾವು ಕಾರ್ಡ್ ಕೊಡುತ್ತೇವೆಂದು ಹೇಳಿ ಆನಂತರ

ಎಲ್ಲರಿಗೂ ಸಹ ಕಾರ್ಡ್‌ನ್ನು ಸಹ ಕೊಟ್ಟಿದ್ದೀರಿ. ಸರ್ಕಾರ ಅಧಿಕಾರಿಗಳು ಸಹ ಅದರಲ್ಲಿದ್ದಾರೆ. ಆ ಸಂದರ್ಭದಲ್ಲಿ ಈ ಅವಕಾಶವನ್ನು ಎಲ್ಲರು ಉಪಯೋಗಿಸಿಕೊಂಡಿದ್ದಾರೆ. ಆದರೆ, ನೆಮ್ಮದಿ ಕೇಂದ್ರದ ಬಗ್ಗೆ ಗೊತ್ತಿಲ್ಲದೆ ಇರುವಂಥ ಬಡವ ಇವತ್ತಿಗೂ ಕೂಡ ಆತ ಅಲ್ಲಿಯೇ ಇದ್ದಾನೆ. ಇಂಥವರಿಗೆ ಕಾರ್ಡ್ ಕೊಡದೆ ಎರಡೂ–ಮೂರು ವರ್ಷಗಳಿಂದ ತಳ್ಳಿಕೊಂಡು ಬರುತ್ತಿದ್ದೀರಿ. ಅರ್ಹರು ಅಲ್ಲಿಯೇ ಉಳಿದುಕೊಂಡಿದ್ದಾರೆ. ಅನರ್ಹರಿಗೆ ತಾವು ಪಡಿತರ ಚೀಟಿಯನ್ನು ಕೊಡುತ್ತಿದ್ದೀರಿ. ಎಷ್ಟು ವರ್ಷದವರಿಗೆ ಈ ರೀತಿ ಮಾಡುತ್ತೀರಿ? ಗ್ರಾಮ ಪಂಚಾಯತಿ ಮುಂದೆ ಹೋಗಿ online ಮೂಲಕ ಅರ್ಜಿ ಹಾಕಿ ಎಂದು ಈಗ ಹೇಳುತ್ತಿದ್ದೀರಿ. ಇಲ್ಲದೆ ಇರತಕ್ಕಂಥ ಕಾನೂನೆಲ್ಲವನ್ನು ಮಾಡಿದ್ದೀರಿ. ಅಲ್ಲಿಯೂ ಕೂಡ ಈಗ income certificate ತೆಗೆದುಕೊಂಡು ಬರಬೇಕೆಂದು ಹೇಳುತ್ತಿದ್ದೀರಿ. ಈಗ ಬರಗಾಲ ಬಂದಿದೆ. ಆದ್ದರಿಂದ, ಅರ್ಹರಿಗೆ ಅಕ್ಕಿಯನ್ನು ವಿತರಣೆ ಮಾಡುವ ಕೆಲಸವನ್ನು ದಯವಿಟ್ಟು ಮೊದಲು ಮಾಡಿ. ಆದರೆ, ಅನರ್ಹರನ್ನು ಇನ್ನೂ ತೆಗೆದು ಹಾಕಿಲ್ಲ. ಇವರು ನೆಮ್ಮದಿ ಕೇಂದ್ರ ಮುಂದೆ ಬಂದು ಪಡೆದುಕೊಂಡರು, ತಾವು ಪಾರ್ಲಿಮೆಂಟ್‌ಗೆ ಓಟು ಹಾಕಿಸಿಕೊಂಡಿರಿ ಈಗ ಗೆದ್ದು ಸಹ ಆಯಿತು. ಎಲ್ಲ ಕತೆ ಮುಗಿಯಿತು. ಆದರೆ, ಪಡಿತರ ಚೀಟಿಗೆ ಅರ್ಹರಿರುವವರ ಶಾಪ ನಿಮಗೆ ತಟ್ಟುತ್ತದೆ. ಬೇಕಾದರೆ ನೋಡಿ. ನನ್ನ ಕ್ಷೇತ್ರದಲ್ಲಿ ಸುಮಾರು 300 ಜನ ಪ್ರತಿ ದಿವಸ ಚೀಟಿ ಹಿಡಿದುಕೊಂಡು ಬರುತ್ತಾರೆ. ಅವರಿಗೆ ನೀವು ಪಡಿತರ ಕೊಡುತ್ತಿಲ್ಲ. ಅನರ್ಹರೆಲ್ಲರು ತೆಗೆದುಕೊಂಡು ತಿನ್ನುತ್ತಿದ್ದಾರೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಸರ್ಕಾರದ ಗಮನವನ್ನು ಬಹಳ ಗಂಭೀರವಾಗಿ ಸೆಳೆಯುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು ಮುಖ್ಯ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಈ ಸಮಸ್ಯೆ ಉದ್ಭವವಾಯಿತು. 2009ರಲ್ಲಿ ಲೋಕಸಭಾ ಚುನಾವಣೆ ಬಂದಾಗ ನೆಮ್ಮದಿ ಕೇಂದ್ರದಲ್ಲಿ ಸಿಕ್ಕವರೆಲ್ಲರಿಂದ affidavite ತೆಗೆದುಕೊಂಡು ಕಾರ್ಡ್ ಅನ್ನು ಕೊಟ್ಟರು. ಅನಂತರ ಇವುಗಳನ್ನು ತಾತ್ಕಲಿಕ ಎಂದು ಮಾಡಿದರು. ಈ ಸಂದರ್ಭದಲ್ಲಿ ಕಾರ್ಡ್ ಕೊಟ್ಟು ಚುನಾವಣೆಗೆ ಓಟು ಹಾಕಿಸಿಕೊಂಡರು. ತಾವು ಪದೇಪದೆ ಎದ್ದೇಳಬೇಡಿ. ಕೊನೆಯಲ್ಲಿ ತಾವು ಉತ್ತರ ಕೊಡಿ.

ಕು.ಶೋಭಾ ಕರಂದ್ಲಾಜೆ : ಮಾನ್ಯ ಅಧ್ಯಕ್ಷರೆ, ತಪ್ಪು ಮಾಹಿತಿ ಕಡತಕ್ಕೆ ಹೋಗಬಾರದೆಂಬ ಉದ್ದೇಶದಿಂದ ಉತ್ತರ ಕೊಡುವುದಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರ ಬಂದ ಮೇಲೆ ಸಮಸ್ಯೆ ಉದ್ಭವವಾಗಿಲ್ಲ. ಹಿಂದೆ ಕೋಮ್ಯಾಟ್ ಎಂಬ ಸಂಸ್ಥೆಗೆ ಯಾವುದೇ ಆಧಾರ ಇಲ್ಲದೆ ರೇಷನ್ ಕಾರ್ಡ್ ಕೊಡುವುದಕ್ಕೆ ಅವರಿಗೆ

ಅವಕಾಶ ಕೊಡಲಾಗಿತ್ತು. ಆ ಸಂದರ್ಭದಲ್ಲಿ ಸಚಿವರಾಗಿದ್ದವರು ಈಗ ಇಲ್ಲಿಯೇ ಇದ್ದಾರೆ. ಬಯೋಮೆಟ್ರಿಕ್ ಪಡೆದುಕೊಂಡು ಕಾರ್ಡ್ ಕೊಡಿ ಎಂದು ಆ ಸಂದರ್ಭದಲ್ಲಿ ಹೇಳಲಾಗಿತ್ತು. ಆದರೆ, ಅವರು ಏನನ್ನು ತೆಗೆದುಕೊಳ್ಳದೆ 1 ಕೋಟಿ 80 ಲಕ್ಷ ಕಾರ್ಡ್‌ಗಳನ್ನು ವಿತರಣೆ ಮಾಡಿದ್ದರಿಂದ ಈ ಸಮಸ್ಯೆ ಉದ್ಭವವಾಯಿತು. ಆದ್ದರಿಂದ, ನಮ್ಮ ಕಾಲದಲ್ಲಿ ಸಮಸ್ಯೆ ಉದ್ಭವವಾಗಿಲ್ಲವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅದು ಕೂಡ ನಿಜ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಒಂದು ಗಾದೆ ಮಾತು ಇದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : 2009ರಲ್ಲಿ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ನೆಮ್ಮದಿ ಕೇಂದ್ರದಲ್ಲಿ ಕೊಟ್ಟಿರುವ ಬಗ್ಗೆ ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಕೆ.ಎಂ.ಶಿವಲಿಂಗೇಗೌಡ : ಕೇವಲ ಛಾಪಾ ಕಾಗದ ತೆಗೆದುಕೊಂಡು ಆ ಸಂದರ್ಭದಲ್ಲಿ ಕೊಟ್ಟಿದ್ದಾರೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಅಫಿಡವಿಟ್ ಆಧಾರದ ಮೇಲೆ 27 ಲಕ್ಷ ಕಾರ್ಡ್‌ಗಳನ್ನು ತಾವು ಕೊಟ್ಟಿದ್ದೀರಿ. ಯಾವ ಆಧಾರದ ಮೇಲೆ ತಾವು 27 ಲಕ್ಷ ಕಾರ್ಡ್‌ಗಳನ್ನು ಕೊಟ್ಟಿರಿ? ಕೇವಲ ಚುನಾವಣೆಗೋಸ್ಕರ ಕೊಟ್ಟು ಈಗ income certificate ಕೊಡಿ ಮತ್ತೆ ಅದು ಕೊಡಿ, ಇದು ಕೊಡಿ ಎಂದು ಅವರನ್ನು ಓಡಾಡಿಸಿಕೊಂಡು ಈಗ ಅವರಿಗೆಲ್ಲ ಪಡಿತರ ವಿತರಣೆ ನಿಲ್ಲಿಸಿಬಿಟ್ಟು, ಕೋಮ್ಯಾಟ್, ಅದು ಇದು ಎಂದು ಇನ್ನೊಂದು ಹೇಳುತ್ತೀದ್ದೀರಿ. ತಾವು ನಾಲ್ಕು ವರ್ಷಗಳಿಂದ ಏನು ಮಾಡುತ್ತಿದ್ದೀರಿ? ಇದರ ಬಗ್ಗೆ ತನಿಖೆ ಮಾಡಿ. ನಾಲ್ಕು ವರ್ಷಗಳಿಂದ ಸುಮ್ಮನೆ ಇದ್ದೀರಿ.

ಕು.ಶೋಭಾ ಕರಂದ್ಲಾಜೆ : ನೀವು ಕೊಟ್ಟಿರುವ 1 ಕೋಟಿ 80 ಲಕ್ಷ ಕಾರ್ಡ್‌ಗಳನ್ನು ಪತ್ತೆ ಮಾಡಬೇಕಾಗಿದೆ. 1ಕೋಟಿ 80 ಲಕ್ಷ ಕಾರ್ಡ್‌ಗಳನ್ನು ನೀವು ಯಾರಿಗೆ ಕೊಟ್ಟಿದ್ದೀರಿ? ಪುಣ್ಯಾತ್ಮರು ಯಾರಿಗೆ ಕೊಟ್ಟಿದ್ದಾರೆಂಬುದನ್ನು ಪತ್ತೆ ಮಾಡಬೇಕಾಗಿದೆಯಲ್ಲ?

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಈಗ ಇರುವ ಕುಟುಂಬಕ್ಕಿಂತ ಹೆಚ್ಚು ಕಾರ್ಡ್‌ಗಳಿವೆ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಅದನ್ನು ಸರಿಪಡಿಸುವುದಕ್ಕೆ ಆಗದಿದ್ದರೆ ಸುಮ್ಮನೆ ಸರ್ಕಾರವನ್ನು ಏಕೆ ನಡೆಸುತ್ತೀರಿ? ನಾಲ್ಕು ವರ್ಷಗಳಿಂದ ಈ ಸಮಸ್ಯೆ ಇಟ್ಟುಕೊಂಡು ಮತ್ತೆ ನೆಮ್ಮದಿ ಕೇಂದ್ರದಿಂದ 27 ಲಕ್ಷ ಕಾರ್ಡ್‌ಗಳನ್ನು affidavit ಪಡೆದುಕೊಂಡು ಕಾರ್ಡ್ ಹಂಚಿದ್ದೀರಿ. ಆಗ ಅವರ ಹತ್ತಿರ Income Certificate and Residential Certificate ತೆಗೆದುಕೊಳ್ಳದೆ ಕೇವಲ ಒಂದು affidavit ಕೊಟ್ಟವರಿಗೆಲ್ಲ ಕಾರ್ಡ್ ಕೊಟ್ಟಿದ್ದೀರಿ. ಈಗ ಕಾರ್ಡ್ ಕೊಟ್ಟ ನಂತರ ಏನಾಗಿದೆ ಎಂದರೆ, ಈಗ Verification ಮಾಡುತ್ತಿರುವುದರಿಂದ ಅವರಿಗೆಲ್ಲ ತೊಂದರೆ ಆಗಿದೆ. ನಿಮ್ಮ ಕಾಲದಲ್ಲಿಯೇ ಸಮಸ್ಯೆ ಆಗಿದೆ. ಆದರೆ, ತಾವು ಕೇಂದ್ರ ಸರ್ಕಾರ ಮತ್ತು ಹಿಂದಿನ ಸರ್ಕಾರದ ಮಂತ್ರಿ ಬಗ್ಗೆ ತೋರಿಸತಕ್ಕಂಥದ್ದು ನಿಮ್ಮ ಜಾಣತನವನ್ನು ತೋರಿಸುತ್ತದೆ. ಈಗ ಇರುವ ಸಮಸ್ಯೆ ಕಡೆ ತಾವುಗಳು ಯೋಚನೆ ಮಾಡಿ

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾಲ್ಕು ವರ್ಷಗಳಿಂದ ಈ ಸಮಸ್ಯೆ ಹಾಗೆಯೇ ಇದೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಇಷ್ಟೊಂದು ಸಮಸ್ಯೆ ಇಟ್ಟುಕೊಂಡು ಸರ್ಕಾರ ನಡೆಸುತ್ತಿದ್ದೀರಿ. ಈಗ ಮುಗಿಯುವ ಹಂತ ಇದ್ದಾಗಲು ಸಹ ಅದೇ ಸಮಸ್ಯೆಯನ್ನು ಹೇಳುತ್ತಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಹಿಂದೆ ಮಹಾತ್ಮ ಗಾಂಧಿಯ ಫೋಟೋ ಹಾಕಿ ಕೇವಲ ಒಂದು ರೂಪಾಯಿಗೆ ಕಾರ್ಡ್ ಕೊಡುತ್ತಿದ್ದೆವು. ಈಗ ಕಂಪ್ಯೂಟರ್ ಒಂದು ಏತಕ್ಕೋಸ್ಕರ ಈ ರೀತಿಯಾಗಿದೆ? ಇವತ್ತಿನದಿವಸ ತಹಸೀಲ್ದಾರ್, ವಿಲೇಜ್ ಅಕೌಂಟೆಂಟ್ ಏನು ಮಾಡುತ್ತಿದ್ದಾರೆ? ಅವರಿಗೆ ಅಧಿಕಾರ ಕೊಡಿ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಹಿಂದಿನ ವಿಚಾರವನ್ನೇ ಹೇಳುತ್ತಿದ್ದಾರೆ ಹೊರತು ವಾಸ್ತವ ವಿಚಾರ ಹೇಳುತ್ತಿಲ್ಲ. ಬೇಕಾದರೆ ನಮ್ಮನ್ನು ಕರೆದರೆ, ಏನಾದರು ವಿಚಾರ ಇದ್ದರೆ ಅವರ ಮುಂದೆ ಚರ್ಚೆ ಮಾಡುತ್ತೇವೆ. ಹಾಗೆಯೇ ಅವರಿಗೆ ಏನಾದರು ಮಾಹಿತಿ ಬೇಕಾದರೆ ನಾವು ಕೊಡುತ್ತೇವೆ. ಹಾಗೆಯೇ ನಮ್ಮ ಅನುಭವವನ್ನು ಸರ್ಕಾರಕ್ಕೆ ಹೇಳುವುದಕ್ಕೆ ನಾವು ಸಿದ್ಧರಿದ್ದೇವೆ.

ಕು.ಶೋಭಾ ಕರಂದ್ಲಾಜೆ : ನಿಮ್ಮ ಅನುಭವದಿಂದಲೇ ಈ ರೀತಿಯಾಗಿದೆ ಎಂದು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಸರ್ಕಾರಕ್ಕೆ ಕೊಡುವುದಕ್ಕೆ ಆಗದೆ ಇದ್ದರೆ ಇದರ ಬಗ್ಗೆ ಒಂದು ಸದನ ಸಮಿತಿ ಮಾಡಲಿ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಎಲ್ಲರು ಕುಳಿತುಕೊಳ್ಳಿ. ಎಲ್ಲರು ಈ ರೀತಿಯಾಗಿ ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೆ?

(ಗೊಂದಲ)

ಕು.ಶೋಭಾ ಕರಂದ್ಲಾಜ್ : ಸಮಸ್ಯೆ ಆಗಲೇ ಪ್ರಾರಂಭವಾಗಿತ್ತು. ಆದ್ದರಿಂದಲೇ ಅವರು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ : ಈ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಎರಡು ಸಲ ಅವಕಾಶ ಕೇಳಿದ್ದೆವು. ಆದರೆ, ಎರಡೂ ಸಲ ಇದರ ಬಗ್ಗೆ ಚರ್ಚೆ ಆಗಲಿಲ್ಲ. ಈ ಸಲ ಆದರೂ ಅವಕಾಶ ಕೊಡಿ.

ಅಧ್ಯಕ್ಷರು : ನಿಯಮ 60ರ ಮೇಲೆ ನೀವು ಮಾತನಾಡುವ ಸಂದರ್ಭದಲ್ಲಿ ಇದರ ಬಗ್ಗೆ ಮಾತನಾಡಿ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್:- ಅನಾವಶ್ಯಕವಾಗಿ ಅವರ ಮೇಲೆ ಇವರ ಮೇಲೆ ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು:- ಅವರು ಹಿಂದೆ ಏನು ನಡೆಸಿದ್ದಾರೆಂಬುದನ್ನು ಹೇಳಬಾರದೆಂದು ಏನೂ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ಹಸಿರು ಕಾರ್ಡ್ ಕೊಡುವುದರಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅವರ ಕೈಯಲ್ಲಿ ಮಾಡುವುದಕ್ಕೆ ಆಗದೆ ಇದ್ದರೆ ಸದನ ಸಮಿತಿ ಮಾಡಿ ಯಾವ ರೀತಿಯಾಗಿ ಮಾಡಬೇಕೆಂದು ತೀರ್ಮಾನ ಮಾಡಿ ಆನಂತರ ಸರ್ಕಾರದ ಕಡೆಯಿಂದ ತೀರ್ಮಾನ ತೆಗೆದುಕೊಳ್ಳಲಿ.

ಅಧ್ಯಕ್ಷರು:-ಆಯಿತು. ತಾವು ಕುಳಿತುಕೊಳ್ಳಿ.

ಕು.ಶೋಭಾ ಕರಂದ್ಲಾಜೆ:- ಮಾನ್ಯ ಅಧ್ಯಕ್ಷರೆ, ತಪ್ಪು ಮಾಹಿತಿ ಕಡತಕ್ಕೆ ಹೋಗುತ್ತಿದೆ. ಆದ್ದರಿಂದ, ಮಹಿತಿಯನ್ನು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮಂತ್ರಿಗಳು ಸಹ ಇಲ್ಲಿಯೇ ಇದ್ದಾರೆ. ಆದರೆ, ಮೊನ್ನೆ ತನಕ ಈ ಇಲಾಖೆಯ ಮಂತ್ರಿಯಾಗಿದ್ದೆ. ಆದ್ದರಿಂದ, ಇದರ ಬಗ್ಗೆ ಕೆಲವು ಮಾಹಿತಿಯನ್ನು ಹೇಳುವುದಕ್ಕೆ ಬಯಸುತ್ತೇನೆ. 2006ರಲ್ಲಿ ಕೋಮ್ಯಾಟ್ ಎಂಬ ಒಂದು ಖಾಸಗಿ ಸಂಸ್ಥೆ ಬಯೋಮೆಟ್ರಿಕ್ ತೆಗೆದುಕೊಂಡು ರೇಷನ್ ಕಾರ್ಡ್ ಹಂಚುವುದಕ್ಕೆ ಒಂದು ಕಾನೂನನ್ನು ಮಾಡಲಾಗಿತ್ತು. ಈ ಸಂಸ್ಥೆಯವರು ಮಾಡಿದಂಥ ತಪ್ಪು

ಏನೆಂದರೆ, ಅವರು ಬಯೋಮೆಟ್ರಿಕ್ ತೆಗೆದುಕೊಂಡು ಕಾರ್ಡ್ ಅನ್ನು ಕೊಡಬೇಕಾಗಿತ್ತು. ಆದರೆ, ಅವರು ಯಾವುದೇ ರೀತಿಯ ಬಯೋಮೆಟ್ರಿಕ್ ತೆಗೆದುಕೊಳ್ಳದೆ, ಆ ಸಂದರ್ಭದಲ್ಲಿ ಯಾರ್ಯಾರು ಬಂದು ಅರ್ಜಿ ಸಲ್ಲಿಸುತ್ತಾರೆಯೋ ಅವರಿಗೆಲ್ಲ ಕಾರ್ಡ್ ಅನ್ನು ಕೊಟ್ಟರು. ಆಗ ಇಲಾಖೆಗೆ ಮತ್ತು ಕೋಮ್ಯಾಟ್ ಸಂಸ್ಥೆಗೆ ಯಾವುದೇ ಸಂಬಂಧ ಇರಲಿಲ್ಲ. ವಿಚಿತ್ರ ಏನೆಂದರೆ, ನಮ್ಮಲ್ಲಿ Food DD ಗಳು ಮತ್ತು Inspectors ಇದ್ದಾರೆ ಮತ್ತೆ Secretary ಇದ್ದಾರೆ ಮತ್ತುSecretariat ಇದೆ. ಆದರೆ, ಇವರಿಗೂ ಮತ್ತು ಆ ಕೋಮ್ಯಾಟ್ ಸಂಸ್ಥೆಗೆ ಯಾವುದೇ ಸಂಬಂಧ ಇರಲಿಲ್ಲ. ಆಗ ಅವರು ಎಷ್ಟು ಕಾರ್ಡ್ ಕೊಟ್ಟಿದ್ದಾರೆಂಬುದು ಗೊತ್ತಿರಲಿಲ್ಲ. ನಾನು ಬಂದ ಮೇಲೆ ರೇಷನ್ ಕಾರ್ಡ್‌ಗೆ ವಿದ್ಯುತ್ ಬಿಲ್ ಮತ್ತು ಮನೆಯ ತೆರಿಗೆ ನಂಬರ್‌ಗೆ ಪರಸ್ಪರ ಜೋಡಿಸುವ ತನಕ ನಮ್ಮ ರಾಜ್ಯದಲ್ಲಿ ಎಷ್ಟು ಕಾರ್ಡ್‌ಗಳಿವೆ ಎಂಬುದು ಗೊತ್ತರಲಿಲ್ಲ. 2001ರ ಜನಗಣತಿ ಪ್ರಕಾರ ನಮ್ಮ ರಾಜ್ಯದಲ್ಲಿ 1 ಕೋಟಿ 10 ಲಕ್ಷ ಕುಟುಂಬ ಗಳಿದ್ದವು. ಇದಕ್ಕೆ 1 ಕೋಟಿ 78 ಲಕ್ಷ ಕಾರ್ಡ್ ಕೊಟ್ಟಿದ್ದರು. ನಾನು ಕೇವಲ 11 ತಿಂಗಳು ಮಂತ್ರಿಯಾಗಿದ್ದೆ. ಆ ಸಂದರ್ಭದಲ್ಲಿ ಇನ್ನೂ ಕಾರ್ಡ್ ಕೊಡಬೇಕೆಂದು 20 ಲಕ್ಷ ಕಾರ್ಡ್‌ಗಳನ್ನು ಪ್ರಿಂಟ್ ಮಾಡಿ ಇಟ್ಟುಕೊಂಡಿದ್ದರು. ಇದಕ್ಕಿಂಥ ಮೊದಲು 1 ಕೋಟಿ 78 ಲಕ್ಷ ಕಾರ್ಡ್‌ಗಳನ್ನು ವಿತರಣೆ ಮಾಡಲಾಗಿತ್ತು. ನಾವೇನು ಮಾಡಿದ್ದೇವೆಂದರೆ, ನಗರ ಪ್ರದೇಶದಲ್ಲಿ ವಿದ್ಯುತ್ ಮೀಟರ್‌ನ ಆರ್.ಆರ್.ನಂಬರಿಗೆ ನಮ್ಮ ರೇಷನ್ ಕಾರ್ಡ್‌ನ್ನು ಜೋಡಿಸುವುದಕ್ಕೆ ಪ್ರಾರಂಭ ಮಾಡಿದೆವು. ಗ್ರಾಮೀಣ ಪ್ರದೇಶದಲ್ಲಿ ಮನೆ ತೆರಿಗೆ ಕಟ್ಟಿರುವ ರಶೀದಿಗೆ ಜೋಡಿಸುವುದಕ್ಕೆ ಪ್ರಾರಂಭ ಮಾಡಿದೆವು. ಆಗ ನಮಗೆ ಕಂಡು ಬಂದ ಸತ್ಯ ಏನೆಂದರೆ, ಒಂದೊಂದು ಮನೆಯಲ್ಲಿ 10,13,14,15 ಕಾರ್ಡ್‌ಗಳು ಸಿಕ್ಕಿಬಿದ್ದವು.

ಧಾರವಾಡ ಜಿಲ್ಲೆಯ ಒಂದು ಹಳ್ಳಿಯಲ್ಲಿ 275 ಮನೆಗಳು ಇವೆ. ಅಲ್ಲಿ ಬೇರೆ ಬೇರೆ ಮನೆಗಳಲ್ಲಿ ನಮಗೆ 400 ಕಾರ್ಡ್ ಸಿಕ್ಕಿತು. ಆ ಊರಿನಲ್ಲಿ ಒಟ್ಟು 1200 ಕಾರ್ಡ್‌ಗಳಿಗೆ ರೇಷನ್ ಹೋಗುತ್ತಿತ್ತು. ಅಂದರೆ ಯಾವುದೋ ಅಂಗಡಿಯವನ್ನು ಈ comat ಸಂಸ್ಥೆಯಿಂದ ಕಾರ್ಡ್ ತೆಗೆದುಕೊಂಡು ಪ್ರಿಂಟ್ ಮಾಡಿ ಇಟ್ಟುಕೊಂಡು ರೇಷನ್ ಪಡೆದುಕೊಳ್ಳುತ್ತಿದ್ದ. ಈ ರೀತಿಯ ವ್ಯತ್ಯಾಸವನ್ನು ನಾವು ಕಂಡ ಮೇಲೆ ಈ ಜೋಡಣೆಯನ್ನು ಶುರು ಮಾಡಿದ ಮೇಲೆ 30 ಲಕ್ಷ ಜನ ವಾರಸುದಾರರು ಬರಲಿಲ್ಲ. ಆಗ ಅವು ಇದ್ದಕ್ಕಿದ್ದಂತೆ ಕ್ಯಾನ್ಸಲ್ ಆದವು. ಈಗ ಏನು ಮಾಡಿದ್ದೇವೆಂದರೆ, ಬೆಂಗಳೂರಿನ ಯಶವಂತಪುರ ನನ್ನ ಕ್ಷೇತ್ರದಲ್ಲಿ ಆ comat ಸಂಸ್ಥೆಯವರು ಕಂಪ್ಯೂಟರ್ ಹಿಡಿದುಕೊಂಡು ರೇಷನ್ ಕಾರ್ಡ್ ಹಂಚುವುದಕ್ಕೆ ಬಂದರು ಕನಿಷ್ಟ ಮೂರು ಸಾವಿರ ಜನರು ಕ್ಯೂ

ನಿಂತರುಕಂಪ್ಯೂಟರ್ ಕೆಟ್ಟು ಹೋಯಿತು, ಅವರು ಓಡಿ ಹೋದವರು, ಮತ್ತೆ ಬರಲಿಲ್ಲ. ಅಂದರೆ ಆ ಕ್ಯೂ ನಲ್ಲಿ ರೇಷನ್‌ಕಾರ್ಡು ಸಿಗದೆ ಇದ್ದವರು ಕೂಡ ಇದ್ದರು. ಇದಕ್ಕೆ ನಾವು ಏನು ಮಾಡಿದ್ದೇವೆಂದರೆ, ರಾಜ್ಯದಲ್ಲಿ ಹೊಸದಾಗಿ ಯಾರಿಗೆ ರೇಷನ್ ಕಾರ್ಡು ಸಿಕ್ಕಿಲ್ಲ ಅವರಿಗೆ ಕೂಡಬೇಕೆಂದು ಹೇಳಿ on line ಮೂಲಕ ಅರ್ಜಿಯನ್ನು ಕರೆದೆವು. ಅವರ ಪೂರ್ತಿ ವಿವರವನ್ನು on line ಮೂಲಕ ಕೊಡಬೇಕು. ಗ್ರಾಮೀಣ ಪ್ರದೇಶದವರು ಗ್ರಾಮ ಪಂಚಾಯತಿಗೆ ಸಲ್ಲಿಸಬೇಕು. ನಗರದಲ್ಲಿ ಸೇವಾ ಕೇಂದ್ರ ಎಂದು ಮಾಡಿದೆವು. ಈಗ ಹೊಸದಾಗಿ ಮೂವತ್ತೊಂದು ಲಕ್ಷ ಅರ್ಜಿಗಳು ಬಂದಿವೆ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ನೀವು ನೆಮ್ಮದಿ ಕೇಂದ್ರದಿಂದ ಎಷ್ಟು ಕಾರ್ಡುಗಳನ್ನು ಕೊಟ್ಟಿದ್ದೀರಿ ಅದನ್ನು ಹೇಳಿ.

ಅಧ್ಯಕ್ಷರು: ನೀವು ಉತ್ತರವನ್ನು ಹೇಳುವುದಕ್ಕೆ ಬಿಡುವುದಿಲ್ಲ. ಅವರು ಕ್ಲಾರಿಫೈ ಮಾಡಲಿ. ಪೂರ್ತಿ ಹೇಳುವುದನ್ನು ಕೇಳಿ.

(ಗೊಂದಲ)

ಕು.ಶೋಭಾ ಕರಂದ್ಲಾಜೆ:- ತಪ್ಪು ಮಾಡಿ ಬಿಟ್ಟು ಕೇಳುವುದಕ್ಕೂ ಅವರಿಗೆ ತಾಳ್ಮೆ ಇಲ್ಲವೆಂದರೆ ಹೇಗೆ?. 1.10 ಕೋಟಿ ಕುಟುಂಬಗಳಿಗೆ ಆ comat ಸಂಸ್ಥೆಯವರು 1.70 ಕೋಟಿಕಾರ್ಡುಗಳನ್ನು ಹೇಗೆ ಕೊಟ್ಟರು.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ನೀವು ನೆಮ್ಮದಿ ಕೇಂದ್ರದಿಂದ ಎಷ್ಟು ಕಾರ್ಡುಗಳನ್ನು ಕೊಟ್ಟಿದ್ದೀರಿ ಅದನ್ನು ಹೇಳಿ ಮೇಡಮ್.

ಅಧ್ಯಕ್ಷರು:ಅವರು ಕ್ಲಾರಿಫೈ ಮಾಡಲಿ, ಆಮೇಲೆ ನೀವು ಕೇಳಿ..

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ನೆಮ್ಮದಿ ಕೇಂದ್ರದಲ್ಲಿ ಕಾರ್ಡ್ ಹಂಚಿಕೆ ಮಾಡುವುದಕ್ಕೆ ಅವಕಾಶ ಇತ್ತಾ?

(ಗೊಂದಲ)

ಕು.ಶೋಭಾ ಕರಂದ್ಲಾಜೆ:-ಈ comatನವರು ಮಾಡಿದ ತಪ್ಪಿನಿಂದಾಗಿ ಎಲ್ಲಾ ಶಾಸಕರು ಆಗ್ರಹ ಪಡಿಸಿದರು. ಇವತ್ತಿನವರೆಗೂ ಕಾರ್ಡ್ ಕೊಟ್ಟಿಲ್ಲ. ಅದರ ಸಲುವಾಗಿ ನಾವು ಕಾರ್ಡ್‌ನ್ನು ಕೊಡಬೇಕು ಎನ್ನುವ ಕಾರಣಕ್ಕಾಗಿ ಮಾಡಿದ್ದು.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ: ಇದಕ್ಕೆ ಅರ್ಧ ಗಂಟೆ ಕಾಲಾವಕಾಶ ಚರ್ಚೆಗೆ ಕೊಡಿ.

ಅಧ್ಯಕ್ಷರು:ಆಯಿತು, ಮುಗಿಸುತ್ತಾರೆ.

(ಗೊಂದಲ)

ಕು.ಶೋಭಾ ಕರಂದ್ಲಾಜೆ: ಮಾನ್ಯಅಧ್ಯಕ್ಷರೆ,ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

(ಗೊಂದಲ)

ಅಧ್ಯಕ್ಷರು: ಆಯಿತು ಬೇಗ ಮುಗಿಸುತ್ತಾರೆ.

ಶ್ರೀ ಟಿ.ಬಿ.ಜಯಚಂದ್ರ: ಇದು ಎಲ್ಲಿಂದ ಪ್ರಾರಂಭವಾಗಿದ್ದು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈ ನಾಲ್ಕುವರೇ ವರ್ಷದಲ್ಲಿ ಆಗಿರುವ ಗೊಂದಲಕ್ಕೆ ಕಾರಣ ಏನು ಗೊತ್ತೆ?Parliament Election ಬಂತು. ಆಗ ಮಾನ್ಯ ಯಡಿಯೂರಪ್ಪನವರು ಎಲ್ಲರಿಗೂ ಕಾರ್ಡ್ ಎಂದು ಹೇಳಿದರು flood gate open ಆಯಿತು. ಅದನ್ನು ಕಂಟ್ರೋಲ್ ಮಾಡುತ್ತಿದ್ದೀರಿ ನಾನು ಇಲ್ಲವೆಂದು ಹೇಳುತ್ತಿಲ್ಲ. ಆದರೆ ಇನ್ನೂ ಪರಿಹಾರವಾಗಲಿಲ್ಲ ಅಷ್ಟೆ.

ಕು.ಶೋಭಾ ಕರಂದ್ಲಾಜೆ: ಮಾನ್ಯಅಧ್ಯಕ್ಷರೆ, ಈ ನೆಮ್ಮದಿ ಕೇಂದ್ರದಲ್ಲಿ ಕಾರ್ಡ್ ಕೊಡುವುದಕ್ಕೆ ಏಕೆ ಓಪನ್ ಆಯಿತು ಎಂದರೆ, ನಾನು ನನ್ನ ಕ್ಷೇತ್ರದ ಬಗ್ಗೆಯೆ ಆ comat ದವನ ಕಾರ್ಡ್ ಕೊಡುವುದಕ್ಕೆ ಬಂದು ಓಡಿ ಹೋದನು, ಅವನಿಂದ ಕಾರ್ಡ್ ಕೊಡುವುದಕ್ಕೆ ಆಗಲಿಲ್ಲವೆಂದು ನಾನು ಹೇಳಿದೆ. ಈ ಕಾರಣಕ್ಕಾಗಿ ಅವತ್ತು ನಮ್ಮೆಲ್ಲರ ಕೂಗು ಇತ್ತು. ಯಾರಿಗೆ ರೇಷನ್ ಕಾರ್ಡ್ ಸಿಕ್ಕಿಲ್ಲ ಅವರಿಗೆ ಕೊಡಬೇಕು. ಅದಕ್ಕೆ ನಾವು self affidavate copy ಕೊಟ್ಟು ನೆಮ್ಮದಿ ಕೇಂದ್ರದಲ್ಲಿ ಕಾರ್ಡ್ ಕೊಡಬೇಕೆಂದು ಮಾಡಿದೆವು. ಇವತ್ತು ಯಾವುದು verification ನಡೆಯುತ್ತಿದೆ. ಯಾರು ಪಂಚಾಯತಿಗಳಿಗೆ ತಂದು ಕೊಟ್ಟಿದ್ದಾರೆ ಮೊನ್ನೆ on line ನಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಅದರ ಮೇಲೆ income certificate produce ಮಾಡಿ ಅಥವಾ ಯಾವುದಾದರೊಂದು ದಾಖಲೆ ಕೊಡಲೇಬೇಕು. BPL ಕಾರ್ಡ್ ಕೊಟ್ಟರೆ ಅವರು ಎಲ್ಲದಕ್ಕೂ eligible ಆಗುತ್ತಾರೆ. ಅದರಿಂದ ಸಂಧ್ಯಾ ಸುರಕ್ಷಾ ಪಡೆದುಕೊಳ್ಳುವುದು, ಭಾಗ್ಯಲಕ್ಷ್ಮಿ ಯೋಜನೆ ಪಡೆದುಕೊಳ್ಳಬಹುದು ಎಲ್ಲಾ facilities ಸಿಗುತ್ತದೆ. ಅದಕ್ಕಾಗಿ ಈ ವ್ಯತ್ಯಾಸ ಆಗಿದೆ ಎನ್ನುವ ಕಾರಣಕ್ಕಾಗಿ ಇವತ್ತು ನೆಮ್ಮದಿ ಕೇಂದ್ರದಲ್ಲಿ ಕೊಟ್ಟಿರುವ ಕಾರ್ಡ್‌ಗೂ ಮತ್ತು ಹೊಸದಾಗಿ ಏನು ಅರ್ಜಿ ಸಲ್ಲಿಸಿದ್ದಾರೆ ಇದಕ್ಕೆ income

certificate ಕೊಡಬೇಕು. Income certificate ಕೊಡುವುದಕ್ಕೆ ಇವತ್ತು ಏನು ಸಮಸ್ಯೆ ಇದೆ. ಏಕೆ ಇದರ ಬಗ್ಗೆವಾದ ಮಾಡುತ್ತೀರಾ? BPL card ತೆಗೆದುಕೊಳ್ಳಬೇಕಾದರೆ income certificate ಕೊಡಲೇಬೇಕು. ಇವತ್ತು ಅದನ್ನು ಕೊಡುವಂಥದ್ದನ್ನು ಮಾಡುತ್ತಿದ್ದಾರೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:2004 ರಲ್ಲಿ ಸಮ್ಮಿಶ್ರ ಸರ್ಕಾರ ಬಂದಿರುವಂಥ ಅವದಿಯಲ್ಲಿ 3 ರೂ.ಗಳ ದರದಲ್ಲಿ ಬಡವರಿಗೆ ಅಕ್ಕಿಯನ್ನು ವಿತರಣೆ ಮಾಡಬೇಕೆಂದು ಸರ್ಕಾರದ ಒಂದು ತೀರ್ಮಾನವಾಯಿತು. ಅದರಂತೆ 2005 ರಲ್ಲಿ ನಾನು ಆಹಾರ ಇಲಾಖೆಯ ಸಚಿವನಾಗಿದ್ದಂಥ ಸಂದರ್ಭದಲ್ಲಿ ಸಹಜವಾಗಿ ರಾಜ್ಯಾದ್ಯಂತಕಾರ್ಡ್‌ಗಳ ಬೇಡಿಕೆ ಇತ್ತು. ಹೊಸದಾಗಿ ಕಾರ್ಡ್‌ಗಳನ್ನು ವಿತರಣೆ ಮಾಡುವುದಕ್ಕೆ ರಾಜ್ಯಾದ್ಯಾಂತ ಬಡವರನ್ನು ಗುರುತಿಸಿ ಪುನರ್ ಸಮೀಕ್ಷೆ ಮಾಡಿ ವರದಿ ಮಾಡುವುದಕ್ಕೆ ಹೊಸ ಒಂದು ಮಾನದಂಡವನ್ನು ಮಾಡಿ ಗುರುತಿಸತಕ್ಕಂಥ ಕೆಲಸ ನಡೆಯಿತು. ಅದು ಆದ ಮೇಲೆ ಅವರಿಗೆ ಕಾರ್ಡ್‌ಗಳನ್ನು ವಿತರಣೆ ಮಾಡಬೇಕಾದರೆ ಯಾವ ರೀತಿ ಮಾಡಬೇಕೆಂದು ಹೇಳಿ ಒಂದು global tender ಕರೆದು comat ಎನ್ನುವ ಸಂಸ್ಥೆಗೆ ಕೊಡುವುದಕ್ಕೆ technical committee ಮತ್ತು Chief Secretary ಯವರ ಅಧ್ಯಕ್ಷತೆಯಲ್ಲಿ ತೀರ್ಮಾನ ಮಾಡಿದರು. ಅವರಿಗೆ ಯಾವುದೇ ಹಣಕಾಸಿನ ಜವಾಬ್ದಾರಿ ಇರಲಿಲ್ಲ. ಯಾರು ಪಡಿತರ ಚೀಟಿ ಪಡೆದುಕೊಳ್ಳುತ್ತಾರೆ ಅವರಿಂದ 40 ರೂಗಳನ್ನು ಒಂದು ಕಾರ್ಡುಗೆ ಪಡೆದುಕೊಂಡು photography ಮಾಡಿ Biometrics ಮಾಡಿ computerized photo copy ಕೊಡಬೇಕೆಂದು ಅವತ್ತು ಸರ್ಕಾರದ ಉದ್ದೇಶವಾಗಿತ್ತು. ಅದೆಲ್ಲಾ ಮಾಡಿ ಒಂದು ಹಂತಕ್ಕೆ ತಂದು ಕಾರ್ಡುಗಳನ್ನು ವಿತರಣೆ ಮಾಡುವಂಥ ಸಂದರ್ಭದಲ್ಲಿ ಆಗಿನ ಸಮ್ಮಿಶ್ರ ಸರ್ಕಾರ ಪತನವಾಯಿತು.

(ಗೊಂದಲ)

ಕು.ಶೋಭಾ ಕರಂದ್ಲಾಜೆ:Biometricsಆಗಿಲ್ಲ

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:ಏನು ನೀವು ಒಬ್ಬರೆ ಮಾತನಾಡಬೇಕೆ? ನಿಮಗೆ ಮಾತನಾಡುವುದಕ್ಕೆ ಬರುತ್ತದೆ, ಸುಮ್ಮನೆ ಕೇಳುತ್ತಾರೆಂದು, ಸದನದಲ್ಲಿ ಒಬ್ಬರೆ ಮಹಿಳಾ ಸಚಿವರು ಇದ್ದಾರೆಂದು ಅವರು ಇಷ್ಟೊಂದು dominate ಮಾಡುವುದಕ್ಕೆ ಹೊರಟು ಬಿಟ್ಟರೆ...2006 ರಲ್ಲಿ ಸಮ್ಮಿಶ್ರ ಸರ್ಕಾರ ಪತನವಾಯಿತು. ಇನ್ನೊಂದು ಸಮ್ಮಿಶ್ರ ಸರ್ಕಾರ ರಚನೆ ಆದಾಗ

ಈಗಿನ ಮಾನ್ಯ ಸಣ್ಣ ನೀರಾವರಿಯ ಸಚಿವರು ಆಗ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರಾಗಿ ಮಾನ್ಯ ಗೋವಿಂದ ಕಾರಜೋಳರವರು ಮುಂದುವರೆದರು. ಅಲ್ಲಿಂದ ಇಲ್ಲಿಯವರೆಗೆ 7 ವರ್ಷಗಳ ಕಾಲ ಇವರ ಸರ್ಕಾರದಿಂದಲೇ ಆಹಾರ ಇಲಾಖೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ 7 ವರ್ಷದಿಂದಲೂ ಈ ಕಾರ್ಡ್ ಸಮಸ್ಯೆಯನ್ನು ಒಂದು ಸಮಸ್ಯೆಯನ್ನಾಗಿಯೇ ಇಟ್ಟುಕೊಂಡು ಬಂದಿದ್ದಾರೆಯೇ ಹೊರತು ಇದಕ್ಕೆ ಪರಿಹಾರವನ್ನು ಕಂಡು ಹಿಡಿಯುವ ಕಾರ್ಯಕ್ರಮವನ್ನು ಮಾಡಲಿಲ್ಲ. ಇದು 7 ವರ್ಷದ ಕತೆ, tender ಕರೆದು comat ಸಂಸ್ಥೆಯವರ ಮೇಲೆ control ತೆಗೆದುಕೊಳ್ಳುವುದಕ್ಕೆ ಸರ್ಕಾರದಿಂದ ಆಗಲಿಲ್ಲವೆಂದರೆ ಹೇಗೆ... ನೀವು ಸ್ವಲ್ಪ ಕೇಳಿ.

(ಗೊಂದಲ)

ಕು.ಶೋಭಾ ಕರಂದ್ಲಾಜೆ: ನೀವು ಯಾವುದು ಆಧಾರವಿಲ್ಲದೆ ಕೊಟ್ಟಿದ್ದೀರಿ. ಕೊಟ್ಟಿರುವುದು ನೀವು ಅವರು Biometricsಎಲ್ಲಿಂದ ತೆಗೆದುಕೊಂಡಿದ್ದಾರೆ? ಅವರು ತೆಗೆದುಕೊಳ್ಳಲಿಲ್ಲ.

(ಗೊಂದಲ)

ಆಧ್ಯಕ್ಷರು: ಅವರು ಹೇಳುವವರೆಗೆ ಸ್ವಲ್ಪ ಕೇಳಿ

(ಗೊಂದಲ)

ಅಧ್ಯಕ್ಷರು:ಇದು ಬೇರೆ ವಿಷಯವಾಗಿರುವುದರಿಂದ ಚರ್ಚೆ ಮಾಡುವುದು ಈಗ ಬೇಡ ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:ನಾನು ಮಾತನಾಡುತ್ತಿದ್ದೇನೆ ಸ್ವಾಮಿ.

ಶ್ರೀ. ಗೋವಿಂದ ಎಂ. ಕಾರಜೋಳ: ಮಾನ್ಯ ಆಧ್ಯಕ್ಷರೆ, ಅವರು ನನ್ನ ಹೆಸರು ತೆಗೆದುಕೊಂಡಿರುವುದರಿಂದ ನಾನು ಮಾತನಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:ತಾವು ಮಾತನಾಡಬಹುದು. ನಮಗೆ ಮಾತನಾಡುವುದಕ್ಕೆ ಅವಕಾಶವಿಲ್ಲವೆಂದರೆ ಹೇಗೆ? ನಿಮ್ಮಿಂದ 6 ವರ್ಷದಿಂದ ಇಂತಹ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿಲ್ಲ ಮಾನ್ಯ ಅಧ್ಯಕ್ಷರೆ ಇದು ಯಾವುದೋ ಒಂದು ಹಂತಕ್ಕೆ ಹೋಗಿ ಸೆಟ್ರೈಟ್ ಆಗುತ್ತಿತ್ತು. ಈ ಸಮಸ್ಯೆ ಎಲ್ಲಿ ಉಲ್ಬಣವಾಯಿತೆಂದರೆ 2009ರ ಲೋಕಸಭೆಯ ಚುನಾವಣೆಯ ಪೂರ್ವದಲ್ಲಿ., ಬೇಲೂರು ಘೋಷಣೆ ಮಾಡಿದಾಗ ಸಂವಿಧಾನದಲ್ಲಿ individual beneficiary ಆಯ್ಕೆಮಾಡಬೇಕಾದರೆ ಗ್ರಾಮ ಸಭೆ

ಮೂಲಕ ಆಯ್ಕೆ ಮಾಡಬೇಕೆಂದು ಪಂಚಾಯತ್ ಆಕ್ಟ್‌ನ್ನು ಸಂವಿಧಾನದಲ್ಲಿಯೇ ನಾವು ಪ್ರಾವಿಷನ್ ಮಾಡಿದ್ದೇವೆ. ಬೇಲೂರು ಘೋಷಣೆಯಲ್ಲಿ 9 ವಿಷಯಗಳು ಪ್ರಸ್ತಾಪವಾಯಿತು. ಯಾವುದೇ ಒಂದು individual beneficiary ಆಯ್ಕೆ ಆಗಬೇಕಾದರೆ ಗ್ರಾಮಸಭೆಯಲ್ಲಿಯೇ ಆಗಬೇಕೆಂದು ಸಂವಿಧಾನದಲ್ಲಿ ಮಾಡಿರುವುದು. ಅದನ್ನು ನಾವು ಮಾಡಿರುವ ಒಂದು circular ಅಲ್ಲ. ಅದನ್ನು violate ಮಾಡಿ ನೆಮ್ಮದಿ ಕೇಂದ್ರದಲ್ಲಿ ಒಂದು affidavit ಕೊಟ್ಟು ಯಾರು ಬೇಕಾದರೂ ಕಾರ್ಡು ತೆಗೆದುಕೊಳ್ಳಬಹುದು, ಅವರ address ನೋಡುವುದಿಲ್ಲ. ಅವರ economics states ನೋಡುವುದಿಲ್ಲ. ಅವರ family ಹಿಂದೆ ಕಾರ್ಡ್ ಇತ್ತೋ ಇಲ್ಲವೋ ಎನ್ನುವ ಬಗ್ಗೆ verify ಮಾಡುವುದಿಲ್ಲ. ಒಂದು affidavit ಮತ್ತು ಒಂದು ಅರ್ಜಿ ಅವರಿಗೆ ತಾತ್ಕಾಲಿಕ ಕಾರ್ಡ್ ಕೊಟ್ಟು food 3 ತಿಂಗಳಿಗೆ distribute ಮಾಡಬೇಕು. ಅದನ್ನು ಮಾಡಿದ ಮೇಲೆ ಎಲ್ಲಾ duplicate ಆಯಿತು. Food allotment quota ಜಾಸ್ತಿ ಆಗಿ ಗೊಂದಲ ಶುರು ಆಗುವುದಕ್ಕೆ ಪ್ರಾರಂಭವಾಯಿತು. ಬರೀ 27 ಲಕ್ಷ ಕಾರ್ಡ್‌ಗೆ ಸ್ವಾಪ್ ಮಾಡಿ ಈಗ ನೀವು ಅವರಿಗೆ income certificate ಕೊಡಿ, residential certificate ಕೊಡಿ ನಿಮ್ಮ ಕುಟುಂಬದ ವಂಶವೃಕ್ಷ ಕೊಡಿ electrical billಕೊಡಿ ಈ ತರಹ ಪ್ರತಿಯೊಂದನ್ನು ಕೇಳಿಕೊಂಡು ಇದ್ದೀರಿ. ನಿಮ್ಮಿಂದ ಎಷ್ಟು ಹಳ್ಳಿಗಳಿಗೆ 3 ಫೇಸ್ ವಿದ್ಯುತ್ ಕೊಟ್ಟಿದ್ದೀರಿ? ನಿಮ್ಮಿಂದ ಕೊಡುವುದಕ್ಕಾಗುತ್ತಿಲ್ಲ. ಇವತ್ತು ಯಾವ ಗ್ರಾಮ ಪಂಚಾಯತಿ on line work ಆಗುತ್ತಿದೆ. On line ನಲ್ಲಿ ಯಾರು ಇವತ್ತು ಅರ್ಜಿಸಲ್ಲಿಸುತ್ತಾರೆ. ಅದೇ ಇವರಿಗೆ ಒಂದು ಕೆಲಸ.

(ಗೊಂದಲ)

ಕು.ಶೋಭಾ ಕಾರಂದ್ಲಾಜೆ: ತಪ್ಪು ಹೇಳುತ್ತಿದ್ದಾರೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್:ಅದಕ್ಕಾಗಿ ತಮ್ಮ ಕೈಯಿಂದ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುತ್ತಿಲ್ಲ. ಒಬ್ಬ ಗುತ್ತಿಗೆದಾರನನ್ನು ಕಂಟ್ರೋಲ್ ಇಟ್ಟುಕೊಳ್ಳುವುದಕ್ಕೆ ಆಗದಿದ್ದ ಅವನನ್ನು ದೊಡ್ಡದಾಗಿ ತೋರಿಸುವಂಥ ಒಂದು ವ್ಯವಸ್ಥೆ ಈ ಸರ್ಕಾರದಲ್ಲಿ ಇದೆ ಎಂದರೆ ಇದು ನಾಚಿಗೇಡಿನ ಸಂಗತಿ. ಇದಕ್ಕೆ ನಾನೇನು ಉತ್ತರ ಹೇಳುವುದಕ್ಕೆ ಆಗುವುದಿಲ್ಲ. ಏನಾದರೂ ಇದ್ದರೆ ತನಿಖೆ ಮಾಡಿ ಅವನನ್ನು ಜೈಲಿಗೆ ಕಳುಹಿಸಿ. ಅದು ಬಿಟ್ಟು ಸುಮ್ಮನೆ comat ಸಂಸ್ಥೆಯ ಮೇಲೆ ಹೇಳುವುದು. ಅವರಿಗೆ ಅಧಿಕಾರ ಸರ್ಕಾರ ಕೊಟ್ಟಿದ್ದು, ಅದನ್ನು withdraw ಮಾಡಿ ಅದನ್ನು ಬೇಗ ಸೆಟ್ರೈಟ್ ಮಾಡಿ.

ಶ್ರೀ. ಗೋವಿಂದ ಎಂ. ಕಾರಜೋಳ(ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು): ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಪಡಿತರ ವ್ಯವಸ್ಥೆ ಏಕೆ ಜಾರಿಗೆ ಬಂದಿತು ಎನ್ನುವುದು ಬಹಳ ಮುಖ್ಯ ಯಾರು ಬಡವರು ದಿನನಿತ್ಯ ಕೂಲಿ–ನಾಲಿ ಮಾಡಿ ಬದುಕುತ್ತಾರೆ, ಅವರ ಸಂಪಾದನೆಯಲ್ಲಿ ಇಡೀ ಕುಟುಂಬದ ಸದಸ್ಯರಿಗೆ ಅನ್ನ ಹಾಕಲಿಕ್ಕೆ ಸಾಧ್ಯವಿಲ್ಲವೋ ಅಂಥ ಬಡವರಿಗೆ ಮಾನ್ಯ ರಾಮಕೃಷ್ಣ ಹೆಗೆಡೆಯವರ ಸರ್ಕಾರದಲ್ಲಿ Green Card ಎಂದು ration cardಗಳನ್ನು ಕೊಟ್ಟು, 2 ರೂಪಾಯಿ ಕೆ.ಜಿ.ಅಕ್ಕಿ ಕೊಡತಕ್ಕಂಥದ್ದು ಪ್ರಾರಂಭ ಆಯಿತು. ಮುಂದೆ ಬರುಬರುತ್ತಾ ಆಹಾರಧಾನ್ಯಗಳು ತುಟ್ಟಿಯಾದಂತೆ ಬಡವರಲ್ಲದೇ ಶ್ರೀಮಂತರೂ ಸಹ ಇದನ್ನು ತೆಗೆದುಕೊಳ್ಳಬೇಕೆಂಬ ಪೈಪೋಟಿ ಪ್ರಾರಂಭವಾಯಿತು. ಅಷ್ಟೇ ಅಲ್ಲದೇ ಬಡವರಿಗೆ ಸಿಗತಕ್ಕಂಥ ಬೇರೆ ಬೇರೆ ಇಲಾಖೆ ಯೋಜನೆಗಳು, ಕೇಂದ್ರ ಸರ್ಕಾರದ್ದು ಆಗಿರಬಹುದು, ರಾಜ್ಯ ಸರ್ಕಾರದ್ದು ಆಗಿರಬಹುದು, ಅವರಿಗೆ ಮಾನದಂಡ ಏನು ಕೊಡಬೇಕಾಗಿದೆ ಎಂದರೆ, BPL card holder ಇರಬೇಕೆಂದು. ಆ ಕಾರಣದಿಂದಲೂ ರೇಷನ್ ಕಾರ್ಡ್ ತೆಗೆದುಕೊಳ್ಳುವುದು ಜಾಸ್ತಿ ಆಯಿತು. ಮುಂದಿನ ದಿನಮಾನಗಳಲ್ಲಿ ವೋಟಿನ ರಾಜಕಾರಣಕ್ಕಾಗಿ ನಾವೆಲ್ಲರೂ ಪೈಪೋಟಿ ಮಾಡಿದ್ದೇವೆ. ಇಲ್ಲಿರುವವರು ಯಾರು ಆ ಕಡೆ. ಈ ಕಡೆ ಎಂಬ ಪ್ರಶ್ನೆ ಬರುವುದಿಲ್ಲ. ನಾವೆಲ್ಲರೂ, ಯಾರ್ಯಾರು MLA ಆಗಬೇಕೆಂದು ಇರುತ್ತೇವೆ, ಜಿಲ್ಲಾಪಂಚಾಯತ್ ಸದಸ್ಯರು ಆಗಬೇಕೆಂದು ಇರುತ್ತೇವೆ, ಗ್ರಾಮ ಪಂಚಾಯತ್ ಸದಸ್ಯರು ಆಗಬೇಕೆಂದು ಇರುತ್ತೇವೆ, ಪೈಪೋಟಿಯ ನಂತರ ನಾನು ಎಷ್ಟು ಕಾರ್ಡ್ ಕೊಡಿಸಿದೆ, ನೀನು ಎಷ್ಟು ಕಾರ್ಡ್‌ಕೊಡಿಸಿದೆ, ಪೈಪೋಟಿ ಮೇಲೆ ಕಾರ್ಡ್ ಕೊಡಿಸುವುದು ಪ್ರಾರಂಭ ಆಯಿತು. ಆಗ ಏನಾಯಿತು ಎಂದರೆ ಬಡವರಿಗೆ ಅನ್ಯಾಯವಾಗುವುದಕ್ಕೆ ಶುರು ಆಯಿತು. ಕೆಲವು ಅನರ್ಹರೂ ಕೂಡ ತೆಗೆದುಕೊಂಡರು. ಇದು ನಡೆದು ಬಂದಿತು. ನಡೆದು ಬಂದ ಮೇಲೆ ಮಾನ್ಯ ಎಸ್.ಎಂ.ಕೃಷ್ಣರವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದು ಸಂದರ್ಭದಲ್ಲಿ ಚುನಾವಣೆ declare ಆದ ಮೇಲೆ 2004 ರ ಚುನಾವಣೆಗೆ ಹೋಗುವುದಕ್ಕೆ ಮುಂಚೆ temporarycard ಕೊಟ್ಟರು. ಸರ್ಕಾರ ಬದಲಾದ ಮೇಲೆ temporary card ಅನ್ನು ರದ್ದು ಮಾಡುವಂತೆ ಆಯಿತು. ರದ್ದಾದ ಮೇಲೆ ಅಂದು ಸನ್ಮಾನ್ಯ ಧರಂಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ Chief Secretary ರವರ ನೇತೃತ್ವದಲ್ಲಿ ಗೊಂದಲ ನಿವಾರಣೆಗಾಗಿ ಒಂದು ಸಮಿತಿ ಆಯಿತು. ಆಹಾರ ಮಂತ್ರಿಗಳಾಗಿ ಶ್ರೀ ಮಹದೇವಪ್ರಸಾದ್ ರವರು ನೇಮಕಗೊಂಡರು. Tender

ಕರೆದು Procedure ಪ್ರಕಾರ ಯಾವುದೋ ಸಂಸ್ಥೆಗೆ ಕೊಟ್ಟರು. ಕೊಟ್ಟ ಮೇಲೆ ಅವನೂ ಸ್ವಲ್ಪ ಗೊಂದಲ ಮಾಡಿಕೊಂಡ. ಅವನ ಹತ್ತಿರ ಏನೂ infrastructure ಇರಲಿಲ್ಲ. ಅವನು ಯಾವ ತಾಲ್ಲೂಕಿನಲ್ಲಿಯೂ ಹೋಗಿ ಪ್ರಾರಂಭ ಮಾಡಲಿಕ್ಕೆ ಅನುಕೂಲ ಆಗಲಿಲ್ಲ. ಅವರ ಹತ್ತಿರ trained staff ಇರಲಿಲ್ಲ. Biometric system ಬಗ್ಗೆ ಅವರಿಗೆ Knowledge ಇರಲಿಲ್ಲ. ಅಲ್ಲಿ ಅವರೇನು ಕಾರ್ಡ್ ಕೊಡಲಿಕ್ಕೆ ನೇಮಕ ಮಾಡಿಕೊಂಡಿದ್ದರು ಅವರ್‍ಯಾರು trained ಇರಲಿಲ್ಲ. ಈ ಕಾರಣಕ್ಕಾಗಿ ಅನೇಕ ಗೊಂದಲಗಳಾಗಿವೆ. ಮಹದೇವ ಪ್ರಸಾದ್‌ರವರು ಮಾಡಿದರು, ಕಾರಜೋಳರವರು ಮಾಡಿದರು, ಶೋಭಾ ಕಾರಂದ್ಲಾಜೆಯವರು ಮಾಡಿದರು ಎನ್ನುವುದು ಬಹಳ ಮುಖ್ಯವಲ್ಲ. ಇಲ್ಲಿ ಅನರ್ಹರು ಪಡೆದುಕೊಳ್ಳತಕ್ಕಂಥದ್ದು ಹೆಚ್ಚಾಗಿದೆ, ಅರ್ಹರಿಗೆ ಅನ್ಯಾಯವಾಗುತ್ತಿದೆ. ಅದನ್ನು ಸರಿಪಡಿಸಲು ಏನು ಮಾಡಬೇಕೆಂದು ಎರಡೂ ಕಡೆಯವರು ಕೂಡಿ ಚರ್ಚೆ ಮಾಡಿ ಬಗೆಹರಿಸಬೇಕಾದದ್ದು. ಈ ಸಮಸ್ಯೆಗೆ ಪರಿಹಾರ ಮಾಡಬೇಕಾದದ್ದು ಬಹಳ ಮಹತ್ವದ್ದಾಗಿದೆ.

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು): ,ಮಾನ್ಯ ಅಧ್ಯಕ್ಷರೆ ನಾನು ಏನು ಹೇಳುವುದಕ್ಕೆ ಪ್ರಾರಂಭ ಮಾಡಿದ್ದೆ ಅಂದರೆ, the very fact is insisting for income certificate. It leads to so many complications. ಒಂದು ಕಡೆ ಕರೆಂಟ್ ಇಲ್ಲ. ತಹಶೀಲ್ದಾರರಿಗೆ Income Certificate ಕೊಡುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಕರೆಂಟ್ ಇಲ್ಲದೇ machines ಓಡುತ್ತಿಲ್ಲ ಎಂದು ಹೇಳಿದರು. ನಿನ್ನೆ ನಾನು Reviewmeeting ಮಾಡಲು ನರಸೀಪುರಕ್ಕೆ ಹೋಗಿದ್ದೆ. ಅಲ್ಲಿ ಒಂದಷ್ಟು ಜನ ಬಂದು ಶಾಲೆ admission ಮಾಡಬೇಕಾಗಿರುತ್ತದೆ, ನಮಗೆ Income certificate ಕೊಡುತ್ತಿಲ್ಲ ಎಂದು ಹೇಳಿದರು. ನಾನು ತಹಶೀಲ್ದಾರರವರಿಗೆ ಏನಪ್ಪಾ ಎಂದು ಕೇಳಿದೆ. ಅವರು ಕರೆಂಟ್ ಇಲ್ಲಾ ಸಾರ್ ಅದಕ್ಕೋಸ್ಕರ ಮಾಡುವುದಕ್ಕೆ ಆಗುತ್ತಿಲ್ಲ ಎಂದು ಹೇಳಿದರು. ಆದ್ದರಿಂದ ಬ್ಯಾಟರಿ, UPS, Generator ಉಪಯೋಗಿಸಿ ಮಾಡಿಕೊಡಬೇಕು, ಕರೆಂಟ್ ಇಲ್ಲವೆಂದು ಹೇಳಿ ಶಾಲಾ ಮಕ್ಕಳೆಲ್ಲರೂ, ರೈತರೆಲ್ಲರೂ ಬಂದು ಕಾಯುತ್ತಾ ಕುಳಿತುಕೊಳ್ಳುವುದಕ್ಕಾಗುವುದಿಲ್ಲವೆಂದು ನಾನು ಸಲಹೆ ಕೊಟ್ಟು ಬಂದೆ. ಎಲ್ಲಾ ಕಡೆ ಈ ಸಮಸ್ಯೆ ಇದೆ. ಅದಕ್ಕೆ ನಾನೇನು ಹೇಳುತ್ತೇನೆಂದರೆ, ಬರಗಾಲ ಇದೆ ಈಗ ನೀವು Income certificate ಅನ್ನು insist ಮಾಡಲು ಹೋಗಬೇಡಿ. ಮೊದಲೇ ಬರಗಾಲ, ಊಟಕ್ಕೆ ಇಲ್ಲ, ಜನ ಸಾಯುತ್ತಿದ್ದಾರೆ, ಜಮೀನು ಇರುವವರೆಗೂ ಊಟಕ್ಕೆ ಇಲ್ಲ. ನೀವು ಇವೆಲ್ಲಾ

ಮಾಡಿಕೊಂಡು ಕುಳಿತರೆ ಬಹಳ ಕಷ್ಟವಾಗುತ್ತದೆ. ಮಾನ್ಯ ಜೀವರಾಜ್‌ರವರೆ ತಾವು ಈಗ ಆಹಾರ ಮಂತ್ರಿಗಳಾಗಿದ್ದೀರಿ, ಎಲ್ಲಾ ಕಾಲದಲ್ಲಿಯೂ ಕೂಡ ineligible ಬಂದು ನುಸುಳಿಕೊಂಡಿದ್ದಾರೆ. ಇಲ್ಲ ಎಂದು ಹೇಳುತ್ತಿಲ್ಲ. ಏಕೆಂದರೆ ಮಾನ್ಯ ಕಾರಜೋಳರವರು ಹೇಳಿದ ಹಾಗೆ, ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಹಸಿರು ಕಾರ್ಡ್ ಎಂದು 2 ರೂಪಾಯಿಗೆ ಕೆ.ಜಿ ಅಕ್ಕಿ ಕೊಡುವುದು ಶುರು ಆಯಿತು. ಅಲ್ಲಿಂದ ಇಲ್ಲಿಯವರೆಗೂ ಬಂದಿತು. ಆಮೇಲೆ 4.50 ರೂಪಾಯಿ ಆಯಿತು. ಆನಂತರ ನಾನು ಬಂದ ಮೇಲೆ 2004ರಲ್ಲಿ 3 ರೂಪಾಯಿ ಮಾಡಿದೆ. ಒಂದು ಕುಟುಂಬಕ್ಕೆ 3 ರೂಪಾಯಿಯಂತೆ 20 ಕೆ.ಜಿ ಅಕ್ಕಿ ಎಂದು ಮಾಡಿದೆ. ಆನಂತರ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಯಡಿಯೂರಪ್ಪನವರು ಉಪಮುಖ್ಯಮಂತ್ರಿ-ಗಳಾಗಿದ್ದಾಗ ಅದನ್ನು ತಲಾ 4 ಕೆ.ಜಿ ಮಾಡಿದರು. ಮತ್ತೆ 12 ವರ್ಷದ ಒಳಗೆ ಇರುವ ಮಕ್ಕಳಿಗೆ ಕೊಡುವುದಿಲ್ಲವೆಂದು ಮಾಡಿದರು. ಮೊದಲು ಆ ರೀತಿ ಇರಲಿಲ್ಲ. Irrespective of the age, ಒಂದು ಕುಟುಂಬಕ್ಕೆ 20 ಕೆ.ಜಿ ಅಕ್ಕಿ ಕೂಡಬೇಕೆಂದು ತೀರ್ಮಾನ ಮಾಡಿದ್ದೆವು. 3 ರೂಪಾಯಿಗೆ ಎಂದು ನಾನು ಹಣಕಾಸು ಮಂತ್ರಿಯಾಗಿದ್ದಾಗ introduce ಮಾಡಿದ್ದು. Ineligible ಎಲ್ಲರ ಕಾಲದಲ್ಲಿಯೂ ಸೇರಿಕೊಂಡಿದ್ದಾರೆ. ಪಾರ್ಲಿಮೆಂಟ್ ಚುನಾವಣಾ ಪೂರ್ವದಲ್ಲಿ ನೆಮ್ಮದಿ ಕೇಂದ್ರಗಳಿಂದ ಜಾಸ್ತಿ ಕೊಟ್ಟರು. ಆಗ in addition to the earlier ineligible 27 ಲಕ್ಷ ಹೆಚ್ಚಾದರು. ಹಾಗಾಗಿ 1 ಕೋಟಿ 80 ಲಕ್ಷ ಎಷ್ಟೋ ಆಯಿತು. ಕುಟುಂಬಗಳ ಸಂಖ್ಯೆಗಳಿಗಿಂಥ ಕಾರ್ಡ್‌ಗಳು ಹೆಚ್ಚಾಗಿ ಹೋಗಿಬಿಟ್ಟಿತು. ಆದ್ದರಿಂದ ineligible ತೆಗೆದುಹಾಕಬೇಕೆಂಬುದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ತೆಗೆದು ಹಾಕಿ. I have no objection. But the question is eligible ನವರಿಗೆ ತೊಂದರೆಯಾಗಬಾರದು. Indian penal Codeನಲ್ಲಿ basic principle under the Criminal jurisprudenceನಲ್ಲಿ ಏನು 99 ಜನ ತಪ್ಪಿತಸ್ಥರು ಬಿಡುಗಡೆಯಾದರೂ ಪರವಾಗಿಲ್ಲ, ಒಬ್ಬ innocent ಗೆ ಶಿಕ್ಷೆ ಆಗಬಾರದು ಎಂದು ಹೇಳುತ್ತಾರೆ. ಆದ್ದರಿಂದ ಇಲ್ಲಿ ಒಬ್ಬರೋ ಇಬ್ಬರೋ ಬಡವರು ineligible ಸೇರಿಕೊಂಡಿದ್ದರೆ we have no objection while removing the ineligible but not an eligible beneficiary. He should not be left out. That should be the criteria. ಅದನ್ನು ಮಾಡುವಾಗ ನೀವು ಮಾಡಿ we have no objection. ಆದರೆ ಇದ್ದಕ್ಕಿದ್ದ ಹಾಗೆ Income Cetificate ಮಾಡಿದ್ದೀರಲ್ಲಾ, ಬರಗಾಲನಿರ್ವಹಣೆ

ಆಗುವವರೆಗೂ ಇದನ್ನು insistಮಾಡುವುದಕ್ಕೆ ಹೋಗಬೇಡಿ. ಇಲ್ಲದೇ ಹೋದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಇದು ನನ್ನ ಸಲಹೆ. ಆನಂತರ ತಾವು ತಮ್ಮ ಅಧಿಕಾರಿಗಳ ಜೊತೆ ಕುಳಿತು ಕೂಲಂಕಷವಾಗಿ ಚರ್ಚೆ ಮಾಡಿ ಏನು ಮಾಡಬೇಕೆನ್ನುವ ತೀರ್ಮಾನಕ್ಕೆ ಬನ್ನಿ. Income Certificate ಗಳನ್ನೂ ಕೂಡ ತಹಶೀಲ್ದಾರವರು ಕೊಡುವುದಕ್ಕೆ ಆಗುತ್ತಿಲ್ಲ, becauseof the power problem. There are so many other problems. ಆದ್ದರಿಂದ ಅದನ್ನು ಕೂಡಲೇ ಮಾಡಬೇಕು. ನಾನು ಏಕೆ ಹೇಳುತ್ತಿದ್ದೇನೆಂದರೆ, ಒಂದು ಕಡೆ ಬರಗಾಲ. ಒಂದು ಕಡೆ ಬಡವರಿಗೆ ಈ ರೀತಿಯ ಸಮಸ್ಯೆಗಳು. ಅವರು ಎಲ್ಲಿ ಹೋಗಬೇಕು? ಅವರು ಬದುಕಲು ಏನು ಮಾಡಬೇಕು? Either they should resolve to criminal activities or go for the suicide. ಈ ಪರಿಸ್ಥಿತಿಗೋಸ್ಕರ ನಾನು ಸರ್ಕಾರಕ್ಕೆ ಈ ಎಚ್ಚರಿಕೆ ಕೊಡಲಿಕ್ಕೆ ಬಯಸುತ್ತಿದ್ದೇನೆ. ನಾನು ಈಗಾಗಲೇ ಪದೇ ಪದೇ ಹೇಳಿದ್ದೇನೆ, ಬರ ಪರಿಹಾರಕ್ಕೋಸ್ಕರ ಕೇಂದ್ರ ಸರ್ಕಾರವನ್ನು ನೋಡಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರ ಎಷ್ಟು ಹಣ ಕೊಡಬೇಕೋ ಅಷ್ಟು ಕೊಟ್ಟಿದ್ದಾರೆ. Finance Commission ನವರು ಏನೇನು ಶೀಫಾರಸ್ಸು ಮಾಡುತ್ತಾರೋ ಅದಕ್ಕನುಗುಣವಾಗಿ ಅವರು ಕೊಟ್ಟಿರುತ್ತಾರೆ. Depending upon the central team ಗೆ ಒಂದು report ಅದರ ಮೇಲೆ ಕೊಟ್ಟಿದ್ದಾರೆ. But they can't totally depend upon Government of india. Without spending a single rupee from their pocket, they cannot go on a busing Government of india. ಅದನ್ನು ಬಿಡಬೇಕು. ನಾನು ಹೇಳುವುದೇನೆಂದರೆ 5 ಸಾವಿರ ಕೋಟಿ ರೂಪಾಯಿಗಳನ್ನು ಬರ ಪರಿಹಾರ ಕೆಲಸಕ್ಕೆ ಕೊಡುತ್ತೇವೆ ಎಂದು ಬಜೆಟ್‌ನಲ್ಲಿಇಡಿ. We will support. ರೈತರ ಸಾಲವನ್ನೆಲ್ಲಾ ಮನ್ನಾ ಮಾಡುತ್ತೇವೆಂದು ಹೇಳಿ we will support ಎರಡು ವರ್ಷ ಸತತವಾಗಿ ಬರಗಾಲವಾಗಿದೆ. ಆ ಬಜೆಟ್ ಅನ್ನು amend ಮಾಡೋಣ. Finance Bill ತರುತ್ತೀರಿ. ಅದರಲ್ಲಿ ಎಲ್ಲೆಲ್ಲಿ ಕಟ್ ಮಾಡುವುದಕ್ಕೆ ಆಗುತ್ತದೆಯೋ ಅಲ್ಲಿ ಮಾಡೋಣ. ಕೊಟ್ಟಿರುವ ದುಡ್ಡನ್ನೇ ನೀವು ಖರ್ಚು ಮಾಡಿಲ್ಲ. ಕುಡಿಯುವ ನೀರಿಗೆ ಖರ್ಚು ಮಾಡಿಲ್ಲ. ಹೋದವರ್ಷ ಕುಡಿಯುವ ನೀರಿಗೆ 1,500 ಕೋಟಿ ರೂಪಾಯಿ ಇದ್ದರೆ, 1,180 ಕೋಟಿ ರೂಪಾಯಿಯನ್ನು ನೀವು ಖರ್ಚುಮಾಡಿದ್ದೀರಿ. 2010–11ರಲ್ಲಿ ಬರಗಾಲ ಇಲ್ಲದಿದ್ದಾಗNRGES ನಲ್ಲಿ 2,800 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಬರಗಾಲ ಬಂದಾಗ ಕೇವಲ.

1,900 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. Is this is the way? ನೀವು ಬರಗಾಲವನ್ನು tackle ಮಾಡುವುದು? ಕೇಂದ್ರ ಸರ್ಕಾರದಿಂದ ಕಳೆದ ವರ್ಷದಿಂದ ಇವತ್ತಿನವರೆಗೂ 700 ಕೋಟಿ ರೂಪಾಯಿಗಳನ್ನು STRF, NDRF ನಲ್ಲಿ ಬಂದಿದೆ ಆದರೆ ನೀವು ಹೋದ ವರ್ಷ ಖರ್ಚು ಮಾಡಿರುವುದು 182 ಕೋಟಿ ರೂಪಾಯಿಗಳು. ಈ ವರ್ಷ 320 ಕೋಟಿ ರೂಪಾಯಿಗಳು. ಈ ವರ್ಷ 238 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. Where is the money you have spent? This clearly shows this Government has miserably failed. ಇವರು ದುಡ್ಡನ್ನು ಖರ್ಚುಮಾಡದೆಯೇ ಕೇವಲ ಬಾಯಲ್ಲಿ 4200 ಹಳ್ಳಿಗಳಿಗೆ 2590 ಕೋಟಿ ರೂಪಾಯಿಗಳ Action Plan ಬಗ್ಗೆ ಹೇಳಿಕೊಂಡಿದ್ದಾರೆ. Action Plan ಪುಸ್ತಕದಲ್ಲಿ ಬರೆದಿಟ್ಟುಕೊಂಡರೆ ಕುಡಿಯುವ ನೀರು ಬರುತ್ತದೆಯೇ? 1200 problematic villages. Last year ಅದೇ ಉತ್ತರ, ಈ ವರ್ಷವೂ ಅದೇ ಉತ್ತರವನ್ನು ಕೊಟ್ಟಿದ್ದಾರೆ. ಹೋದ ಡಿಸೆಂಬರ್ ತಿಂಗಳಿನಲ್ಲಿ ನಾವು ಬರಗಾಲದ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಆಗ ಇದೇ ಉತ್ತರವನ್ನು ಕೊಟ್ಟಿದ್ದಾರೆ, even todayಅದೇ ಉತ್ತರವನ್ನು ಕೊಟ್ಟಿದ್ದಾರೆ. What happened to that action plan? Has it been put into action? Permanent ಆಗಿ ಕುಡಿಯುವುದಕ್ಕೆ ನೀರು ಕೊಡುವ ಸಲುವಾಗಿ 4500 ಹಳ್ಳಿಗಳಿಗೆ 2590 ಕೋಟಿ ರೂಪಾಯಿಗಳ action plan prepare ಮಾಡಿದ್ದೇವೆ. 348 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಈ ವರ್ಷ prepare ಮಾಡಿದ್ದೇವೆ. ನೀವು prepare ಮಾಡಿಕೊಂಡರೆ ಏನು ಪ್ರಯೋಜನ? You were able to spend Rs. 1500 crores which has been released by Government. This is the actual picture. ನಾನು Finance Minister ಆಗಿದ್ದವನ್ನು. ಎಷ್ಟು ಖರ್ಚಾಗುತ್ತದೆ, ಎಷ್ಟು ಹಣ ಬಿಡುಗಡೆಯಾಗುತ್ತದೆ ನನಗೆ ಗೊತ್ತಾಗುತ್ತದೆ. ನಾನು ಅಂತಿಮವಾಗಿ ಕುಡಿಯುವ ನೀರಿಗೆ ಇವರು ಎಷ್ಟೇ ಹಣವಾದರೂ ಖರ್ಚು ಮಾಡಲಿ, ಇವತ್ತು ಕುಡಿಯುವ ನೀರಿಗಾಗಿ ಹಾಹಾಕಾರವಿದೆ. ತಾವು ಮುಖಾಮುಖಾ ನೋಡುವುದಕ್ಕೆ ಹೋಗಬೇಡಿ. ಕುಡಿಯುವ ನೀರಿಗಾಗಿ ಹಣವನ್ನು ಖರ್ಚು ಮಾಡಿ. ಈ ಬಗ್ಗೆ ಎಂ.ಎಲ್.ಎ.ಗಳಿಗೆ ಹೇಳಿ ಪತ್ರವನ್ನು ಬರೆಯಿರಿ. Taskforceಗಳಲ್ಲಿ ನಿಮ್ಮ ನಿಮ್ಮ Constituencyಗಳಲ್ಲಿ ಎಷ್ಟು ಕುಡಿಯುವುದಕ್ಕೆ ನೀರು ಬೇಕೆಂದು ಶಿಫಾರಸ್ಸನ್ನು ಕಳುಹಿಸಿಕೊಡಿ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆಂದು

ಹೇಳಿ. ಅವರು ಮಾಡಿದ್ದರೆ ಅವರಿಗೆ ತಕ್ಷಣ ಬಿಡುಗಡೆ ಮಾಡಿ. Every week, what ever it...ಬಹಳ ನೋವಾಗುತ್ತದೆ ಹಳ್ಳಿಗಳಿಗೆ ಯಾವ ಅಧಿಕಾರಿಗಳು ಹೋಗಿ ನೋಡುವುದಿಲ್ಲ. ಯಾವ ಜಿಲ್ಲಾ ಮಂತ್ರಿಗಳು ಕೂಡ ಹೋಗಿ ನೋಡುವುದಿಲ್ಲ. ಈ ಸಂಬಂಧ ಒಂದು ಮೀಟಿಂಗ್ ಅನ್ನು ಸಹ ಮಾಡುವುದಿಲ್ಲ. ನಮ್ಮ ಜಿಲ್ಲಾ ಮಂತ್ರಿಗಳು ಕೂಡ ಒಂದು ವರ್ಷದಿಂದ ಕೆಡಿಪಿ ಮೀಟಿಂಗ್ ಮಾಡಿರುವುದಿಲ್ಲ. ಹೋದ ವರ್ಷ ಜುಲೈ ತಿಂಗಳಲ್ಲಿ ಅವರು ಕೆಡಿಪಿ ಮೀಟಿಂಗ್ ಮಾಡಿದ್ದರು. ಈಗ ಒಂದು ವರ್ಷವಾಗಿದೆ. ಇವತ್ತಿನವರಿಗೆ ಅವರು ಕೆಡಿಪಿ ಮೀಟಿಂಗ್ ಮಾಡಿದ್ದಾರಾ? ಎಂ.ಎಲ್.ಎ.ಗಳನ್ನು ಕರೆದು ಬರದ ಬಗ್ಗೆಯೂ ಕೂಡ ಮೀಟಿಂಗ್ ಅನ್ನು ಮಾಡಿರುವುದಿಲ್ಲ. How do they know the problems? How can you tackle the drought? This is the situation. ಬಹಳ pathetic situation ಇದೆ ಹಳ್ಳಿಗಳಲ್ಲಿ. No body has taken it seriously. Neither the officers nor the Government nor the district in charege Minister. I am sorry to make this type of statement. ಜನರು ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ಕೂಲಿಯನ್ನು ಹುಡುಕಿಕೊಂಡು ಟ್ರೈನ್‌ನಲ್ಲಿ ಬಂದು ಸುಮಾರು 55 ಜನರು ಸತ್ತರು. ಪಾಪ, ಅವರ ಹೆಂಡತಿಮಕ್ಕಳ ಗತಿ ಏನಾಗಬೇಕು? ಅವರ ಮಕ್ಕಳ ಗತಿ ಏನಾಗಬೇಕು? ಅವರ ವಿದ್ಯಾಭ್ಯಾಸ ಏನಾಗಬೇಕು. ಅವರನ್ನು ನೋಡಿಕೊಳ್ಳವವರು ಯಾರು? ಇವರ ಪಾಡಿಗೆ ಇವರು ಜಗಳ ಆಡಿಕೊಂಡು ಕುಳಿತಿದ್ದಾರೆ. ಹಿಂದೆ ಬರಗಾಲ ಬಂದಾಗ ಒಂದೊಂದು ಟೀಮ್ ಅನ್ನು ಮಾಡುತ್ತಿದ್ದರು. ರೆವಿನ್ಯೂ ಮಂತ್ರಿ, Agriculture Minister, Animal Husbandry Minister, Sericulture Minister, Horticulture Minister, ಎಲ್ಲರೂ ಸೇರಿಕೊಂಡು ಒಂದು ಟೀಮ್ ಅನ್ನು ಮಾಡಿ cabinet sub-committee ಮಾಡಿ every week ಪ್ರತಿ ಜಿಲ್ಲೆಗಳಿಗೂ ವಿಸಿಟ್ ಮಾಡಿ ಅಲ್ಲಿ information ತೆಗೆದುಕೊಂಡು ಸ್ಥಳದಲ್ಲಿಯೇ decision ತೆಗೆದುಕೊಂಡು ಮಾಡುತ್ತಿದ್ದರು. ನಾವೆಲ್ಲರೂ ಆಗ ಇದ್ದೇವು. This is the Experience I have undergone. I am again mentioning ನಾನು ಇದ್ದಾಗ ಒಂದು ಸಾರಿ ಬರಗಾಲ ಬಂದಿತ್ತು. ಆಗ ಮಾನ್ಯ ರಾಮಕೃಷ್ಣ ಹೆಗೆಡೆಯವರು ಮುಖ್ಯಮಂತ್ರಿಯಾಗಿದ್ದರು, ನಾನು ಮೇವನ್ನು ತರುವುದಕೋಸ್ಕರ ಪಂಜಾಬ್ ಮತ್ತು ಹರಿಯಾಣಕ್ಕೆ ಹೋಗಿದ್ದೆ. ಇವತ್ತು ಇವರ ಹತ್ತಿರ ಮೇವು ಇದೆಯಾ? 55 ಲಕ್ಷ ಟನ್ ಮೇವು ಇದೆ ಎಂದು ಹೇಳುತ್ತಿದ್ದಾರೆ ಮೇವನ್ನು ಎಲ್ಲಿಟ್ಟಿದ್ದೀರಿ? 55 ಲಕ್ಷ ಟನ್ ಮೇವು ಇದೆ ಎಂದು ಇಲ್ಲಿ ಲೆಕ್ಕವನ್ನು

ಕೊಟ್ಟಿದ್ದಾರೆ? ನಿಮಗೆ ನಾಚಿಕೆಯಾಗುವುದಿಲ್ಲವೆ? ಕಳೆದ ವರ್ಷ ಮಳೆ ಇಲ್ಲದೆ ಬೆಳೆಯೂ ಸಹ ಇಲ್ಲ. ರಬೀಕ್ರಾಪ್ ಇಲ್ಲ, ಖಾರೀಫ್ ಕ್ರಾಪ್ ಇಲ್ಲ. Where is the fodder? ನನ್ನ suggestion ಏನೆಂದರೆ, ಎಲ್ಲಿ ಸಿಗುತ್ತದೆಯೋ ಅಲ್ಲಿ ಕೂಡಲೆ 3ತಿಂಗಳಿಗೆ ಆಗುವಷ್ಟು ಮೇವನ್ನು ತಾವು ಖರೀದಿ ಮಾಡಬೇಕು. ಹೊರರಾಜ್ಯದಲ್ಲಿ ಸಿಗುತ್ತದೆಯೋ ಅಲ್ಲಿಂದ ಮೇವನ್ನು ತೆಗೆದುಕೊಂಡು ಬನ್ನಿ. ನೀವು ಮೇವು ಬ್ಯಾಂಕ್‌ಗಳನ್ನು ಮಾಡಿ. ಇವರು 98 ಮೇವು ಬ್ಯಾಂಕ್‌ಗಳನ್ನು ಮಾಡಿದ್ದೇವೆಂದು ಹೇಳುತ್ತಾರೆ. ರಾಜ್ಯದಲ್ಲಿ 747 ಹೋಬಳಿಗಳು ಇದೆ. ಆದ್ದರಿಂದ ಇವರು ಕನಿಷ್ಟ 700 ಆದರೂ ಮೇವು ಬ್ಯಾಂಕ್ ಅನ್ನು ಮಾಡಬೇಕಲ್ಲಾ. ನಿಮ್ಮ ಕೊಡಗು, ಮಂಗಳೂರು, ಉಡುಪಿ ಜಿಲ್ಲೆಯನ್ನು ಬಿಟ್ಟು ಮಾಡಬೇಕಲ್ಲವೇ? ಹೋಬಳಿಗೆ ಒಂದು ಮೇವು ಬ್ಯಾಂಕೆಂದು 700 ಮೇವು ಬ್ಯಾಂಕ್ ಅನ್ನು ಮಾಡಬೇಕಲ್ಲವೇ? ನೀವು ಅದನ್ನು ಮಾಡಿದ್ದೀರಾ? ಅದರಲ್ಲಿ 50% ಕೊಡಿ ಅದನ್ನು ಯಾರು ತೆಗೆದುಕೊಳ್ಳುವುದಕ್ಕೆ ಬರುತ್ತಾರೆ. ನಿಮ್ಮ ಹತ್ತಿರ ಯಾರು ಬರುತ್ತಾರೆ? ಒಂದು ಟನ್ ಮೇವಿಗೆ 4,500 ರೂಪಾಯಿಗಳೆಂದು ಮಾಡಿದ್ದೀರಿ, Do you know ನಾನು ನಿನ್ನೆ ದಿನ ನಮ್ಮ ಊರಿನಲ್ಲಿ ಕೇಳಿದೆ, ಒಂದು ಟನ್ ಹುಲ್ಲಿಗೆ 10,000 ರೂಪಾಯಿಗಳನ್ನು ಕೊಡಬೇಕು. ನೀವು ಈ ಬಗ್ಗೆ ಕೇಳಿದ್ದೀರಾ? ನಾನು ಈ ಬಗ್ಗೆ ನಮ್ಮ ಊರಿನಲ್ಲಿ ವಿಚಾರ ಮಾಡಿದೆ. ಒಂದು ಟನ್ ಹುಲ್ಲಿಗೆ 10,000 ರೂಪಾಯಿ ಮಾಡಿದ್ದಾರೆ. ಒಂದು ಹಸುಗೆ ಕನಿಷ್ಟ 10 ರಿಂದ 15 ಕೆ.ಜಿ. ಮೇವು ಬೇಕು. ಬೆಳೆ ಇಲ್ಲ, ಮಳೆ ಇಲ್ಲ, ಅವನು ಹುಲ್ಲು ಎಲ್ಲಿಂದ ತೆಗೆದುಕೊಂಡು ಬರುತ್ತಾನೆ. ಒಂದು ಕಂತೆ ಹುಲ್ಲಿಗೆ 8.00 ರೂಪಾಯಿ ಇದೆ. Why are you charging 50% ? why can't you give free of cost. fodderಗೆ ನೀವು ದುಡ್ಡನ್ನು ಖರ್ಚು ಮಾಡಿರುವುದಿಲ್ಲ. ನೀವು free of cost ಕೊಡಿ. ನೀವು ಪ್ರತಿ ಹೋಬಳಿಯಲ್ಲಿಯೂ stock ಮಾಡಿ. Fodder bank ಅನ್ನು ಮಾಡಿ. ನೀವು ಹುಲ್ಲನ್ನು ಪುಕ್ಕಟೆಯಾಗಿ ಕೊಡಿ. ಅವನು ಒಂದು ಟನ್ ಹುಲ್ಲಿಗೆ 10,000 ರುಪಾಯಿಗಳನ್ನು ಎಲ್ಲಿಂದ ತರುತ್ತಾನೆ? ಅದು ನೆಲ್ಲ ಹುಲ್ಲು, ಭತ್ತದ ಹುಲ್ಲು, ಒಣಹುಲ್ಲು, 10,000 ರೂಪಾಯಿ ಈ ಬಗ್ಗೆ ಅಧಿಕಾರಿಗಳಿಗೂ ಸಹ ಗೊತ್ತಾಗುವುದಿಲ್ಲ. ಏಕೆಂದರೆ ಅವರಿಗೆ ಹಳ್ಳಿಗಳಲ್ಲಿರುವ ಕಷ್ಟ ಸುಖಗಳು ಗೊತ್ತಿರುವುದಿಲ್ಲ. ಅನೇಕ ಜನರಿಗೆ, not all, ಇವರದು application of mind ಇಲ್ಲ. ಬೆಳಗಾಂನಲ್ಲಿ ಅಲ್ಲಿ ಅವರು ಕಬ್ಬನ್ನು ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಅಲ್ಲಿ ಕಬ್ಬು ಒಣಗಿ ಹೋಗಿಬಿಟ್ಟಿದೆ. ಕರ್ನಾಟಕದಲ್ಲಿ next year, food production ಬಹಳ ಕುಂಟಿತವಾಗುತ್ತದೆ. ಏಕೆಂದರೆ

ಮುಂಗಾರಿನಲ್ಲಿ ಸುಮಾರು 110 ಟನ್ oil seeds ಮತ್ತೆ cereals ಆಗಬೇಕು ಅದು ಆಗುತ್ತದೆಯೇ ಕತ್ತಿಯವರೆ? ಪರಿಣಾಮಗಳು ಹೇಗೆ ಆಗುತ್ತದೆಂದು ನೋಡಿ. ಮೇವು ಇಲ್ಲ, ಆಹಾರ ಇಲ್ಲ, ನಿಮ್ಮ GDP will go downlike anything in karnataka. ರೂಲಿಂಗ್ ಪಾರ್ಟಿಯವರು ಒಬ್ಬರು ಸದನದಲ್ಲಿ ಇಲ್ಲಾ ಎಲ್ಲಿ ಮೀಟಿಂಗ್ ಮಾಡುವುದಕ್ಕೆ ಹೋಗಿದ್ದಾರೆ ಗೊತ್ತಿಲ್ಲ. What is this? ನೋಡಿ ವಿರೋಧಪಕ್ಷದವರು ಇದ್ದಷ್ಟು ಸದಸ್ಯರು ಆಡಳಿತ ಪಕ್ಷದ ಕಡೆಯಲ್ಲಿ ಇಲ್ಲ. ತಾವು ಲೆಕ್ಕವನ್ನು ಹಾಕಿ. ಮಾನ್ಯ ಸಚಿವರಾದ ಅಶೋಕ್‌ರವರೆ, ಇಲ್ಲಿರುವವರನ್ನು ಕೌಂಟ್‌ಹಾಕಿ. ಈ ಬಗ್ಗೆ ವೋಟ್‌ಗೆ ಇಡೋಣವೇ?

ಅಧ್ಯಕ್ಷರು: ಜಾಸ್ತಿ ಸದಸ್ಯರು ಇದ್ದಾರೆ.

ಶ್ರೀ ಸಿದ್ದರಾಮಯ್ಯ(ವಿರೋಧ ಪಕ್ಷದ ನಾಯಕರು):ರೂಲೀಂಗ್ ಪಾರ್ಟಿಯವರು ಇದ್ದಾರೆಯೇ?

ಶ್ರೀ ಬಂಡೆಪ್ಪ ಕಾಶೆಂಪೂರ್: ಶಾಸಕಾಂಗ ಸಭೆಗೆ 50 ಮಂದಿ ಶಾಸಕರು ಗೈರು ಹಾಜರಾಗಿದ್ದಾರೆಂದು ಪೇಪರ್‌ನಲ್ಲಿ ಬಂದಿದೆ.

ಶ್ರೀ ಸಿದ್ದರಾಮಯ್ಯ :This is the type of government.ಯಡಿಯೂರಪ್ಪನವರ ಶಿಷ್ಯಂದಿರೆಲ್ಲರೂ ಹೊರಟು ಹೋಗಿದ್ದಾರೆ. ಅವರು ಇದ್ದಾರೆಯೇ? ನೀವು ಈಗ ಇಲ್ಲಿರುವವರನ್ನು ಲೆಕ್ಕ ಹಾಕಿ ನೋಡಿ. ಆಡಳಿತ ಪಕ್ಷದ ಸದಸ್ಯರನ್ನು ಹಾಗೂ ವಿರೋಧಪಕ್ಷದ ಕಡೆ ಇರುವ ಸದಸ್ಯರನ್ನು ಲೆಕ್ಕ ಹಾಕಿ. ಹಾಗಾದರೆ ಎಲ್ಲರೂ ಕೈ ಯನ್ನು ಎತ್ತೋಣವೇ?

ಅಧ್ಯಕ್ಷರು: ಅದು ಈಗ ಬೇಡ please.

ಶ್ರೀ ಸಿದ್ದರಾಮಯ್ಯ : ನಿಮ್ಮ ಕಡೆ ಇರುವ ಸದಸ್ಯರು ಕಡಿಮೆ ಇದ್ದರೆ ತಾವು ಏನು ಮಾಡುತ್ತೀರಿ, ನೀವೆಲ್ಲರೂ ರಾಜೀನಾಮೆಯನ್ನು ಕೊಟ್ಟುಬಿಡುತ್ತೀರಾ? O.K. Let us take a bet. ನಮಗಿಂತ ನಿಮ್ಮ ಕಡೆಯಲ್ಲಿ ಇರುವ ಸದಸ್ಯರು ಕಡಿಮೆ ಇದ್ದರೆ ನೀವು ಇಲ್ಲಿಯೇ ರಾಜೀನಾಮೆಯನ್ನು ಕೊಡಬೇಕು.

ಶ್ರೀ ಸಿದ್ದರಾಮಯ್ಯ : ಅದು ಬೇಡವೆ, ಇಲ್ಲಿ ನೀವು ಕುರ್ಚಿಗೆ, ರೂಮಿಗೆ, ಎಲ್ಲದಕ್ಕೂ ಕೂಡ ಜಗಳವನ್ನು ಆಡುತ್ತೀರಾ?

ಮಿಸ್ಟರ್ ಅಶೋಕ್ ಒಪ್ಪಿಕೊಳ್ಳೋಣ, ಇಲ್ಲ ನಾನು ರಾಜೀನಾಮೆ ಕೊಟ್ಟುಬಿಡುತ್ತೇನೆ. ಇಲ್ಲ ನೀವು ರಾಜೀನಾಮೆ ಕೊಟ್ಟುಬಿಡಿ. ಇಬ್ಬರಲ್ಲಿ ಒಬ್ಬರು. ಏನಿಲ್ಲ ನಮ್ಮನ್ನೂ ಸೇರಿಸಿ ನೀವು ಲೆಕ್ಕ ಹಾಕಿಕೊಂಡುಬಿಡಿ. ಆಯಿತುಪ್ಪಾ, take a bet.

ಶ್ರೀ ಉಮೇಶ್ ವಿ.ಕತ್ತಿ (ಕೃಷಿ ಸಚಿವರು): ಸಿದ್ಧರಾಮಣ್ಣ ನಿಮ್ಮ ನಾಯಕತ್ವಕ್ಕೂ ನಿಮ್ಮಲ್ಲಿ ವಿರೋಧವಿದೆ. ನಿಮ್ಮ ಹಿಂದೆ ಯಾರು ಇಲ್ಲ. ನೀವು ತಿಳಿದುಕೊಂಡು ವಿರೋಧ ಪಕ್ಷದ ನಾಯಕರಾಗಿ ಮಾತನಾಡುತ್ತಿದ್ದೀರಿ. ನಿಮ್ಮ ಹಿಂದೆ ಯಾರೂ ಇಲ್ಲ.

ಶ್ರೀ ಸಿದ್ದರಾಮಯ್ಯ : ನಾವು ಕತ್ತಿಯವರಿಗೋಸ್ಕರ ಮಾತನಾಡುತ್ತಿದ್ದೇವೆ. Not to these people.

ಶ್ರೀ ಉಮೇಶ್ ವಿ.ಕತ್ತಿ: ನಿಮ್ಮ ಹಿಂದೆಯೂ ಯಾರು ಇಲ್ಲವೆಂದೆ.

ಶ್ರೀ ಸಿದ್ದರಾಮಯ್ಯ : ಉಮೇಶ್ ಕತ್ತಿಯವರಿಗೋಸ್ಕರ ಮಾತನಾಡು-ತ್ತಿದ್ದೇನೆ. Agriculture Minister, ಈಶ್ವರಪ್ಪನವರಿಗೋಸ್ಕರ ಮಾತನಾಡು-ತ್ತಿದ್ದೇನೆ. He is the in-charge of Rural Development and revenue. Drinking water ಅವರ ಹತ್ತಿರವೇ ಇರುವುದು. Ruralನಲ್ಲಿ NREGS ಕೆಲಸಗಳನ್ನು ಕೊಡುವುದು ಅವರು. ನೀರು ಕೊಡುವುದು. ಅವರು ಅಗ್ರಿಕಲ್ಚರ್. ಅಲ್ಲಿ ಫಾಡರ್ ಮಿನಿಸ್ಟರ್ ಇಲ್ಲವೇ ಇಲ್ಲ. ನಾನೇಕೆ ಹೇಳಿತ್ತಿದ್ದೇನೆ ಎಂದರೆ ಪರಿಸ್ಥಿತಿ ಬಹಳ ಗಂಭೀರವಾಗಿ ಆಗಿಬಿಟ್ಟಿದೆ ಅದರಿಂದ ಸ್ವಲ್ಪ ಎಚ್ಚರವಾಗಲಿ ಎಂದು ಮಾತನಾಡಿದೆ ಅಷ್ಟೆ. ನಿಜವಾಗಿ ಮಾನ್ಯ ಅಧ್ಯಕ್ಷರೇ ಹಳ್ಳಿಗಾಡಿಗೆ ನೀವು ಹೋದರೆ ನಮಗೆ ಕಣ್ಣೀರು ಬರುತ್ತದೆ. Such a pathetic situation we are facing today. ನಾವು ಒಂದು ಲಕ್ಷ ರೂಪಾಯಿಗಳ ಬಜೆಟ್ ಮಂಡಿಸಿದ್ದೇವೆ. spend Rs. 5,000 crores. It is 0.5% of the total budget. Why do you worry? ಮಾನ್ಯ ಅಧ್ಯಕ್ಷರೆ,77 ಗೋಶಾಲೆಗಳನ್ನು ತೆಗೆದಿದ್ದೇವೆಂದು ಹೇಳುತ್ತಾರೆ. 66000 ಜಾನುವಾರುಗಳನ್ನು ನಾವು ರಕ್ಷಣೆ ಮಾಡಿದ್ದೇವೆ. Do you know, totalcattle population ನಲ್ಲಿ 66,000 ಎಂದರೆ less than 0.5%. ಏಕೆಂದರೆ ಜಾನುವಾರುಗಳು ಒಂದು ಕೋಟಿ ನಲವತ್ತು ಲಕ್ಷ ಇವೆ. ಇದರಲ್ಲಿ 66,000 ಎಂದರೆ less than may be 0.45%. ಇದು ಇವರು ಜಾನುವಾರುಗಳನ್ನು ರಕ್ಷಣೆ ಮಾಡಿರುವುದು. ಇವರು 66,000 ಜಾನುವಾರುಗಳನ್ನು ರಕ್ಷಣೆ ಮಾಡಿದ್ದೇವೆಂದು ಲೆಕ್ಕ. But ಅದನ್ನು total populationಗೆ ಹೋಲಿಕೆ ಮಾಡಿದರೆ 0.45%. ಅವುಗಳನ್ನು ಕೂಡ ಇತ್ತೀಚೆಗೆ ಮುಚ್ಚಿಬಿಟ್ಟಿದ್ದಾರೆ. ಮಾರ್ಚಿಯಿಂದ ಈಚೆಗೆ ಕೆಲವನ್ನೆಲ್ಲಾ ಮುಚ್ಚಿಬಿಟ್ಟಿದ್ದಾರೆ. ಅವರೇ ಹೇಳಿದ್ದಾರೆ ಕೆಲವು ಕಡೆ ಎಲ್ಲಾ ಮುಚ್ಚಿಬಿಟ್ಟಿದ್ದೇವೆಂದು. ಕೆಲವು ಜಿಲ್ಲೆಗಳಿಂದ ಒಂದೂ ತೆಗೆದಿಲ್ಲ. ಚಾಮರಾಜನಗರ ಜಿಲ್ಲೆಯಲ್ಲಿ not a single Goshale was opened. ಹೋದ ವರ್ಷ ಎಂಥ ಕೆಟ್ಟ drought ಇತ್ತು.

ಒಂದು ಗೋಶಾಲೆ ತೆಗೆದಿಲ್ಲ. ಕೆಲವು ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ತೆಗೆದಿಲ್ಲ. ನನ್ನ ಪ್ರಕಾರ 700 ಗೋಶಾಲೆಗಳನ್ನು ತೆಗೆಯಬೇಕಾಗಿತ್ತು. 700 ಮೇವು ಬ್ಯಾಂಕ್‌ಗಳನ್ನು ಮಾಡಬೇಕಾಗಿತ್ತು. ಅಲ್ಲಿ Horiculture Minister ಇದ್ದಾರೆ. ಕಬ್ಬು, ಪಪ್ಪಾಯಿ, ದ್ರಾಕ್ಷಿ, ದಾಳಿಂಬೆ, ಅಡಿಕೆ ಬೆಳೆಗಳನ್ನು ಒಣಗಿ ಹೋಗಿದೆ. ತೆಂಗು ಸುಳಿ ಹಾಳಾಗಿ ಹೋಗುತ್ತಿದೆ. ನಿಮ್ಮ ಸರ್ಕಾರವೇ ಒಣಗಿಹೋಗುತ್ತಿದೆ. ಅದಕ್ಕೆ ಈಗ ಕೊನೆಯಲ್ಲಿ ಹೇಳಿಬಿಡುತ್ತೇನೆ. ಎಷ್ಟೇ ದುಡ್ಡು ಖರ್ಚಾಗಲಿ, ಕುಡಿಯುವ ನೀರನ್ನು ಜನರಿಗೆ ಕೊಡಬೇಕು. ಇದು number one.ಕೆಲವು ಸಲಹೆಗಳನ್ನು ಕೊಟ್ಟುಬಿಡುತ್ತೇನೆ. ಏಕೆಂದರೆ ಬರಿ ಟೀಕೆ ಮಾಡುವುದೇ ಆಗಬಾರದಲ್ಲವೇ? ಕೂಡಲೇ ಶಾಶ್ವತವಾಗಿ ಬರ ಪರಿಸ್ಥಿತಿ ನಿಭಾಯಿಸಬೇಕಾದರೆ ನಿಮ್ಮ ಕೃಷಿ ಇಲಾಖೆ ಮಣ್ಣು, ನೀರು ಸಂಗ್ರಹಣೆ ಮತ್ತು ನಿರ್ವಹಣೆ ಮಾಡುವುದಕ್ಕೆ ಈಗಲೇ ಶುರು ಮಾಡಿ. ಬಿದ್ದ ನೀರು ಜಮೀನಿನಲ್ಲೇ ಉಳಿದುಕೊಳ್ಳುವಂತೆ ಮಾಡಿ ಬದುಗಳನ್ನು ಹಾಕಿ. ಕೃಷಿ ಹೊಂಡಗಳನ್ನು ತೆಗೆಸಿ. ಅಲ್ಲಿ ಬಿದ್ದಂಥ ನೀರು ಅಲ್ಲೇ ಉಳಿದುಕೊಳ್ಳಬೇಕು . ಆ ಮಣ್ಣು ಅಲ್ಲೇ ಉಳಿದುಕೊಳ್ಳಬೇಕು. ಬತ್ತಿ ಹೋಗದಂತೆ ನೋಡಿಕೊಳ್ಳಿ. You do it first. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನನ್ನ ಪ್ರಕಾರ ಪ್ರತಿ ಹಳ್ಳಿಯಲ್ಲಿ telemetric rain gauge ಇಡಿ. ಏಕೆಂದರೆ ರೈತರಿಗೆ ನಷ್ಟದ ಆಧಾರದ ಮೇಲೆ ವಿಮೆ ಮಾಡಬೇಕು. ಹವಾಮಾನ ಆಧಾರಿತ ವಿಮೆ ಮಾಡಿ. Number three, ಕೂಡಲೇ ಆ ವಿಮೆ ಹಣ ಬರಬೇಕು ಆ ರೀತಿ ಮಾಡಿ. Number four, ಮಳೆ ಆಗದೇ ಇದ್ದರೆ, ಬೆಳೆ ನಷ್ಟವನ್ನು ಗ್ರಾಮ ಮಟ್ಟದಲ್ಲಿ ತೆಗೆದುಕೊಳ್ಳಿ. ಏಕೆಂದರೆ ಎಲ್ಲಾ ಕಡೆ ಸಮಾನಾಂತರವಾಗಿ ಮಳೆ ಬೀಳುವುದಿಲ್ಲ. Instead of Hobli ಗ್ರಾಮ ಪಂಚಾಯಿತಿ as a unit ಮಾಡಿ. Make Grama Panchayat as a unit. ಕೂಡಲೆ ಅವರಿಗೆ ಪರಿಹಾರ ಕೊಡಿ. ಆಮೇಲೆ ಮಾನ್ಯ ಅಧ್ಯಕ್ಷರೆ ಈ ರೈತ ಸಂಪರ್ಕ ಕೇಂದ್ರಗಳನ್ನು strengthen ಮಾಡಿ. ನಿಮ್ಮ Agriculture Department,ನಿಮ್ಮ ಇಲಾಖೆಯಲ್ಲಿ ಕತ್ತಿಯವರೇ, ಸುಮಾರು 4100 ಹುದ್ದೆಗಳು ಖಾಲಿ ಇವೆ. ಅವುಗಳನ್ನು ಭರ್ತಿ ಮಾಡಿ, Extension work improve ಮಾಡಿ. Strengthen ಮಾಡಿ. That has not been done since so many years. You do it please. ನೀವು ಎಷ್ಟು appointment ಮಾಡಿದ್ದೀರಿ ಎನ್ನುವುದಿಲ್ಲ ಪ್ರಶ್ನೆ. How many vacancies are there still ? Is it not a fact that 4100 vacancies are there? It

is a fact. ಅವುಗಳನ್ನು ಭರ್ತಿ ಮಾಡಿ.Extension work strengthen ಮಾಡಿ. ಒಂದೇ ಸೂರಿನಡಿ Horticulture, Agriculture, Animal Husbandry ಎಲ್ಲಾ ಮಾಹಿತಿ ಕೂಡ ಸಿಗುವಂತೆ ಮಾಡಿ. ಮಾರ್ಕೆಟ್‌ನಲ್ಲಿ ಬೆಲೆ ಏನಾಗುತ್ತದೆಂದು ಮಾಡಲಿ, ಹವಾಮಾನ ಏನಾಗುತ್ತದೆಂದು ಮಾಡಲಿ. ಬೆಳೆ ಬೆಳೆಯಬೇಕೆನ್ನುವುದನ್ನು ಮಾಡಿಕೊಳ್ಳಲಿ. Let all the information be available in Raith Samparka Kendra. Is it not a relevant suggestion?Do it. Start now itself. ಸಿಬ್ಬಂದಿ ಭರ್ತಿ ಮಾಡಿ. ಆಮೇಲೆ ಎಲ್ಲಾ ಹೋಬಳಿ ಮಟ್ಟದಲ್ಲಿ ಗೋದಾಮುಗಳನ್ನು ನಿರ್ಮಾಣ ಮಾಡಿ. cold storage ನಿರ್ಮಾಣ ಮಾಡಿ. ಏಕೆಂದರೆ ರೈತ ಬೆಳೆದಂಥ ಪದಾರ್ಥಗಳನ್ನು ಮಾರಾಟ ಮಾಡದೆ ಹೋದರೆ ಅದನ್ನು ಸಂಗ್ರಹಣೆ ಮಾಡುವುದಕ್ಕೆ ಅವಕಾಶ ಇರಬೇಕು. ಪ್ರತಿ ಹೋಬಳಿ ಮಟ್ಟದಲ್ಲಿ ಗೋದಾಮುಗಳನ್ನು ಮಾಡಿ. Horticulture produce, ಅವೆಲ್ಲಾ perishable goods. ಅವು ನಾಶವಾಗದ ರೀತಿಯಲ್ಲಿ cold storage ಮಾಡಿ. I suggest, ನಾವು Milk Co-operative Society ಮಾಡಿದ್ದೇವಲ್ಲಾ ಆ ರೀತಿ ತರಕಾರಿ ಬೆಳೆಗಾರರ Co-operative Society ಮಾಡಿ. ನೀವು ಮಾಡಿ, ಮಂತ್ರಿಗಳು ಜವಾಬ್ದಾರಿ ತೆಗೆದುಕೊಳ್ಳಿ. ನಮ್ಮಲ್ಲಿ ಆಹಾರ ಪದಾರ್ಥಗಳನ್ನು ಇಡುವುದಕ್ಕೆ Cold storage ಎಲ್ಲಿದೆ?

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾಡಿ ಎಂದು proposal ಕೊಟ್ಟರೆ reject ಮಾಡುತ್ತಿದ್ದೀರಿ. ಎಲ್ಲಿ ಮಾಡಿದ್ದೀರಿ? ಗುಲ್ಬರ್ಗಕ್ಕೆ ಮಾಡಿ ಎಂದು Hopcoms ನಿಂದ ಪ್ರಪೋಸಲ್ ಕೊಟ್ಟರೆ ಇಲ್ಲಿಯವರೆಗೆ ಮಾಡಿಲ್ಲ. ಈಗಾಗಲೇ ಒಂದು ವರ್ಷವಾಯಿತು.

ಶ್ರೀ ಸಿದ್ಧರಾಮಯ್ಯ : ಹೋಬಳಿ ಮಟ್ಟದಲ್ಲಿ ಎಲ್ಲೆಲ್ಲಿ ತರಕಾರಿ ಬೆಳೆಯಲಿಕ್ಕೆ ಅವಕಾಶ ಇದೆ, Horticultureproduce ಮಾಡುತ್ತಿದ್ದಾರೆ ಅಲ್ಲೆಲ್ಲಾ ಕೂಡ ಶೈತ್ಯಾಗಾರಗಳನ್ನು ಮಾಡಿ. ಗೋದಾಮುಗಳನ್ನು ಮಾಡಿ. ರೈತರಿಗೆ ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರ ಬೆಂಬಲ ಬೆಲೆ ನಿಗದಿ ಮಾಡುತ್ತದೆ. ಮಾರುಕಟ್ಟೆ, costofproduction ಗೆ ಅನುಗುಣವಾಗಿ ನೀವು ಒಂದು ಬೆಂಬಲ ಬೆಲೆ ಕೊಡಿ. Whyareyou depending upon only on Government of India? ನೀವು ಹೆಚ್ಚಾಗಿ ಕೊಡಿ.

ಶ್ರೀ ಉಮೇಶ್ ವಿ.ಕತ್ತಿ (ಮಾನ್ಯ ಕೃಷಿ ಸಚಿವರು): ತೊಗರಿ, ಅರಿಶಿನ, ಭತ್ತದ ಬೆಳೆಗಳಲ್ಲಿ ಈಗಾಗಲೇ ನಾವು ಕೊಟ್ಟಿದ್ದೇವೆ. ಬರಿ ಅರಿಶಿನ ಬೆಳೆಗೆಂದಲ್ಲ,..

ಶ್ರೀ ಸಿದ್ಧರಾಮಯ್ಯ : ನೋಡಿ ನನ್ನ ಪ್ರಕಾರ market intervention ಗೆ you keep Rs.3,000 crores this year. ಕೇವಲ Agriculture ಬಜೆಟ್ ಮಂಡಿಸಿದರೆ ಸಾಲದು. Keep Rs.3,000 crores.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ರಾಜ್ಯ ಬಜೆಟ್‌ನಲ್ಲಿ ಅರಿಶಿನಕ್ಕೆ ಮಾತ್ರ ಮಾಡಿದ್ದಾರೆ. ತೊಗರಿಯನ್ನು ಅರ್ಧರ್ಧ ಮಾಡಿದ್ದಾರೆ, ಬರೀ ತೋರಿಕೆಗೆ ಮಾಡಿರುವುದು. ಇದ್ಯಾವುದನ್ನು Interest ನಿಂದ ಮಾಡಿಲ್ಲ, ಸುಮ್ಮನೆ ತೋರಿಸುವುದಕ್ಕೆ 10 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆಂದು ಹೇಳುವುದು, 5ಕೋಟಿ ರೂ.ಗಳನ್ನು ಖರ್ಚು ಮಾಡುವುದು ಮತ್ತೆ stop ಮಾಡುವುದು.

ಶ್ರೀ ಸಿದ್ಧರಾಮಯ್ಯ (ವಿರೋಧ ಪಕ್ಷದ ನಾಯಕರು) : ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರ ಕೊಡುವುದರ ಜೊತೆಗೆ ನೀವು ಕೊಡಿ. ಇವತ್ತು cost of production ಎಷ್ಟೆಂದು ನಿಗದಿ ಮಾಡಿ. ಅದಕ್ಕನುಗುಣವಾಗಿ ಕೇಂದ್ರ ಸರ್ಕಾರ ಕೊಡುವ ಬೆಂಬಲ ಬೆಲೆ ಜೊತೆಗೆ ನೀವು ಕೂಡ ಬೆಂಬಲ ಕೊಡಿ. ಮಾರಾಟ ಕೇಂದ್ರಗಳನ್ನು ತೆಗೆಯಿರಿ. ಪ್ರತಿ ಹೋಬಳಿ ಮಟ್ಟದಲ್ಲಿ ಒಂದು ಮಾರಾಟ ಕೇಂದ್ರವನ್ನು ಮಾಡಿ. ಎಲ್ಲಿ ಪದಾರ್ಥಗಳ ಬೆಲೆ ಬಿದ್ದು ಹೋಗಿದೆ, ಮಾರುಕಟ್ಟೆ intervene ಮಾಡಿ ಖರೀದಿಸಿ. ಎಲ್ಲಾ ಕಡೆ ಮಾಡಿ. You complete all irrigation projects within 5 years on priority programme. ಗೋಕಟ್ಟೆಗಳು more than 29,000 ನಮ್ಮಲ್ಲಿವೆ. ಮೈನರ್ ಇರಿಗೇಷನ್‌ನಲ್ಲಿ 3,524 ಕೆರೆಗಳಿವೆ. ಅವುಗಳಲ್ಲದೆ ನಮ್ಮ ಹಳ್ಳಿಗಳಲ್ಲಿ ಗೋಕಟ್ಟೆಗಳಿವೆ. ನಮ್ಮ ಹಿಂದಿನವರು ಕುಡಿಯುವ ನೀರಿಗೋಸ್ಕರ ಗೋಕಟ್ಟೆಗಳೆಂದು ಮಾಡಿದ್ದರು. ಅವುಗಳ ಹೂಳೆತ್ತಿಸಿ ಮತ್ತು ಎಲ್ಲ ಕೆರೆಗಳ ಹೂಳೆತ್ತಿಸಿ.

ಶ್ರೀ ಎಂ.ಬಿ.ಪಾಟೀಲ (ಬಬಲೇಶ್ವರ) : ಒಂದು ಲಕ್ಷ ಎರಡು ಕೋಟಿ ಬಜೆಟ್ ಮಂಡನೆ ಮಾಡಿದ್ದಾರೆ. ತಾವು ಹೇಳಿದ ಹಾಗೆ ಈ ವರ್ಷದಲ್ಲಿ ಎಲ್ಲಾ Irrigation projects right from krishna to cauvery ಮುಗಿಯುತ್ತದೆ.

ಶ್ರೀ ಉಮೇಶ್ ವಿ.ಕತ್ತಿ (ಕೃಷಿ ಸಚಿವರು) : ಕಳೆದ ವರ್ಷ ಹೂಳನ್ನು ಎತ್ತಿಸಿದ್ದೇವೆ.

ಶ್ರೀ ಸಿದ್ಧರಾಮಯ್ಯ : ಎಲ್ಲಿ ಮಂಡಿಸಿ ಮತ್ತೆ ಕೆಲಸವಾಗಬೇಕಲ್ಲ.

ಶ್ರೀ ಎಂ.ಬಿ.ಪಾಟೀಲ : ನಾವು Irrigationprojects ಕೂಡ ಕೇಳಿದ್ದೇವೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಇದನ್ನೆಲ್ಲ ನೀವು ಮಾಡದಿದ್ದರೆ, watertable ಇವತ್ತು ಕೆಳಗಡೆ ಹೊರಟು ಹೋಗಿದೆ. 1000, 1200, 1300, 1500 ಅಡಿ ಬೋರ್ ಕೊರೆದರು ಕುಡಿಯುವುದಕ್ಕೆ ನೀರಿಲ್ಲ. ಇವುಗಳ ಬಗ್ಗೆ ಏನೂ ಕಾರ್ಯಕ್ರಮವಿಲ್ಲ. ಕೃಷಿ ಬಜೆಟ್ ಮಂಡಿಸಿದ್ದೇವೆಂದು ಹೇಳುತ್ತೀರಿ, ಅದ್ಯಾಕೆ, ಖುಷಿಗೋಸ್ಕರ ಕೃಷಿ ಬಜೆಟಾ!Unless you implement all these programmes, farmers will not be benefited. Water management ಸರಿಯಾಗಿ ಮಾಡಿಸಿ, ಎಲ್ಲೆಲ್ಲಿ 18,000 ಬೋರ್‌ವೆಲ್‌ಗಳಿವೆ ಅದಕ್ಕೆಲ್ಲಾ ಡ್ರಿಪ್ ಇರಿಗೇಷನ್ ಮಾಡಿಸಿ. ರೈತರಿಗೆ ಸಹಾಯ ಮಾಡಿ. IntegratedAgriculture ಮಾಡಿಸಿ.

ಶ್ರೀ ಉಮೇಶ್ ವಿ.ಕತ್ತಿ : ಮಾಡಿಸಿದ್ದೇವೆ.

ಶ್ರೀ ಸಿದ್ಧರಾಮಯ್ಯ : ಎಲ್ಲಿ ಮಾಡಿದ್ಧೀರಿ ನಮ್ಮ ಕಡೆ ಎಲ್ಲೂ ಮಾಡಿಲ್ಲ. ನಿಮ್ಮೂರ ಕಡೆ ಏನಾದರೂ ಮಾಡಿದ್ದಿರೋ ಏನೋ ಗೊತ್ತಿಲ್ಲ. ನಮ್ಮ ಜಿಲ್ಲೆಗೆ ಹೋಗೋಣ ಬನ್ನಿ, ಎಲ್ಲಿ ಮಾಡಿದ್ದಿರೋ ನೋಡೋಣ. You please come after the Assembly, let us go to Mysore district...

ಶ್ರೀ ಉಮೇಶ್ ವಿ.ಕತ್ತಿ : ಮಾಡಿಸಿದ್ದೇವೆ. ಬೇಕಾದರೆ ನಿಮ್ಮನ್ನೂ ಕರೆದುಕೊಂಡು ಹೋಗಿ ತೋರಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ : ನಾನು ನೆನ್ನೆ ತಾನೆ ತಿರುಗಾಡಿಕೊಂಡು ಬಂದಿದ್ದೇನೆ. ಆಯಿತು ನಾನೂ ಬರುತ್ತೇನೆ ಹೋಗೋಣ. Take my suggestion. ಹೋಗಲಿ ಬರೆದುಕೊಳ್ಳಿ.

ಶ್ರೀ ಉಮೇಶ್ ವಿ.ಕತ್ತಿ : ಬರೆದುಕೊಂಡಿದ್ದೇನೆ. ನಮಗೆ ತಲೆ ಇದೆ.

ಶ್ರೀ ಸಿದ್ಧರಾಮಯ್ಯ : ಎಲ್ಲಿ ನೋಡಿಕೊಂಡು ಬರೆದುಕೊಂಡಿದ್ದೀರಿ? ನಿಮಗೆ ತಲೆ ಇದೆಯೇ? ನಿಮಗೆ ಜಗಳ ಆಡುವುದಕ್ಕೆ, ಖುರ್ಚಿ ಹಿಡಿಯುವುದಕ್ಕೆ, ಮನೆಗಳಲ್ಲಿ ಊಟ ಮಾಡುವುದಕ್ಕೆ, ರೆಸಾರ್ಟ್‌ಗಳಿಗೆ ಹೋಗುವುದಕ್ಕೆ ಹೋಟೆಲ್‌ಗಳಲ್ಲಿ meeting ಮಾಡುವುದಕ್ಕೆಲ್ಲಾ ನಿಮಗೆ ತಲೆ ಇದೆ. ಸಾವಯವ ಕೃಷಿ ಇದೆಯಲ್ಲ ಇದಕ್ಕೆ ಪ್ರಾಮುಖ್ಯತೆ ಕೊಡಿ. ಗೊಬ್ಬರ ಇದೆಲ್ಲಾ ನಾಮಕಾವಸ್ಥೆಯಾಗಿದೆ. ಯಾರೋ ಒಬ್ಬ ಆರ್.ಎಸ್.ಎಸ್.ನವರನ್ನು ಅಲ್ಲಿ ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಅವರಿಗೇನೂ ಗೊತ್ತಿಲ್ಲ. ಅನೇಕ ಜನರಿಗೆ ವ್ಯವಸಾಯ ಗೊತ್ತಿಲ್ಲ. ಅಲ್ಲೇನೂ ಕೆಲಸವಾಗುತ್ತಿಲ್ಲ. ಸುಮ್ಮನೆ ಲೆಕ್ಕ. ನೀವು

ಏನನ್ನು ಮಾಡದಿದ್ದರೆ givemore importance for de-silting ofGokatte and tanks, spend money on that. ಎಲ್ಲೂ ಮಾಡಿಲ್ಲ. ಇವತ್ತು 3,500 ಕೆರೆಗಳಲ್ಲಿ 2,500 ರಲ್ಲಿ ನೀರಿಲ್ಲ. ಯಾವ ಕೆರೆಗಳಿಗೆ ನೀರು ತುಂಬಿಸಿದ್ದೀರಿ? ಎಷ್ಟು ಕೆರೆಗಳು ತುಂಬಿದೆ ಹೇಳಿ ನೋಡೋಣ? ಯಾವ ಗೋಕಟ್ಟೆ ಮಾಡಿದ್ದೀರಿ ಹೇಳಿ? ನಮ್ಮ ಸಲಹೆಗಳನ್ನು ಇವರು ಗಂಭೀರವಾಗಿ ತೆಗೆದುಕೊಂಡರೆ permanentsolution ಆಗುತ್ತದೆ.ಕೊನೆಯಲ್ಲಿ ಒಂದೇ ಒಂದು ವಿಚಾರವಿದೆ. ಪ್ರವಾಹ ಬಂದು ಈ ಅಕ್ಟೋಬರ್‌ಗೆ ಮೂರು ವರ್ಷಗಳಾಯಿತು. ಇವತ್ತಿನವರೆಗೂ ಕೂಡ, 56,000 ಮನೆಗಳನ್ನು ಕಟ್ಟಿಸುತ್ತೇವೆಂದು ಮತ್ತು 889 ಹಳ್ಳಿಗಳನ್ನು ಮಾಡುತ್ತೇವೆಂದು ಹೇಳಿ, ಇವತ್ತಿನವರೆಗೆ 200 ಹಳ್ಳಿಗಳಾಗಿದೆಯೇ ವಿನಃ ಇನ್ನೂ 89 ಹಳ್ಳಿಗಳನ್ನು shift ಮಾಡುವುದಕ್ಕಾಗಿಲ್ಲeven after 3 years. 56,000 ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದು, ಅದರಲ್ಲಿ 36,000 ಮನೆಗಳು ಮಾತ್ರ ಆಸರೆ ಯೋಜನೆಯಡಿ complete ಆಗಿದೆ. ಹಣ ರಾಜ್ಯ ಸರ್ಕಾರದ್ದಲ್ಲ ಕೇಂದ್ರ ಸರ್ಕಾರದಿಂದ ಬಂದಿರುವುದು. ಪ್ರವಾಹಕ್ಕೆ 1594 ಕೋಟಿ ರೂ.ಗಳು ವಿಶೇಷವಾಗಿ ಬಂದಿದ್ದು, ನಂತರ 189 ಕೋಟಿ ರೂ.ಗಳಷ್ಟು ಹಣ ಬಂದಿದೆ. ಒಟ್ಟು 1,783 ಕೋಟಿ ರೂ.ಗಳಷ್ಟು ಹಣ ಬಂದಿದೆ. ಅದಲ್ಲದೆ ಸುಮಾರು 400 ಕೋಟಿ ರೂ.ಗಳಷ್ಟು ಹಣವನ್ನು ಜನ ವಂತಿಗೆ ಕೊಟ್ಟಿದ್ದರು. ಇಷ್ಟೆಲ್ಲಾ ಹಣವಿದ್ದರೂ ಕೂಡ ಇವತ್ತಿನವರೆಗೆ ಮನೆಗಳನ್ನು ಕಟ್ಟುವುದಕ್ಕಾಗಿಲ್ಲ. ಕೇಂದ್ರ ಸರ್ಕಾರ NREGS ನಲ್ಲಿ ಕೊಡುವ ಹಣ ಬಳಸುವುದಿಲ್ಲ. ಕುಡಿಯುವ ನೀರಿಗೆ ಹಣ ಬಳಸುವುದಿಲ್ಲ. SDRF ಮತ್ತು NDRF ನಲ್ಲಿ ಕೊಡುವುದನ್ನು ಮಾಡುವುದಿಲ್ಲ. ನೀವು ಮತ್ತೇನು ಮಾಡಿದ್ದೀರಿ? So,in all fronts, ಇವರ ಜಗಳದಿಂದ, ಅಧಿಕಾರದ ಕಚ್ಚಾಟದಿಂದ ಸ್ವಾರ್ಥದಿಂದ ಇವತ್ತು ರಾಜ್ಯದ ಜನ ಕಣ್ಣೀರಿನಲ್ಲಿ ಕೈ ತೊಳೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮತ್ತೊಂದು ಭೀಕರವಾದ ಬರಗಾಲ ಬರುವ ಸಾಧ್ಯತೆಗಳು ಜಾಸ್ತಿ ಇದೆ. ಮುಂಗಾರು ಹೋಯಿತು. I demand once again, ಇವತ್ತು ಯಾವ್ಯಾವ ಬೆಳೆಗಳು ಒಣಗಿ ಹೋಗಿವೆ ಅವುಗಳಿಗೆಲ್ಲ ಪರಿಹಾರ ಕೊಡಬೇಕು. ಸಾಲ ಮನ್ನಾ ಮಾಡಬೇಕು. One time measure, ಸಾಲ ಮನ್ನಾ ಮಾಡಿ. ರೈತರನ್ನು ಉಳಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ನೀವು ಎಷ್ಟು ದಿನ ಇರುತ್ತೀರೆಂದು ನನಗೆ ಗೊತ್ತಿಲ್ಲ. ನಿಮ್ಮ ಜಗಳವನ್ನು ನೋಡಿದರೆ ನಿಮ್ಮ ಸರ್ಕಾರ ಯಾವತ್ತು ಹೋಗುತ್ತದೆಂದು ಗೊತ್ತಿಲ್ಲ. ನೀವು ಇರುವವರೆಗೆ ಇದನ್ನು ಮಾಡಿ,

ಮಾಡುವುದಕ್ಕಾಗದಿದ್ದರೆ ಬಿಟ್ಟು ಹೋಗಿ. ಚುನಾವಣೆಗೆ ಹೋಗೋಣ. ದಯವಿಟ್ಟು ನಾನು ಅವರಿಗೆ ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಶ್ರೀ ಹೆಚ್.ಡಿ.ರೇವಣ್ಣ ನವರೆ ಮಾತನಾಡಿ.

ಶ್ರೀ ಉಮೇಶ್ ವಿ.ಕತ್ತಿ : ಕೇಂದ್ರ ಸರ್ಕಾರ ಕೊಟ್ಟಿಲ್ಲವೆಂದು ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ (ಹೋಳೆನರಸೀಪುರ): ಈಗ ನಾನು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಎರಡನ್ನೂ ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಕುಡಿಯುವ ನೀರು, ಬರಗಾಲ ಮತ್ತು ಗ್ರಾಮೀಣ ಪ್ರದೇಶದಲ್ಲಿ ಮುಂಗಾರು ಮಳೆ ಇಲ್ಲದೆ ರೈತರು ಬಿತ್ತನೆ ಮಾಡಿದ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ನಿಯಮ 60 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಾವು ಕೇಳಿದ್ದೆವು ಆದರೆ ನೀವು ನಿಯಮ 69 ರಡಿಯಲ್ಲಿ ಸಹಕಾರ ಮಾಡಿಕೊಟ್ಟಿದ್ದೀರಿ ಅದಕ್ಕೆ ನಾನು ಮೊದಲನೆಯದಾಗಿಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇವತ್ತು ಒಂದು ಕಡೆ ರಾಜ್ಯ ಸರ್ಕಾರ ಇನ್ನೊಂದು ಕಡೆ ಕೇಂದ್ರ ಸರ್ಕಾರ ಇವೆರಡರಿಂದ ನಮ್ಮ ಕರ್ನಾಟಕದ ರೈತಾಪಿ ಜನ ಕಣ್ಣೀರಿಲ್ಲಿ ಕೈತೊಳೆಯುವಂತಹ ಪರಿಸ್ಥಿತಿ ಬಂದಿದೆ. ಏಕೆಂದರೆ ಇವತ್ತು ನಿಮ್ಮವರು ಮೂರು ಬಾರಿ ನಿಯೋಗ ಹೋಗಿದ್ದಾರೆನ್ನುವುದು ಮಾಹಿತಿ ಪ್ರಕಾರ ತಿಳಿಯುತ್ತದೆ. ದಿನಾಂಕ : 26–11–2011 ರಂದು ಸುಮಾರು 2,605 ಕೋಟಿ ರೂ.ಗಳಿಗೆ ರಾಜ್ಯ ಸರ್ಕಾರದಿಂದ ಮೊದಲ ಭಿನ್ನವತ್ತಳಿಕೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದರಲ್ಲಿ 186 ಕೋಟಿ ರೂಗಳನ್ನು ಕೇಂದ್ರ ಸರ್ಕಾರದಿಂದ ಮಂಜೂರು ಮಾಡಿ ಕೊಟ್ಟಿದ್ದಾರೆ. 186 ಕೋಟಿ ರೂ.ಗಳಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಬಂದಿರುವುದು ಕೇವಲ 70 ಕೋಟಿ ರೂ.ಗಳು. ಅದೇ ರೀತಿ ಎರಡನೇ ಬಾರಿ ಸನ್ಮಾನ್ಯ ಹಿಂದಿನ ಮುಂಖ್ಯಮಂತ್ರಿಗಳು all party delegation ಪ್ರಧಾನ ಮಂತ್ರಿಗಳನ್ನು, ಕೇಂದ್ರ ಕೃಷಿ ಸಚಿವರನ್ನು, Finance Minister, Commerce Minister ಹೀಗೆ ಎಲ್ಲರನ್ನೂ ಭೇಟಿ ಮಾಡಿ, ಎರಡನೇ ಬಾರಿ 3,680 ಕೋಟಿ ರೂಪಾಯಿಗಳ ಬೇಡಿಕೆ ರಾಜ್ಯ ಸರ್ಕಾರದಿಂದ ಕೊಟ್ಟಿದ್ದರಲ್ಲಿ ಬಂದಿದ್ದು 282 ಕೋಟಿ ರೂ.ಗಳು. 282 ಕೋಟಿ ರೂ.ಗಳಿಗೆ ಅನುದಾನ ಕೊಟ್ಟಿದ್ದೀರಿ, ಅದರಂತೆ 282 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೀರಿ.

ಶ್ರೀ.ಜಗದೀಶ್ ಶೆಟ್ಟರ್‌ರವರು ಮಾನ್ಯ ಮುಖ್ಯಮಂತ್ರಿಗಳಾದ ಮೇಲೆ ಮೊನ್ನೆ ಒಂದು ನಿಯೋಗವನ್ನು ಕೇಂದ್ರ ಸರ್ಕಾರಕ್ಕೆ ಕರೆದುಕೊಂಡು ಹೋಗಿದ್ದರು. ಅವರು ಕೂಡ ಸುಮಾರು2,000 ಕೋಟಿ ರೂಪಾಯಿಗಳಿಗೆ ಬೇಡಿಕೆಯನ್ನು ಕೊಟ್ಟಿರಬೇಕು. ರಾಜ್ಯಕ್ಕೆ ಒಟ್ಟು ಎಷ್ಟು ಬಂದಿದೆಯೆಂದು ತಮ್ಮ ಗಮನಕ್ಕೆ ತರಬೇಕು. ಇಲ್ಲಿರುವ ಮಾಹಿತಿಗಳ ಪ್ರಕಾರ ದಿನಾಂಕ:16.7.2012 ರ

ಸೋಮವಾರದವರೆಗೂ ಲಭ್ಯವಾಗಿರುವುದು ಏಕೆಂದೆ 2011–12 ನೇ ಸಾಲಿನಲ್ಲಿ ಪ್ರಾರಂಭಿಕ ಶುಲ್ಕ 152 ಕೋಟಿ ರೂ.ಗಳೆಂದು ಇದೆ. ಅದರಲ್ಲಿ ಜಿಲ್ಲಾಧಿಕಾರಿಗಳಿಗೆ 2011–12 ನೇ ಸಾಲಿನಲ್ಲಿ ಬಿಡುಗಡೆಯಾಗಿರುವುದು 182 ಕೋಟಿ ರೂಪಾಯಿಗಳು. 2012–13 ನೇ ಸಾಲಿನಲ್ಲಿ ಬಿಡುಗಡೆಯಾಗಿರುವುದು 232 ಕೋಟಿ ರೂ.ಗಳು. ಹೀಗೆ ಒಟ್ಟು ಸುಮಾರು 571 ಕೋಟಿ ರೂ.ಗಳು ಜಿಲ್ಲಾಧಿಕಾರಿಗಳಿಗೆ ಬಿಡುಗಡೆಯಾಗಿದೆ. ಇದರಲ್ಲಿ ಖರ್ಚು ಮಾಡಿರುವುದೆಷ್ಟು? ಮಾಹಿತಿ ಪ್ರಕಾರ ಜಿಲ್ಲಾಧಿಕಾರಿಗಳ ಖಾತೆಯಲ್ಲಿಯೇ 222 ಕೋಟಿ ರೂ.ಗಳಿದ್ದು ಇದನ್ನು ನೋಡಿದರೆ ಇವತ್ತಿನವರೆಗೆ ಎಷ್ಟು ಖರ್ಚು ಮಾಡಿದ್ದಾರೆನ್ನುವುದು ತಿಳಿಯುತ್ತದೆ. ಸರ್ಕಾರ ಇವತ್ತು ಯಾವ ದೃಷ್ಟಿಯಿಂದ 571 ಕೋಟಿ ರೂ.ಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದೆ. ಬರಗಾಲ ಪ್ರಾರಂಭವಾಗಿ ಸುಮಾರು ಒಂದು ವರ್ಷವಾಗಿದೆ. ಈಗಾಗಲೇ ರಾಜ್ಯ ಸರ್ಕಾರ 123 ತಾಲ್ಲೂಕುಗಳಲ್ಲಿ ಬರಗಾಲವಾಗಿದೆಯೆಂದು ಡಿಕ್ಲೇರ್ ಮಾಡಿದ್ದಾರೆ. ಕೇಂದ್ರ ಸರ್ಕಾರದ ಮಾನ್ಯ ಕೃಷಿ ಸಚಿವರೇ ರಾಜ್ಯದ 148 ತಾಲ್ಲೂಕುಗಳಲ್ಲಿ ಬರಗಾಲವಿದೆಯೆಂದು ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗುತ್ತದೆಂದು ಈಗಾಗಲೇ ಒಂದು ಪ್ರಕಟಣೆಯಲ್ಲಿ ಕೊಟ್ಟಿದ್ದಾರೆ.

(ಈ ಹಂತದಲ್ಲಿಮಾನ್ಯ ಸಭಾಧ್ಯಕ್ಷರಾದ ಶ್ರೀ ಕೆ.ಜಿ.ಬೋಪಯ್ಯ ರವರು ಪೀಠದಿಂದ ನಿರ್ಗಮಿಸಿದ ನಂತರ ಮಾನ್ಯ ಉಪಸಭಾಧ್ಯಕ್ಷರಾದ ಶ್ರೀ ಎನ್. ಯೋಗೀಶ್ ಭಟ್ ರವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇಷ್ಟೇಲ್ಲಾ ಆಗಿರುವ ಕಾರಣದಿಂದ ನಾನು ಮೊದಲಿಗೆ ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇಲ್ಲಿರುವ ಮಾಹಿತಿ ಪ್ರಕರಾ ಕುಡಿಯುವ ನೀರಿಗಾಗಿ 1,161 ಕೋಟಿ ರೂ.ಗಳನ್ನು ನೀಡಿದ್ದು, ಅದರಲ್ಲಿ ಬಿಡುಗಡೆಯಾಗಿರುವ ಹಣ ಸುಮಾರು 161 ಕೋಟಿ ರೂ.ಗಳು. ಅದರಲ್ಲಿ 6,562 ಬೋರೆವೆಲ್‌ಗಳು, ಇದರಲ್ಲಿ ಸುಮಾರು 5,000 ಬೋರೆವೆಲ್‌ಗಳಲ್ಲಿ ನೀರು ಬಂದಿದೆ, ಉಳಿದ 1,500 ಬೋರೆವೆಲ್‌ಗಳಲ್ಲಿ ನೀರೆ ಇಲ್ಲ. ಬೋರೆವೆಲ್ ತೆಗೆದು ಇವತ್ತಿನವರೆಗೆ ಕೆಲವು ಕಡೆಗಳಲ್ಲಿ ಕುಡಿಯುವ ನೀರಿಗೆ TC ಕೊಟ್ಟಿರುವುದಿಲ್ಲ. ಮೂರ್‍ನಾಲ್ಕು ತಿಂಗಳುಗಳವರೆಗೆ TC ಕೊಟ್ಟಿಲ್ಲ. TC ಕೇಳುವುದಕ್ಕೆ ಹೋದರೆ 5,000 ರೂ.ಗಳನ್ನು ಕೊಡಿ, 2,000 ರೂ.ಗಳನ್ನು ಕೊಡಿ ಎಂದು ಕೇಳುತ್ತಾರೆ. ಬಾಕಿ ಏನಾದರೂ ಹಾಳಾಗಿ ಹೋಗಲಿ, ಕುಡಿಯುವ ನೀರಿಗೆ ಈ ರೀತಿ ಮಾಡುತ್ತಾರೆ. ಹೊಟ್ಟೆಗೆ ಏನಾದರೂ ಕೊಡವುದಿರಲಿ, ಇಂದು ಕುಡಿಯುವ ನೀರಿನ ಪರಿಸ್ಥಿತಿ ಹೀಗಿದೆ. ಸರ್ಕಾರ ಒಂದು ಕಡೆ ಕುಡಿಯುವ ನೀರಿಗೆ ಅನುದಾನ ಕೊಟ್ಟಿಲ್ಲ. ಬರಗಾಲ ಒಂದು ಕಡೆ. ಕುಡಿಯುವ ನೀರಿಗಾಗಿ 161 ಕೋಟಿ ರೂ.ಗಳನ್ನು

ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಅದರಲ್ಲಿ ಸುಮಾರು 6,562 ಬೋರೆವೆಲ್‌ಗಳನ್ನು ಕೊರೆಸಿದ್ದು, ಸುಮಾರು 1,131 ಬೋರೆವೆಲ್‌ಗಳು failure ಆಗಿವೆ. ಕೊಳವೆ ಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಅಳವಡಿಸಬೇಕೆನ್ನುವ ಕಾರಣದಿಂದ ಈಗಾಗಲೇ ಅರ್ಜಿ ಸಲ್ಲಿಸಿದ್ದು, ಅದರಲ್ಲಿ 1,385ಕ್ಕೆ ಪುನಃಶ್ಚೇತನ ಎಂದು ಹೇಳುತ್ತಾರೆ. ಇದಕ್ಕೆ ಕರೆಂಟ್ ಎಷ್ಟು ಕೊಟ್ಟಿದ್ದೀರಿ ಎಂದು ಕೇಳಿದರೆ ಪಂಪ್‌ಸೆಟ್ ಕೊಟ್ಟು ಅವರಿಗೆ ಕರೆಂಟ್ ಕೊಟ್ಟಿಲ್ಲ, T.C ಕೊಟ್ಟಿಲ್ಲ, ಒಂದು ಕಡೆ ಮೋಟರ್ ಇಲ್ಲ. ಒಂದು ಕಡೆ ಬೋರೆವೆಲ್ ಹಾಕುತ್ತಾರೆ. ಅದಕ್ಕೆ hand pump ಹಾಕಿ, 3–4–5 ತಿಂಗಳುಗಳಾದರೂ ಕುಡಿಯುವ ನೀರಿಗೆ ತೊಂದರೆ ಇದೆ. ಇದಲ್ಲದೆ ದನಕರುಗಳಿಗೆ ನೀರು ಬೇಕು. ನಿಮ್ಮ ಮಾಹಿತಿ ಪ್ರಕಾರ ರಾಜ್ಯದಲ್ಲಿರುವ ಕೆರೆಗಳು ಸಂಪೂರ್ಣವಾಗಿ ಬತ್ತಿಹೋಗಿವೆ. ರಾಜ್ಯದಲ್ಲಿ 3,524 minor irrigation tankಗಳಿದ್ದು ಸುಮಾರು 75% ಅಂದರೆ 2,500 ಟ್ಯಾಂಕುಗಳಲ್ಲಿ ನೀರೇ ಇಲ್ಲ, ಈ ವಿಚಾರವನ್ನು ನಾನು ಹೇಳುತ್ತಿಲ್ಲ. ನಿಮ್ಮ ಇಲಾಖಾ ಮಾಹಿತಿಪ್ರಕಾರ ಹೇಳುತ್ತಿದ್ದೇನೆ. more than 50% ಟ್ಯಾಂಕುಗಳಲ್ಲಿ ಒಂದು drop ನೀರಿಲ್ಲ, ದನಕರುಗಳಿಗೆ ಕುಡಿಯುವ ನೀರಿಲ್ಲ. ಉದ್ಯೋಗ ಖಾತ್ರಿ ಯೋಜನೆ ಇರಬಹುದು, ಹಿಂದಿನ ಸರ್ಕಾರಗಳಲ್ಲಿ ಕೆರೆಗಳ ಒಳಗೆ ಗೊಂಡಿಗಳನ್ನು ತೆಗೆಸಿ ದನಕರುಗಳಿಗೆ ಸುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದ್ದರು. ಸರ್ಕಾರ at-least ಈ ರೀತಿಯಾದರೂ ಮಾಡಲಿ. ಒಂದು ಕಡೆ ಮೇವಿಲ್ಲ, ಕುಡಿಯುವದಕ್ಕೆ, ದನಕರುಗಳಗೆ ಕರೆಯ ನೀರಿಲ್ಲ. ಇನ್ನೊಂದು ಕಡೆ ಜನಸಾಮಾನ್ಯರು 400–700 ಅಡಿಗಳವರೆಗೆ ಬೋರ್ ಕೊರೆಸಿದರೂ ನೀರು ಬರುವುದಿಲ್ಲ. ಸರ್ಕಾರ ಈ ವಿಷಯಗಳ ಬಗ್ಗೆ ಚಿಂತನೆ ಮಾಡಬೇಕು. 2011 ರ ನವೆಂಬರ್‌ನಲ್ಲಿಯೇ ಬರಗಾಲವೆಂದು ಘೋಷಣೆ ಮಾಡಿ ಸುಮಾರು 9 ತಿಂಗಳುಗಳ ಕಾಲವಾಯಿತು. ಕಳೆದ 9 ತಿಂಗಳಿನಿಂದ ಬರಗಾಲ ನಿವಾರಣೆಗಾಗಿ ರಾಜ್ಯ ಸರ್ಕಾರ ಏನೇನೂ ಕಾರ್ಯಕ್ರಮಗಳನ್ನು ರೂಪಿಸಿದೆಯೇ? ಉದ್ಯೋಗ ಖಾತರಿ ಯೋಜನೆಯಯಡಿಯಲ್ಲಿ ಕೆಲಸ ಕೊಟ್ಟಿದ್ದಾರೆಯೇ? ಇವತ್ತಿನವರೆಗೂ ಯಾವುದೇ ಜಿಲ್ಲಾ ಪಂಚಾಯಿತಿಯನ್ನು ತೆಗೆದುಕೊಂಡರೂ ಉದ್ಯೋಗ ಖಾತರಿ ಯೋಜನೆಯು ಏಳು ತಿಂಗಳಾದರೂ ಅಪ್ರೂವಲ್ ಆಗಿಲ್ಲ.ಉದ್ಯೋಗ ಖಾತರಿ ಯೋಜನೆಯಲ್ಲಿ ಏನಾದರೂಉದ್ಯೋಗ ಸಿಗುತ್ತದೆಯೆಂದು actionplanಏನಾದರೂ ಮಾಡಿದ್ದೀರ? ಜಿಲ್ಲಾ ಪಂಚಾಯಿತಿ ಇರಬಹುದು, ತಾಲ್ಲೂಕು ಪಂಚಾಯಿತಿ ಇರಬಹುದು, ಉದ್ಯೋಗ ಖಾತರಿ ಇರಬಹುದು ಕಳೆದ 7 ತಿಂಗಳಿನಿಂದ ಏನಾದರು action plan release ಆಗಿದೆಯೇ? ಕೇಂದ್ರ

ಸರ್ಕಾರ ಸುಮಾರು 600 ಕೋಟಿ ರೂ.ಗಳನ್ನು ಕೊಟ್ಟಿದೆಯೆಂದು ಹೇಳುತ್ತಾರೆ. 172 ಕೋಟಿ ರೂ.ಗಳು ಜಿಲ್ಲಾಧಿಕಾರಿಯವರ PD ಅಕೌಂಟ್‌ನಲ್ಲಿದೆ. ರಾಜ್ಯದಲ್ಲಿ ಜಿಲ್ಲಾವಾರು ಕರೆದು ಚರ್ಚಿಸಬೇಕು. ರಾಜ್ಯದಲ್ಲಿರುವ 30 ಜಿಲ್ಲೆಗಳಲ್ಲಿ 29 ಜಿಲ್ಲೆಗಳಲ್ಲಿನ ಸುಮಾರು 151 ತಾಲ್ಲೂಕುಗಳಲ್ಲಿ ಬರಗಾಲವಿದೆಯೆಂದು ಹೇಳುತ್ತಾರೆ. 151 ತಾಲ್ಲೂಕು, ಸುಮಾರು 500 ಹೋಬಳಿಗಳೆಂದು ನಿಮ್ಮ ಇಲಾಖಾ ಮಹಿತಿ ಪ್ರಕಾರ ಹೇಳುತ್ತಿದ್ದೇನೆ. ಇವತ್ತು ಏನಾಗಿದೆಯೆಂದರೆ 29 ಜಿಲ್ಲೆ, 151 ತಾಲ್ಲೂಕು, 506 ಹೋಬಳಿಗಳಲ್ಲಿ ಅಂದರೆ more than 86%, 224 ವಿಧಾನಸಭಾ ಕ್ಷೇತ್ರಗಳಲ್ಲಿಸಂಪೂರ್ಣವಾಗಿ drought ಇದೆ ಎಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗಲಾದರೂ ಕಂದಾಯ ಸಚಿವರನ್ನೊಳಗೊಂಡಂತೆ ನಾಲ್ಕೈದು ಜನರ ನಿಯೋಗವೊಂದು ಕೇಂದ್ರಕ್ಕೆ ಹೋಗಲಿ. ಕಳೆದ ಸಾರಿ ಕೇಂದ್ರಕ್ಕೆ ನಿಯೋಗ ಹೋದಾಗ ಹಿಂದಿನ ಮುಖ್ಯಮಂತ್ರಿಗಳು ಹಾಗೂ ಕೆಲವು ಸಚಿವರೂ ಕೂಡ ಇದ್ದರು. ಅಲ್ಲಿನ ಪರಿಸ್ಥಿತಿ ಏನು ಎನ್ನುವುದನ್ನು ಹೇಳಬೇಕಾಗಿಲ್ಲ, ನಿಯೋಗದಿಂದ ನಮ್ಮ ರಾಜ್ಯಕ್ಕೆ ಏನಾಯಿತು ಎಂಬುದನ್ನೂ ಸಹ ಹೇಳಬೇಕಾಗಿಲ್ಲ. ಒಂದು ಕಡೆ ಜನಸಾಮಾನ್ಯರಿಗೆ ಕುಡಿಯುವ ನೀರಿಲ್ಲ, ದನಕರುಗಳಿಗೆ ಸಂಪೂರ್ಣವಾಗಿ ಕುಡಿಯುವ ನೀರಿನ ವ್ಯವಸ್ಥೆಯಿಲ್ಲ ಮೇವಿಲ್ಲ. ಮೇವಿಗೆ ಸಂಬಂಧಿಸಿದಂತೆ ಇಲ್ಲಿರುವ ಮಾಹಿತಿ ಪ್ರಕಾರ ಹೇಳುವುದೇನೆಂದರೆ ಕರ್ನಾಟಕ ಹಾಲು ಮಹಾಮಂಡಳಿಯಿಂದ 5 ಕೋಟಿ ರೂ.ಗಳನ್ನು ಪಶು ಆಹಾರಕ್ಕಾಗಿ ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಅದೊಂದನ್ನು ಬಿಟ್ಟರೆ ಎಲ್ಲಾದರೂ ಮೇವನ್ನು ಖರೀದಿ ಮಾಡಿದ್ದೀರಾ? ಎಲ್ಲಿ ಕೆರೆಗಳಿರುತ್ತದೆಯೋ, ನೀರಾವರಿ ಪಂಪ್‌ಸೆಟ್ ಇರುತ್ತದೆಯೋ ಅಂತಹ ಕಡೆಗಳಲ್ಲಿ ನಮ್ಮ ರೈತರ ಬೆಳೆಗಳಿಗೆ ಬೇಕಾಗುವಂತಹ ಪಶು ಆಹಾರವನ್ನು, ಮೇವು ಬೆಳೆಯುವುದಕ್ಕೆ ಬಿತ್ತನೆ ಬೀಜವಿರಬಹುದು, ಗೊಬ್ಬರ ಇರಬಹುದು, ಜಿಲ್ಲಾವಾರು, ತಾಲ್ಲೂಕುವಾರು ಎಷ್ಟೆಷ್ಟು ಕೊಟ್ಟಿದ್ದೀರಿ ತಿಳಿಸಿ. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಒಂದು ಕೊಡಕ್ಕೆ 3ರೂಪಾಯಿಗಳೆಂದು ಪತ್ರಿಕೆಯಲ್ಲಿಯೇ ವರದಿಯಾಗಿದೆ. ಒಂದು ಕೊಡ ನೀರಿಗೆ 3 ರೂಪಾಯಿ! ಬಾಗಲಕೋಟೆಯ 7 ತಾಲ್ಲೂಕುಗಳಲ್ಲಿ ಶೇ. 50% ಇದೇ ರೀತಿಯ ಪರಿಸ್ಥಿತಿಯಾಗಿದೆ. ಇಡೀ ರಾಜ್ಯದ ಸುಮಾರು ಕಡೆಗಳಲ್ಲಿ ಮುಂಗಾರು ಬೆಳೆ ಸರಿಯಾಗಿ ಆಗಿರುವುದಿಲ್ಲ. ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿಯೇ ಸುಮಾರು 100 ಕೋಟಿ ರೂ.ಗಳ ಬೆಳೆ ನಷ್ಟವಾಗಿದೆಯೆಂದು ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ಒಂದು ನೂರು ಕೋಟಿ ರೂ.ಗಳ ಬೆಳೆ ಒಂದೇ ಜಿಲ್ಲೆಯಲ್ಲಿ ನಷ್ಟವಾಗಿದೆಯೆಂದರೆ, ಇಡೀ ರಾಜ್ಯದಲ್ಲಿ ಮುಂಗಾರು ಬೆಳೆ ಬಿತ್ತನೆ ಮಾಡಿ ಎಷ್ಟು

ಬೆಳೆ ನಷ್ಟವಾಗಿದೆ ಎನ್ನುವ ಮಾಹಿತಿ ಏನಾದರೂ ಸರ್ಕಾರ ಕೊಡುತ್ತದೆಯೇ? ಮಾಹಿತಿ ಇದ್ದರೆ ದಯಮಾಡಿ ತಿಳಿಸಿ. ಜಿಲ್ಲಾವಾರು, ತಾಲ್ಲೂಕುವಾರು ಎಷ್ಟು ಮುಂಗಾರು ಬೆಳೆ ಹಾಕಿದ್ದಾರೆ, ಇದರಲ್ಲಿ ಜೋಳ, ತೊಗರಿ, ರಾಗಿ, ಆಲೂಗಡ್ಡೆ, ಹತ್ತಿ, ತಂಬಾಕು ಯಾವುದೇ ಇರಬಹುದು. ಮುಂಗಾರು ಬೆಳೆ ಬಿತ್ತಿರುವುದಿಲ್ಲ ರೈತರು ಶೇಕಡ 20 ರಷ್ಟು ಕೂಡ ಬೆಳೆಯುವುದಕ್ಕೆ ಕಷ್ಟವಾಗುತ್ತಿದೆ. ಏಕೆಂದರೆ ಐ.ಪಿ.ಸೆಟ್‌ನಲ್ಲಿ ಕರೆಂಟ್ ಇಲ್ಲ, TC ಇಲ್ಲ, ಓದುವ ಮಕ್ಕಳಿಗೂ ಸಹ ಕರೆಂಟ್ ಇಲ್ಲ, ಇದರ ಬಗ್ಗೆ ಮೊದಲು ಮಾಹಿತಿಯನ್ನು ತರಿಸಬೇಕು.

ಬರಗಾಲದ ಬಗ್ಗೆ ಕೇಳುತ್ತೇವೆಂದು ಮಾನ್ಯ ಇಂಧನ ಸಚಿವರು ಹೊರಗಡೆ ಹೋಗಿದ್ದಾರೆ. ಯಾವ ಮಟ್ಟಕ್ಕೆ ಸರ್ಕಾರ ಇದೆ ಎಂದು ತಾವು ಚಿಂತನೆ ಮಾಡಬೇಕಾಗಿದೆ ಮಾನ್ಯ ಸಭಾಧ್ಯಕ್ಷರೆ. ಇವತ್ತು ಬರಗಾಲದಿಂದ ಮುಂಗಾರು ಬೆಳೆ ಹೋಗಿ ಎಷ್ಟು ಬೆಳೆ ನಾಶವಾಗಿದೆ. ಜಿಲ್ಲಾವಾರು ಇರಬಹುದು, ತಾಲ್ಲೂಕುವಾರು ಇರಬಹುದು, ಹೋಬಳಿ ಕೇಂದ್ರಗಳಲ್ಲಿ ಇರಬಹುದು, ಆ ರೈತರು ಒಂದು ಕಡೆ ಸಾಲ ತೆಗೆದುಕೊಂಡು ಬಿತ್ತನೆ ಬೀಜ ಮಾಡಿ, ಈ ಸಾರಿ ಒಂದಕ್ಕೆ ಎರಡು ಪಟ್ಟು ಮೂರು ಪಟ್ಟು ಗೊಬ್ಬರಕ್ಕೆ ದುಡ್ಡು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರ ಗೊಬ್ಬರದ ಸಬ್ಸಿಡಿಯನ್ನು ಕಿತ್ತುಹಾಕಿದ ಮೇಲೆ ಕಾರ್ಖಾನೆಯ ಮಾಲೀಕರನ್ನು ಯಾರೂ ಕೇಳುವವರಿಲ್ಲ. ಅವರು 500/– ರೂಪಾಯಿ ಇರುವ ಗೊಬ್ಬರವನ್ನು ರೂ.1,500/– ಗಳಿಗೆ ಮಾರಟ ಮಾಡುತ್ತಿದ್ದಾರೆ. ಈಗ DAP ತೆಗೆದುಕೊಳ್ಳಬೇಕಾದರೆ, ರೂ. 500/– ಇದ್ದಂಥ ಗೊಬ್ಬರ ಇವತ್ತು ರೂ.1,500/– ಗಳು ಆಗಿದೆ. ಬಿತ್ತನೆ ಬೀಜ ಒಂದು ಕಡೆ, ಗೊಬ್ಬರ ಒಂದು ಕಡೆ ಇವನ್ನೆಲ್ಲಾ ತಂದು ಇವತ್ತು ರೈತ ಸಾಲ ಮಾಡಿ ಇನ್ನೊಂದು ಕಡೆ ಸರ್ಕಾರ ರೈತರಿಗೆ 1% ಬಡ್ಡಿ ದರದಲ್ಲಿ ಸಾಲ ಕೊಟ್ಟುಬಿಟ್ಟಿದ್ದೇವೆ. 0% ನಲ್ಲಿ ಸಾಲ ಕೊಡುತ್ತಿದ್ದೇವೆಂದು ಹೇಳುತ್ತಿದೆ. ಒಂದು ಲಕ್ಷದವರಿಗೆ 0%, 3 ಲಕ್ಷದವರಿಗೆ 1%, 3 ಲಕ್ಷದ ಮೇಲೆ ಯಾರಾದರೂ ರೈತ ಸಾಲ ತೆಗೆದುಕೊಂಡರೆ ಇಲ್ಲೆ ಸಹಕಾರ ಮಂತ್ರಿಗಳಿದ್ದಾರೆ, ದಯಮಾಡಿ ಹೇಳಿ ಎಷ್ಟು ಬಡ್ಡಿ ಸ್ವಾಮಿ? ಒಂದು ಲಕ್ಷದವರಿಗೆ 0%, ಒಂದು ಲಕ್ಷ ಮೇಲ್ಪಟ್ಟು 3 ಲಕ್ಷದವರಿಗೆ 1%, ಆಮೇಲೆ ಆ ಸಾಲ ತೆಗೆದುಕೊಳ್ಳಬೇಕಾದರೆ ಹೆಣ ಬಿದ್ದುಹೋಗುತ್ತದೆ. ಹೊಸ ಸಾಲ ಯಾವುದೂ ಇಲ್ಲ. 3 ಲಕ್ಷದ ಮೇಲೆ ರೈತರು ಸಾಲ ತೆಗೆದುಕೊಂಡರೆ ಎಷ್ಟು ಪರ್ಸೆಂಟ್ ಬಡ್ಡಿ ಹಾಕುತ್ತೀರಿ ಸ್ವಾಮಿ? ಇವತ್ತು ರೈತರಿಗೆ ಎಷ್ಟು ಪರ್ಸೆಂಟ್ ಬಡ್ಡಿ ಹಾಕುತ್ತಿರುವುದು? ಮಾಮೂಲಿ ಬೇರೆ ಬ್ಯಾಂಕ್‌ನವರು ಹಾಕುವ ಹಾಗೆ 13.5% ಹಾಕುತ್ತಾರೆ. ಅಂದರೆ ಯಾವುದೋ ತೋರಿಕೆಗೆ 5% 10% ಬಡ್ಡಿಯನ್ನು ಬೇಕಾದವರಿಗೆ ಮಾತ್ರ ಹಾಕುತ್ತಾರೆ. ಇವತ್ತು ಸಹಕಾರ ಮಂತ್ರಿಗಳು ಹೇಳಿದ್ದಾರೆ, ಒಂದು ಲಕ್ಷ ಕುಂಟುಂಬಕ್ಕೆ ಸಾಲ

ಕೊಡಬಹುದುದಾಗಿದ್ದ ಮೊತ್ತವನ್ನು ಒಬ್ಬನೇ ವ್ಯಕ್ತಿ ತೆಗೆದುಕೊಂಡಿದ್ದಾನೆ. ಇದು ನಾನು ಹೇಳಿದ್ದಲ್ಲ. ಈ ರಾಜ್ಯದ ಮಾನ್ಯ ಸಹಕಾರ ಮಂತ್ರಿಗಳು ಒಂದು ಲಕ್ಷ ಕುಂಟುಂಬಕ್ಕೆ ಕೊಡಬೇಕಾದಂಥ ಸಾಲವನ್ನು ಒಬ್ಬನೇ ವ್ಯಕ್ತಿ ತೆಗೆದುಕೊಂಡಿದ್ದಾನೆ. ಎನ್ನುವುದನ್ನು ಬಹಿರಂಗವಾಗಿ ವಿಧಾನಸಭೆಯಲ್ಲಿ ಚರ್ಚೆ ನಡೆಯುವ ಸಂದರ್ಭದಲ್ಲಿ ಘೋಷಣೆ ಮಾಡಿದ್ದಾರೆ. ಮಾಡಿದ್ದಾರೆ. ಅಂದರೆ ಸಹಕಾರ ಇಲಾಖೆಯಲ್ಲಿ ಯಾವ ರೀತಿ ಇದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ರೈತರಿಗೆ ನೀವು ಹೇಳಿ, ನಾವು ಕೊಡುವುದಕ್ಕೆ ಆಗುವುದಿಲ್ಲ. ಸುಮ್ಮನೆ ಸುಳ್ಳು ಘೋಷಣೆ ಇದು. ಒಂದು ಲಕ್ಷದವರಿಗೆ 0% ಬಡ್ಡಿಯಂತೆ ಎಷ್ಟುಜನರಿಗೆ ಹೊಸ ಸಾಲ ಕೊಟ್ಟಿದ್ದೀರಿ? 30 ಜಿಲ್ಲಾ ಬ್ಯಾಂಕ್ ಕೇಂದ್ರ ಸಹಕಾರಿ ಬ್ಯಾಂಕುಗಳಿವೆ. ಇಷ್ಟು ಜಿಲ್ಲಾ ಬ್ಯಾಂಕ್‌ಗಳಲ್ಲಿ ಒಂದು ಲಕ್ಷದವರಿಗೆ 0% ಬಡ್ಡಿಯನ್ನು ಕೊಟ್ಟಿದ್ದೇವೆಂದು ಕಂದಾಯ ಮಂತ್ರಿಗಳು ಮಾಹಿತಿ ತರಿಸಿ ಹೇಳಲಿ. 3 ಲಕ್ಷದವರಿಗೆ 1%ಗೆ ಎಷ್ಟು ಜನರಿಗೆ ಕೊಟ್ಟಿದ್ದೀರಿ? ಮತ್ತೆ Nationalized Banks ಇವೆ. ಅದರ ಬಡ್ಡಿ ದರ ಮಾರವಾಡಗಳಿಂಗಿಂತಲೂ ಹೆಚ್ಚಿಗೆ ಇದೆ. ರೈತಾಪಿ ಜನರನ್ನು ಕೊಲೆ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ Nationalized Banksಇವೆ, ಆNationalized Banksಇರುವುದು ಜನಸಾಮಾನ್ಯರಿಗಲ್ಲ, ರೈತರಿಗಲ್ಲ. ಮಾರವಾಡಗಳಿಂಗಿಂತ ಹೆಚ್ಚಿಗೆ ಯಾರು ದುಡ್ಡು ಕೊಡುತ್ತಾರೆ ಅಂಥವರಿಗೆ ಸಾಲ ಸಿಗುತ್ತದೆ. ಇವತ್ತು ಜಿಲ್ಲಾಮಟ್ಟದಲ್ಲಿ ಲೀಡ್ ಬ್ಯಾಂಕ್ ಎಂದು ಇದೆ. ಆ ಲೀಡ್ ಬ್ಯಾಂಕಿನ ಜಿಲ್ಲಾಧಿಕಾರಿಗಳು ಇರಬಹುದು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯದರ್ಶಿಗಳು ಇರಬಹುದು. ಎಷ್ಟು ಸಭೆ ಮಾಡಿ, ಎಷ್ಟು ಲೀಡ್ ಬ್ಯಾಂಕಿನಿಂದ ಎಷ್ಟು ಪರ್ಸೆಂಟ್ ಮಾಡಿದ್ದಾರೆ ಕೇಳಿ ದಯಮಾಡಿ. ಎಷ್ಟು ಜನ ರೈತರಿಗೆ ಸಾಲ ಕೊಟ್ಟಿದ್ದೀರಿ? ಎಷ್ಟು ಜನ ರೈತರಿಗೆ ಎಷ್ಟು ಪರ್ಸೆಂಟ್ ಬಡ್ಡಿಯಲ್ಲಿ ಸಾಲ ಕೊಡುತ್ತಿದ್ದೀರಿ ಹೇಳಿ. ಉದಾಹರಣೆಗೆ ನಮ್ಮ ಹಾಸನ ಜಿಲ್ಲೆ ತೆಗೆದುಕೊಂಡರೆ ಆಲೂಗಡ್ಡೆ ಸಂಪೂರ್ಣವಾಗಿ ಐದು ಬಾರಿ ನಷ್ಟ ಆಯಿತು. ಇವತ್ತು ಮುಂಗಾರು ಬೆಳೆಗೆ ನಾವೇನೋ ಮಾಡಿ ಕೊಡಿಸಿದರೆ ಗೊಬ್ಬರ ಎಲ್ಲಾ ಸೇರಿ ಒಬ್ಬ ರೈತರಿಗೆ ಒಂದು ಎಕರೆಗೆ 8–10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಮಾನ್ಯ ಸಭಾಧ್ಯಕ್ಷರೆ. ಆಲುಗಡ್ಡೆ ಸಂಪೂರ್ಣವಾಗಿ ನಷ್ಟವಾಗಿದೆ. ಹಿಂದೆ ಮಾನ್ಯ ಯಡಿಯೂರಪ್ಪ ಇದ್ದರು, ನಮ್ಮ ಮಾನ್ಯ ಜಿಲ್ಲಾಮಂತ್ರಿಗಳಾಗಿ ಅರವಿಂದ ಲಿಂಬಾವಳಿ ಇದ್ದರು ಅವರು ಪ್ಯಾಕೇಜ್ ಕೊಡಿಸುತ್ತೇವೆಂದು ಹೇಳಿದ್ದರು. ಸೋಮಣ್ಣನವರು ಪ್ಯಾಕೇಜ್ ಕೊಡಿಸುತ್ತೇವೆಂದು ಹೇಳಿದ್ದರು. ಮಾನ್ಯ ಸದಾನಂದಗೌಡರು ಪ್ಯಾಕೇಜ್ ಮಾಡುತ್ತೇವೆಂದು ಹೇಳಿ, ನಿನ್ನೆ ನಮ್ಮ ಉಮೇಶ್‌ಕತ್ತಿಯವರು •

ಸದಾನಂದಗೌಡರು ಮುಖ್ಯಮಂತ್ರಿಗಳಾಗಿ ಹೋಗ–ಬೇಕಾಗಿದ್ದರೆ ಹಾಸನ ಜಿಲ್ಲೆಗೆ ಪ್ಯಾಕೇಜ್ ಮಾಡೇ ಹೋಗಿದ್ದಾರೆಂದು ಹೇಳಿದ್ದಾರೆ. ಆ ಪ್ಯಾಕೇಜ್ ದುಡ್ಡು ಬಂದಿಲ್ಲ. ಘೋಷಣೆ ಮಾಡಿ, ಸರ್ಕಾರದ ಆದೇಶ ಮಾಡಿದ್ದಾರೆಂದು ನನಗೆ ಮಾನ್ಯ ಉಮೇಶ್‌ಕತ್ತಿಯವರು ಹೇಳಿದ್ದಾರೆ. ಹಾಸನ ಜಿಲ್ಲೆ ಪ್ಯಾಕೇಜ್‌ನ್ನು ನಾವುಸದಾನಂದಗೌಡರು ತೆಗೆದೆವು ಎಂದು ನಿನ್ನೆ ಹೇಳುತ್ತಿದ್ದರು. ಅದಕ್ಕೆ ನಾನು ಹೇಳುವುದು, ಜಿಲ್ಲೆಯ ರೈತರು, ಯಾರೇ ರೈತರು ಇರಲಿ ಸರ್ಕಾರಕ್ಕೆ ಕರುಣೆ ಬೇಡವೇ? ಅಧಿಕಾರಉಳಿಸಿಕೊಳ್ಳುವುದಕೋಸ್ಕರ ರೈತರನ್ನು ಏಕೆ ಕೊಲೆ ಮಾಡುತ್ತೀರಿ ಸ್ವಾಮಿ. ಬೇಕಾದರೆ ನಮ್ಮನ್ನು ಕೊಲೆ ಮಾಡಿ. ನಮ್ಮ ರೈತಾಪಿ ಜನರನ್ನು ಏಕೆ ಕೊಲೆ ಮಾಡುತ್ತೀರಿ. ಅವರ ಮೇಲೆ ಸೇಡು ತೀರಿಸಿಕೊಳ್ಳಬೇಕಾದರೆ ನಮ್ಮ ಮೇಲೆ ಸೇಡು ತೀರಿಸಿಕೊಳ್ಳಿ. ರೈತರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಹೋಗುತ್ತೀರಾ ತಾವು? ಯಾವ ಘೋಷಣೆ ನಿಮ್ಮದು? ಸರ್ಕಾರ ಬಂದು ನಾಲ್ಕು ವರ್ಷವಾಗಿದ್ದು ಇವತ್ತಿನವರೆಗೆ ರೈತಾಪಿ ಜನರಿಗೆ ಏನು ಮಾಡಿದ್ದೀರಿ? ಅವರಿಗೆ ಮಾಡಿದಂಥ ಕೊಡುಗೆ ಏನು? ಮೊದಲ ಬಾರಿ ಬಂದಾಗ ಗೊಬ್ಬರ ಕೇಳಲು ಹೋದಾಗ ಗೂಸ ಬಿಡಿಸಿದ್ದೀರಿ. ಮತ್ತೆ ನೀವು ಗೂಸ ಬಿಡಿಸಿ ಸತ್ತವನ ಮೇಲೆ ಒಂದು ನ್ಯಾಯಂಗ ತನಿಖೆ ಮಾಡಿದ್ದೀರಿ. ಆ ನ್ಯಾಯಂಗ ತನಿಖೆ ಮಾಡುವುದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದೀರಿ? ಆ ನ್ಯಾಯಂಗ ತನಿಖೆಯಿಂದ ರಿಪೋರ್ಟ್ ಏನು ಬಂತು? ನ್ಯಾಯಂಗ ತನಿಖೆ ಮಾಡಲು ಒಬ್ಬರನ್ನು ನೇಮಿಸಿದ್ದೀರಿ, ಅವರಿಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ ಹೇಳಿ? ಹಣ ಖರ್ಚು ಮಾಡಿ ಅವರಿಂದ ಬಂದ ರಿಪೋರ್ಟ್ ಏನು ಅಂದರೆ ಸತ್ತು ಹೋಗಿರುವವನು ಕಳ್ಳ, ಅವನು ರೈತನೇ ಅಲ್ಲವೆಂದು ಈ ರೀತಿ ನ್ಯಾಯಾಂಗ ತನಿಖೆ ರಿಪೋರ್ಟ್ ಬರುತ್ತದೆ. ಯಾರು ರೈತ ಸತ್ತು ಹೋಗಿದ್ದಾನೆ ಅವರ ಮನೆಗೆ ಮುಖ್ಯಮಂತ್ರಿಗಳು ಹೋಗಿ ಹಣ ಕೊಡುತ್ತಾರೆ. ಈ ರಾಜ್ಯದ ಪ್ರಥಮ ಪ್ರಜೆಯೇ ಅವರ ಮನೆಗೆ ಮುಂದೆ ಹೋಗಿ ಪಾಪ ಒಂದು ಲಕ್ಷ ದುಡ್ಡು ಕೊಟ್ಟು, ಹೆಂಡತಿಗೆ ನಿಮ್ಮ ಗಂಡ ತೀರಿಹೋದ ಪಾಪ sorry ಅಂಥ ಹೇಳಿ ಬಂದು ಒಂದು ನ್ಯಾಯಂಗ ತನಿಖೆ ಮಾಡಿಸಿರುವುದು ರೈತರ ಕಣ್ಣೊರೆಸುವ ತಂತ್ರನ ಸ್ವಾಮಿ ಇದು? ಏಕೆ ಬೇಕು ನ್ಯಾಯಾಂಗ ತನಿಖೆಗಳು? ನ್ಯಾಯಾಂಗ ತನಿಖೆಯೆಂದು ಮಾಡಿ ಎರಡು ವರ್ಷ ಮಜಾ ಮಾಡಿಕೊಂಡು ಆಮೇಲೆ ರಿಪೋರ್ಟ್ ಕೊಡುವುದು. ರೈತರಿಗೆ ಎಷ್ಟು ದಿನ ಸುಳ್ಳು ಹೇಳುತ್ತೀರಿ? ಉದಾಹರಣೆಗೆ ಹೇಳುವುದಾದರೆ, ಆಲೂಗೆಡ್ಡೆ ಬಿಟ್ಟಾಯಿತು. ಕೆಲವು ಕಡೆ ಇವತ್ತು ಶುಂಠಿ ಮತ್ತು ಅರಿಶಿಣ ಹಾಕಿದ್ದಾರೆ. ಶುಂಠಿ, ಅರಿಶಿಣ ಹಾಕಿದ ದಿನ ರೇಟ್ ಎರಡು ಸಾವಿರ ಇತ್ತು. ಬೆಳೆ ಕೀಳುವುದಕ್ಕೆ

ಬಂದಾಗ ಕೇವಲ ರೂ.250/–, ರೂ.300/–, ರೂ.400/–. ಬೆಳೆ ಕೀಳುವುದಕ್ಕೆ ಕೂಲಿ ಕೊಡುವುದಕ್ಕೆ ಆಗದೆ ಗದ್ದೆಯಲ್ಲಿ ಹಾಗೆ ಬಿಟ್ಟಿದ್ದಾರೆ. ಪಾಪ, ನಮ್ಮ ಜಿಲ್ಲೆಯ ರವೀಂದ್ರನಾಥ ಸಾಹೆಬ್ರು ಇಲ್ಲೇ ಇದ್ದಾರೆ. ಅವರು ಬಂದು ರೈತರ ಪರವಾಗಿ ಮಾಡಿದಾರೆ. ಅವರು ರೈತರ ಪರವಾಗಿ ಕೈಲಾದಷ್ಟು ಮಾಡಿದ್ದಾರೆ. ಅವರು ಒಬ್ಬ ರೈತಪರ ತೋಟಗಾರಿಕೆ ಮಂತ್ರಿಯಾಗಿದ್ದರೂ ಅವರು ಹೇಳುವುದನ್ನು ಸರ್ಕಾರದಲ್ಲಿ ಕೇಳುವಂಥವರು ಯಾರೂ ಇರಲಿಲ್ಲ. ಇವತ್ತು ಶುಂಠಿಯನ್ನು ಸುಮಾರು 17,000 ಹೆಕ್ಟರ್ ಜಮೀನಿನಲ್ಲಿ ಹಾಕಲಾಗಿದೆ. ಇವತ್ತು ಸಂಪೂರ್ಣ ಮಾರುಕಟ್ಟೆ ಬಿದ್ದುಹೋಗಿ ರೂ.250, ರೂ.300/–, ರೂ400/– ರೂಪಾಯಿಗೆ ಇಳಿದು ಹೋಗಿದ್ದ ಶುಂಠಿ ಬೆಲೆ ಇವತ್ತು ರೂ.1,800/– ಆಗಿದೆ. ಅರಶಿಣದ ರೇಟ್ ಇವತ್ತು ಎಷ್ಟು ಇದೆ ಕೇಳಿ? ಏಕೆ ಸರ್ಕಾರ ಇದರ ಬಗ್ಗೆ ಮುಂದು ಬರಲಿಲ್ಲ. ಶುಂಠಿ ಮಾರುಕಟ್ಟೆ ರೇಟ್ ಸತ್ತುಹೋದ ಮೇಲೆ ನಾವು ಬೆಂಬಲ ಬೆಲೆಯಂದು ಘೋಷಣೆ ಮಾಡುತ್ತೇವೆ. ತೆಂಗನ್ನು ಬೆಳೆದವರಿಗೆ ಇವತ್ತು ತೆಂಗಿನ ರೇಟ್ ರೂ 4/– ರೂ. 5/– ಇದೆ. ನಮ್ಮಲ್ಲಿ ಕೊಬ್ಬರಿ ಬೆಲೆ ಸಂಪೂರ್ಣ ಬಿದ್ದು ಹೋಗಿದೆ ಮಾನ್ಯ ಶಿವಲಿಂಗಗೌಡರು ಇಲ್ಲೆ ಕುಳಿತುಕೊಂಡಿದ್ದಾರೆ. ಅರಸಿಕೇರೆ ತಾಲ್ಲೂಕಿನಿಂದ, ಚೆನ್ನರಾಯಪಟ್ಟಣ ತಾಲ್ಲೂಕಿನಿಂದ ತಿಪಟೂರು ತಾಲ್ಲೂಕಿನಿಂದ ಸುಮಾರು 2,000 ರೈತರನ್ನು ಕರೆದುಕೊಂಡು ನಾವು ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದ್ದೇವು. ಭೇಟಿ ಮಾಡಿ ಏನಾಯಿತು ಮಾನ್ಯ ಶಿವಲಿಂಗಗೌಡರೆ? ನಾಳೆ ಬೆಳಿಗ್ಗಿನಿಂದಲೆ ಎಂದು ರೂ.6050/– ಘೋಷಣೆ ಮಾಡಿದರು. ರೈತರಿಂದ ಎಷ್ಟು ಕೊಬ್ಬರಿ ಖರೀದಿ ಮಾಡಿದ್ದೀರಿ ದಯಮಾಡಿ ತಿಳಿಸಿ ಸ್ವಾಮಿ? Order ಆಯಿತು. ಮಾನ್ಯ ರವೀಂದ್ರನಾಥರವರು ಇದ್ದರು. ತೀರ್ಮಾನ ಆಯಿತು. ಎಷ್ಟು ಕೊಬ್ಬರಿ ಖರೀದಿ ಮಾಡಿದ್ದೀರಿ ದಯಮಾಡಿ ತಿಳಿಸಿ ಸ್ವಾಮಿ? ಏಕೆಂದರೆ ಇವತ್ತು ಸುಮ್ಮನೆ ಘೋಷಣೆ ಮಾಡಿಬಿಡುವುದು. ರೈತರು ಕಾಯುತ್ತಾ ಕುಳಿತುಕೊಂಡಿದ್ದಾರೆ. ರೈತರು ನಾಳೆ ಚನ್ನರಾಯಪಟ್ಟಣದಲ್ಲಿ, ಅರಸೀಕೆರೆಯಲ್ಲಿ ಮಾರುಕಟ್ಟೆ ಸಮಿತಿಯನ್ನು open ಮಾಡಿತ್ತಾರೆಂದು ಕಾಯುತ್ತಾ ಕುಳಿತಿದ್ದಾರೆ. ಅಲ್ಲಿ ಏನಾಗೆದೆಯೆಂದರೆ ಒಂದು ಕಡೆ APMCಯವರು quiry ಹಾಕುತ್ತಾರೆ, ಮತ್ತೊಂದು ಕಡೆ Nafedನವರುquiryಗೆ ಹಾಕುತ್ತಾರೆ. ಎಷ್ಟು ಖರೀದಿ ಮಾಡಿದ್ದಾರೆ ಎಂದು ದಯಮಾಡಿ ತಿಳಿಸುವುದಕ್ಕೆ ಹೇಳಿ. ಇದು ಒಂದು ಕಡೆ ಅಲ್ಲ, ಅಡಿಕೆ ಬೆಳೆಗೆ ರೋಗ ಒಂದು ಕಡೆ, ತೆಂಗು ಬೆಳೆಗೆ ರೋಗ ಮತ್ತೊಂದು ಕಡೆ, ಇಷ್ಟಾದರೂ ಗಿಡ ಉಳಿಸಿಕೊಂಡು ಕಾಪಾಡುವ ರೈತರಿಗೆ ಸರಿಯಾದ ಬೆಲೆ

ಸಿಗುವುದಿಲ್ಲ. ಮಧ್ಯವರ್ತಿಗಳಿಗೆ ಸಿಗುತ್ತಿದೆ. ಒಂದು ಬಾಳೆಗೊನೆ ಬೆಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ತೋಟಗಾರಿಕಾ ಮಂತ್ರಿಗಳು ಹೇಳಲಿ. ಒಂದು ವರ್ಷ ಕಷ್ಟಪಟ್ಟು ಗೊಬ್ಬರ ಹಾಕಿ ಬಾಳೆ ಬೆಳೆದರೆ ರೈತನಿಗೆ ಸಿಗುವ ಹಣಕ್ಕಿಂತ, ಕೇವಲ 1 ತಿಂಗಳಲ್ಲಿ ಅದನ್ನು ಮಾರಟ ಮಾಡುವ ಮಧ್ಯವರ್ತಿಗಳಿಗೆ 3 ಪಟ್ಟು ಹಣ ಸಿಗುತ್ತದೆ. 1 ವರ್ಷ ಬೆಳೆದ ರೈತರಿಗೆ ಎಷ್ಟು ಸಿಗುತ್ತದೆ ಎಂದು ತೋಟಗಾರಿಕಾ ಮಂತ್ರಿಗಳು ಹೇಳಲಿ. ನೀವು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದೀರಿ; ಡೈರಿ ಮಾದರಿಯಲ್ಲಿ ಪ್ರತಿ ಕೇಂದ್ರಗಳಲ್ಲಿ ಸೂಸೈಟಿ ಮಾಡಿ, ರೈತರಿಂದ ಬೆಳೆದಿರುವ ಪದಾರ್ಥಗಳನ್ನು ನಾವು ಖರೀದಿ ಮಾಡಿ, ಹಾಲು ಉತ್ಪಾದಕರ ಸಂಘಗಳನ್ನು ಯಾವ ರೀತಿ ಮಾಡಿದ್ದೇವೆಯೋ ಅದೇ ರೀತಿ ಮಾಡುತ್ತೇವೆಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದೀರಿ. ಸದಾನಂದಗೌಡರಿಗೆ ರೈತರ ಕಷ್ಟ ಗೊತ್ತಿದ್ದರಿಂದ ಮಾಡಿದರು. ಮಾರ್ಚ್, ಏಪ್ರಿಲ್, ಮೇ, ಜೂನ್, ಜುಲೈ end ಆಯಿತು, 6 ತಿಂಗಳುಗಳಾದರೂ ನಿಮ್ಮ ಘೋಷಣೆ ಏನಾಗದೆ? ಮಾರುಕಟ್ಟೆ ಮಾಡುವುದಕ್ಕೆ ಏನಾದರೂ ಒಂದು scheme ಮಾಡಿದ್ದೀರಾ? ಮಾಡಿ, ಯಾವುದಕ್ಕೆ ದುಡ್ಡನ್ನು ಕಳೆಯುತ್ತಿದ್ದೀರಿ? ಇದಕ್ಕಾಗಿ ರೂ. 2 ಸಾವಿರ ಕೋಟಿ ಹಣವನ್ನು ರೈತರ ಹೆಸರಿನಲ್ಲಿ ಇಟ್ಟು ಸೊಸೈಟಿ ಮಾಡಿ. ದಕ್ಷ ಅಧಿಕಾರಿಗಳನ್ನು ನೇಮಕ ಮಾಡಿ. ನಮ್ಮ ರಾಜ್ಯದಲ್ಲಿ ರೈತರ ಹೆಸರಿನಲ್ಲಿ ಇಟ್ಟು ಸೂಸೈಟಿ ಮಾಡಿ. ದಕ್ಷ ಅಧಿಕಾರಿಗಳನ್ನು ನೇಮಕ ಮಾಡಿ. ನಮ್ಮ ರಾಜ್ಯದಲ್ಲಿ ರೈತರ ಪರವಾಗಿ ಕೆಲಸ ಮಾಡುವ ದಕ್ಷ ಅಧಿಕಾರಿಗಳು ಯಾರೂ ಇಲ್ಲವೇ? ಕೃಷಿ ಇಲಾಖೆಗೆ ಕಾರ್ಯದರ್ಶಿಗಳಾಗಿ ಮೀನಾರವರನ್ನು ನೇಮಕ ಮಾಡಿದ್ದೀರಿ, ಅವರಿಗೆ ರೈತರ ಬಗ್ಗೆ ಕಾಳಜಿ ಇದೆ. ಅದನ್ನು ಬಿಟ್ಟು ಮೂರ್ಮೂರು ತಿಂಗಳಿಗೊಮ್ಮೆ ಅಧಿಕಾರಿಗಳನ್ನು ಒಂದೊಂದು ಕಡೆಗೆ ವರ್ಗ ಮಾಡುತ್ತೀರಿ. ನಿಮಗೆ ಏನು ಬರೆದು ಕೊಡುತ್ತಾರೋ? ನಿಮಗೆ ಬೇಕಾದವರಿಗೆ ಫಲವತ್ತಾದ ಜಾಗ ಕೊಡುತ್ತೀರಿ. ಕೊಡಿ ಸ್ವಾಮಿ ಏನಂತೆ, ಕೃಷಿ ಇಲಾಖೆ ಕಾರ್ಯದರ್ಶಿಗಳು, ಅವರು ಕೆಇಬಿನಲ್ಲಿ ಬೆಂಗಳೂರಿನ ಬೆಸ್ಕಾಂನಲ್ಲಿ ಎಂ.ಡಿ.ಯಾಗಿದ್ದವರು. ರೂ.500 ಕೋಟಿ ಎಫ್.ಡಿ. ಇಟ್ಟಿದ್ದರು. ರೂ.2 ಸಾವಿರ ಕೋಟಿ, ಇನ್ನೇನು ಕಂಪನಿ ಮುಳುಗುವ ಪರಿಸ್ಥಿತಿಯಲ್ಲಿದ್ದು ಸ್ವಲ್ಪ ದಿನ ಹೋದರೆ ಬೆಂಗಳೂರಿನ ಬೆಸ್ಕಾಂ ಕಂಪನಿಯನ್ನು ಹರಾಜು ಹಾಕಬೇಕಾಗುತ್ತದೆ. ಇಂಥವರಿಗೆ ಮಾತ್ರ ನೀವು ಶಹಬಾಸ್‌ಗಿರಿ ಕೊಡುತ್ತೀರಿ. ಪ್ರಾಮಾಣಿಕವಾದ ಅಧಿಕಾರಿಗಳನ್ನು ನೇಮಕ ಮಾಡಲು ನಿಮಗೆ 5 ತಿಂಗಳು ಬೇಕಾಗುತ್ತದೆಯೇ? ಒಂದು ಬೈಲಾ ಮಾಡಿ, ಪ್ರತಿ ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರಗಳಲ್ಲಿ ರೈತರು ಬೆಳೆದಂಥ ಬೆಳೆಗೆ ಮಾರುಕಟ್ಟೆ ವ್ಯವಸ್ಥೆ ಮಾಡಿ. ಸರ್ಕಾರದಿಂದ ರೂ.2 ಸಾವಿರ ಕೋಟಿ ಇದಕ್ಕಾಗಿ

ಖರ್ಚು ಮಾಡಿ, ನಿಮಗೆ ತೊಂದರೆ ಆಗುವುದೇನು? ಒಂದು ಕಡೆ ಕುಡಿಯುವುದಕ್ಕೆ ನೀರಿಲ್ಲ, ಮತ್ತೊಂದು ಕಡೆ ರೈತರು ಕಷ್ಟಪಟ್ಟು ಶೋಭಕ್ಕನವರಿಂದ ಟಿ.ಸಿ. ಹಾಕಿಸಿಕೊಳ್ಳಬೇಕಾದರೆ ರೂ.5 ಸಾವಿರ ಕೊಡಬೇಕಾದಂಥ ಪರಿಸ್ಥಿತಿಯಿದೆ. ಇಂಜಿನಿಯರುಗಳಿಗೆ ಎಷ್ಟು ಬಾರಿ ಕೇಳಿಕೊಂಡರೂ 3 ತಿಂಗಳು, 4 ತಿಂಗಳುಗಳಾದರೂ ಟಿ.ಸಿ. ಅಳವಡಿಸುವುದಿಲ್ಲ. ಹಳ್ಳಿ ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಜೆ 6 ಗಂಟೆಯಿಂದ 9 ಗಂಟೆಯವರೆಗೆ ಕರೆಂಟ್ ಕೊಡಿ ಎಂದರೆ ಕೊಡುವುದಿಲ್ಲ. ಬದಲಾಗಿ ರಾತ್ರಿ 9 ಗಂಟೆಯಿಂದ 12 ಗಂಟೆಯವರೆಗೆ ಕರೆಂಟ್ ಕೊಡುತ್ತಾರೆ. ಎಲ್ಲರೂ ಮಲಗಿದ ಮೇಲೆ ಕರೆಂಟ್ ಕೊಡುತ್ತಾರೆ. ಯಾವ ಮಟ್ಟಕ್ಕೆ ಇದೆ ಎನ್ನುವುದನ್ನು ನೀವು ಅರ್ಥ ಮಾಡಿಕೊಳ್ಳಬೇಕು. ಬರಗಾಲದಲ್ಲಿ ರೈತರು ಬೆಳೆದ ಬೆಳೆಗಳೆಲ್ಲಾ ಸರ್ವನಾಶ ಆಗಿರುವುದರಿಂದ ಬೆಳೆದಿರುವ ಬೆಳೆದಿರುವ ಬೆಳೆಗಾದರೂ ಮಾರುಕಟ್ಟೆ ವ್ಯವಸ್ಥೆ ಮಾಡಿ, ದುಡ್ಡಾದರೂ ಕೊಡಿ. ಕೊಡುವುದಕ್ಕೆ ನಿಮಗೆ ಏನು ತೊಂದರೆಯಾಗುತ್ತಿದೆ ಹೇಳಿ. ರೈತರು ಬೆಳೆದಿರುವ ಬೆಳೆಗೆ ಮಾರುಕಟ್ಟೆ ವ್ಯವಸ್ಥೆ ಮಾಡುವ ಯಾವ ಒಬ್ಬ ಅಧಿಕಾರಿಯೂ ಈ ರಾಜ್ಯದಲ್ಲಿ ಇಲ್ಲವೇ? ಒಂದು ಟೀಮ್ ಮಾಡಿ, ಮಾನ್ಯ ರವೀಂದ್ರನಾಥ್‌ರವರೇ ನೀವು ಒಬ್ಬ ರೈತರ ಮಗ ಆಗಿದ್ದೀರಿ, ನಿಮಗೆ ರೈತರ ಬಗ್ಗೆ ಕಾಳಜಿ ಇದೆ. ಆದರೆ,ಕಾಳಜಿ ಇದ್ದರೂ ನಿಮಗೆ ಮಾಡಲು ಬಿಡುತ್ತಿಲ್ಲ. ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಏನಾಯಿತು ಎನ್ನುವುದನ್ನು ಹೊಗಳಿಕೆಯಿಂದ ಹೇಳಿಕೊಳ್ಳುವ ಅಗತ್ಯವಿಲ್ಲ, ಮಾಹಿತಿ ಕೊಡುವುದಕ್ಕಾಗಿ ಹೇಳುತ್ತಿದ್ದೇನೆ. ಕೃಷಿ ಮಂತ್ರಿಗಳು ಉತ್ತರ ಕೊಡುವಾಗ ಹೇಳಲಿ; ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆಯಲ್ಲಿ ಎಷ್ಟು ಜನ ಅಧಿಕಾರಿಗಳಿದ್ದರು. ನಿಮಗೆ ರೈತರ ಬಗ್ಗೆ ಕಾಳಜಿ ಇದ್ದರೆ 2 ಇಲಾಖೆಯ ಖಾಲಿ ಇರುವ ಅಧಿಕಾರಿಗಳ ಹುದ್ದೆಗಳನ್ನು ತುಂಬುವುದಕ್ಕೆ ಏನು ತೊಂದರೆ? ಹಣಕಾಸು ಇಲಾಖೆಯಲ್ಲಿ ಎಲ್ಲ ವಿಷಯಗಳಿಗೂ approval ಕೊಡಿಸುತ್ತೀರಿ. ಇಂಥ ಭೀಕರ ಬರಗಾಲದಲ್ಲಿ ಕೃಷಿ ಇಲಾಖೆ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳಲ್ಲಿ ಕೆಲಸ ನಿರ್ವಹಿಸಲು ಅಧಿಕಾರಿಗಳಿದ್ದಾರೆಯೇ? ಇವತ್ತು Field Assistants ಇಲ್ಲ. ಸುಮಾರು 10 ರಿಂದ 12 ಸಾವಿರ ಹುದ್ದೆಗಳು ಖಾಲಿಯಿವೆ. ಕುಮಾರಸ್ವಾಮಿರವರ ಕಾಲದಲ್ಲಿ ತೋಟಗಾರಿಕಾ ಮಂತ್ರಿಗಳು ಯಾರಿದ್ದರೋ ಗೊತ್ತಿಲ್ಲ, ಸುಮಾರು 2000 ಹುದ್ದೆಗಳ appointment ಆಯಿತು, ಅದನ್ನು ಹೊರತುಪಡಿಸಿ Agriculture Assistant Directors, Horticultures Assistant Directorಗಳು, assistantಗಳು ಇತ್ಯಾದಿ 4 ರಿಂದ 5 ಸಾವಿರ

ಹುದ್ದೆಗಳನ್ನು ತುಂಬಿರುವುದನ್ನು ಬಿಟ್ಟರೆ ಇವತ್ತಿನವರೆಗೆ ಈ ಸರ್ಕಾರಬಂದ ಮೇಲೆ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಇಲಾಖೆಯಲ್ಲಿ ಎಷ್ಟು ಖಾಲಿ ಹುದ್ದೆಗಳನ್ನು ತುಂಬಿಸಿದ್ದೀರಾ? ಹೇಳಿ. Basically ರೈತರ ಬಗ್ಗೆ ಕಾಳಜಿ ಇರುವುದಾದರೆ, ಎಷ್ಟು ಹುದ್ದೆಗಳು ಖಾಲಿ ಇವೆ ಹೇಳಿ. 5 veterinary ಕಾಲೇಜುಗಳನ್ನು ತೆರೆಯಿರಿ, ಏನು ತೊಂದರೆಯಿದೆ? Veterinary ಕಾಲೇಜುಗಳಲ್ಲಿ ಸೀಟುಗಳನ್ನಾದರೂ ಜಾಸ್ತಿ ಮಾಡಿ, ಇದಕ್ಕೆ ನಿಮಗೆ ಏನು ತೊಂದರೆಯಿದೆ? ಇವತ್ತು ಪಶುಸಂಗೋಪನಾ ಇಲಾಖೆಯಲ್ಲಿ 240 ರಿಂದ 300 ವೈದ್ಯರ ಸೀಟುಗಳಿವೆ. ಈ ರಾಜ್ಯದಲ್ಲಿ ಎಷ್ಟು ಆಸ್ಪತ್ರೆಗಳಿವೆ? ನೀವು ಏತಕ್ಕಾಗಿ ಈ ಆಸ್ಪತ್ರೆಗಳನ್ನು upgradation ಮಾಡಿದ್ದೀರಿ? ಒಂದೋ ಎರಡೋ ಹೇಳುವುದು, ರೈತರ ಬಗ್ಗೆ ಸಂಪೂರ್ಣವಾಗಿ ಈ ಸರ್ಕಾರಕ್ಕೆ ಕಾಳಜಿ ಇಲ್ಲ. ಈ ಸರ್ಕಾರದ ಆಡಳಿತಾವಧಿಯ 4ವರ್ಷಗಳಲ್ಲಿ 3 ಜನ ಮುಖ್ಯಮಂತ್ರಿಳನ್ನು ನೋಡಿದ್ದೇವೆ. 3 ಜನ ಮುಖ್ಯಮಂತ್ರಿಗಳ ಬದಲಾವಣೆಯನ್ನು ಬಿಟ್ಟರೆ ಹೊಸ ಕಾರ್ಯಕ್ರಮ ಯಾವುದಾದರೂ ಬದಲಾವಣೆ ಮಾಡಿದ್ದೀರಾ?ನಾನು ಹೇಳುವುದು ದಯಮಾಡಿ, ಈಶ್ವರಪ್ಪನವರು ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಹೀಗೆ 2 ಕಡೆ ಇದ್ದಾರೆ. ನೀರಾವರಿ ಇಲಾಖೆ ತೆಗೆದುಕೊಳ್ಳುತ್ತಾರೆಂದು ನಿರೀಕ್ಷಿಸಿದ್ದೆ, ಸ್ವಲ್ಪ ಕೋಪ ಜಾಸ್ತಿ ಅಷ್ಟೇ, ಕೆಲಸ ಮಾಡುವುದರಲ್ಲಿ ಈಸ್ವರಪ್ಪನವರು ಹಿಂದೆ ಬೀಳುವುದಿಲ್ಲ, ಆದರೆ ನಮ್ಮ ಬಗ್ಗೆ ವೈಯುಕ್ತಿಕವಾಗಿ ಸ್ವಲ್ಪ ಅನುಕಂಪ ಇದೆ. ಈ ಕಾರಣದಿಂದ ಕಂದಾಯ ಮಂತ್ರಿಗಳಲ್ಲಿ ಮನವಿ ಮಾಡುವುದಿಷ್ಟೇ, ನೀವು ರೈತರ ಮಕ್ಕಳು, ನಿಮ್ಮ ಮುಖ್ಯಮಂತ್ರಿಗಳಿಗೆ ಹೇಳಿ, ಹಣಕಾಸು ಇಲಾಖೆ ಕಾರ್ಯದರ್ಶಿಗಳನ್ನು ನಾಳೆ ಕರೆಯಿಸಿ ಅಥವಾ ಸದನದಲ್ಲಿ ಒಂದು ಸಮಿತಿ ಮಾಡಿ, ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ, ಪಶುಸಂಗೋಪನಾ ಇಲಾಖೆ ಮತ್ತು ರೇಷ್ಮೆ ಇಲಾಖೆಗಳಲ್ಲಿ ಖಾಲಿ ಇರುವ ಅಷ್ಟೂ ಹುದ್ದೆಗಳನ್ನು ಎಷ್ಟು ದಿವಸಗಳಲ್ಲಿ ಭರ್ತಿ ಮಾಡುತ್ತೀರಿ ಎಂದು ಹೇಳಿ. ಬರಗಾಲದ ನಿರ್ವಹಣೆಯನ್ನು ಎಷ್ಟು ಇಲಾಖೆ ಎಷ್ಟು ದಿನದಲ್ಲಿ ನಿರ್ವಹಣೆ ಮಾಡುತ್ತದೆ ಎಂದು ಹೇಳಬೇಕು. ನಿರ್ವಹಣೆ ಮಾಡುತ್ತಿಲ್ಲ, ಈ ಕಾರಣದಿಂದ ನಾನು ಹೇಳುತ್ತಿರುವುದು, ಕೂಡಲೇ ಈ ಇಲಾಖೆಗೆ ಸಂಬಂಧಪಟ್ಟ ಎಷ್ಟು ಹುದ್ದೆಗಳು ಖಾಲಿ ಇದೆಯೋ ಅಷ್ಟು ಹುದ್ದೆಗಳನ್ನು ನೇಮಕ ಮಾಡಿ, ಇದರ ಜೊತೆಗೆ ವೈದ್ಯರುಗಳ ಹುದ್ದೆ ಖಾಲಿ ಇದೆ, ನಮ್ಮನ್ನು ನೋಡಿಕೊಳ್ಳುವುದಕ್ಕೆ ವೈದ್ಯರುಗಳು ಸಿಗುತ್ತಾರೆ. ನಮಗೆ ಸರ್ಕಾರದಿಂದ ದುಡ್ಡು ಕೊಡುತ್ತಾರೆ. ನಮ್ಮನ್ನು ಕ್ಲೀನಾಗಿ ನೋಡಿಕೊಳ್ಳುತ್ತಾರೆ. ಬೇಕಾದರೆ ಇದರ ಜೊತೆಗೆ 50 ಮಾತ್ರೆ ಎಕ್ಸ್ಟ್ರಾ ಬರೆಯಿಸಿ ರಸೀದಿ ಹಾಕಿಸಿಕೊಳ್ಳಬಹುದು. ಆದರೆ, ದನಗಳನ್ನು ಕೇಳುವವರು ಯಾರಿದ್ದಾರೆ? 3 ಕಡೆ

ಚೆಕಿಂಗ್ ಹೋಗುತ್ತಾರೆ. 3 ಇಲ್ಲವೇ 4 ಕಡೆ ಹೋಗಲಿ ನಾನು ಕೇಳುವುದಿಲ್ಲ. ನಾನು ಕೇಳುತ್ತಿರುವುದು ಪಶುಸಂಗೋಪನಾ ಇಲಾಖೆಯಲ್ಲಿ ವೈದ್ಯರುಗಳ ಹುದ್ದೆಗಳಿಲ್ಲ. ಬೀದರ್, ಶೀವಮೊಗ್ಗ, ಹಾಸನಕ್ಕೆ ಸರ್ಕಾರ ರೂ.500 ಕೋಟಿ ಖರ್ಚು ಮಾಡುವುದಕ್ಕೆ ಕೊಡಿ. ಇನ್ನೂ 4 ಪಶುಸಂಗೋಪನಾ ಕಾಲೇಜುಗಳನ್ನು ಮಾಡಿ. ಈಗ ಶಿವಮೊಗ್ಗ, ಬೀದರ್, ಹಾಸನ ಮತ್ತು ಬೆಂಗಳೂರಿನಲ್ಲಿ ಮಾಡಿದ್ದೀರಿ. ಇನ್ನು 4 ಕಡೆ ಮಾಡಿ ಅಥವಾ ಈ ಕಾಲೇಜುಗಳಲ್ಲಿ ಸೀಟುಗಳನ್ನು ಜಾಸ್ತಿ ಮಾಡಿ. 90% ಅಂಕ ಪಡೆದಂಥವರಿಗೆ ಪಶುಸಂಗೋಪನಾ ಕಾಲೇಜುಗಳಲ್ಲಿ ಸೀಟು ಸಿಗುತ್ತಿಲ್ಲ. ಒಂದು ಕಡೆ ಮಕ್ಕಳು ಪಶುಸಂಗೋಪನಾ ಕಾಲೇಜಿಗೆ ಸೇರಿಕೊಳ್ಳುತ್ತೇವೆಂದು 95%, 98% ಅಂಕ ಪಡೆದರೂ ಸೀಟು ಸಿಗುತ್ತಿಲ್ಲ. 4 ಕಾಲೇಜುಗಳನ್ನು ಮಾಡಿ 200 ಸೀಟುಗಳನ್ನು Extra ಮಾಡಿ, ತೊಂದರೆ ಏನಿದೆ? ಇದಕ್ಕಾಗಿ ರೂ.500 ಕೋಟಿ ಹಣ ಕೊಡುವಂಥ ಕೆಲಸವನ್ನು ಮಾಡಬೇಕೆಂದು ಮನವಿ ಮಾಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ, ವಿಧಾನಸಭಾ ಸದಸ್ಯರು: ಇದರ ಜೊತೆಗೆ ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವುದಕ್ಕೆ ನೀರು ಸಿಗುವುದಿಲ್ಲವೆಂದು ನಮ್ಮ ರಾಜ್ಯದ ಸಣ್ಣ ನೀರಾವರಿ ಮಂತ್ರಿಗಳೇ ಹೇಳಿಕೆ ನೀಡಿದ್ದಾರೆ. ಒಂದು ಕಡೆ ಕೇಂದ್ರದ ಕೃಷಿ ಮಂತ್ರಿಗಳಾದ ಶರತ್ ಪವಾರ್ ರವರು ಹೇಳುತ್ತಾರೆ. ಒಂದು ಕಡೆ ರಾಜ್ಯದ ನೀರಾವರಿ ಮಂತ್ರಿಗಳು ಹೇಳುತ್ತಾರೆ. ಇವತ್ತು 3574 minor Irrigation tank ಗಳಿವೆ. ಅವುಗಳನ್ನು slit ತೆಗೆಸಿ ಎಷ್ಟು ವರ್ಷ ಆಗಿದೆ ಸ್ವಾಮಿ? 50 ವರ್ಷ, 60ವರ್ಷ, 70 ವರ್ಷ, 100 ವರ್ಷಗಳಾದರೂ ಟುಣ ತೆಗೆಸಲು ಆಗಿಲ್ಲ. ಕೆಲವು ಕಡೆ ತೂಬು ರಿಪೇರಿ ಮಾಡಿಲ್ಲ. ಹೇಗೂ ಇಂದು ರಾಜ್ಯದಲ್ಲಿ ಬರ ಇದೆ. ಆ tank ಗಳನ್ನು renovation ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಕೇಳಿ. ನೀವು ಒಂದು ನಿರ್ಣಯ ಮಾಡಿ. ಇಂದು ರಾಜ್ಯದಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಬಿಟ್ಟು ಹಾಕಿ. ಇಂದು ಸದನದಲ್ಲಿ ಸಿದ್ದರಾಮಣ್ಣನವರು ಇಲ್ಲ. ಉಪ ನಾಯಕರಾದ ಜಯಚಂದ್ರ ರವರಿದ್ದಾರೆ. ಕೇಂದ್ರಸರ್ಕಾರದ ಮೇಲೆ ಒತ್ತಡ ತರಬೇಕು. ಸಿದ್ದರಾಮಣ್ಣನವರು ಕೇಂದ್ರದ ಮಂತ್ರಿಗಳ ಜೊತೆ ಆದಷ್ಟು ಪ್ರಯತ್ನ ಪಟ್ಟರು. ಅವರು ಏನೇ ಪ್ರಯತ್ನ ಪಟ್ಟರೂ ಕೇಂದ್ರಸರ್ಕಾರದವರು ಸಿದ್ದರಾಮಣ್ಣನವರ ಮೇಲೆ ಕರುಣೆ ತೋರಿಸಲಿಲ್ಲ. ಏಕೆಂದರೆ, ನಾನು ನಿಯೋಗದೊಡನೆ ಹೋಗಿದ್ದ ಸಂದರ್ಭದಲ್ಲಿ ನಡೆದ ಸಭೆಯಲ್ಲಿ ಕುಳಿತು ನೋಡಿದೆ. ಕೇಂದ್ರಸರ್ಕಾರ ರಾಜ್ಯಸರ್ಕಾರದ ಮೇಲೆ ಕರುಣೆ ತೋರಿಸಿತು. ರಾಜಕಾರಣ ಏನೇ ಇರಲಿ. ಯಾವ ಪಕ್ಷ ಇರಲಿ, ಅದು ನನಗೆ ಸಂಬಂಧವಿಲ್ಲ.

ಇವತ್ತು ರಾಜ್ಯದ ಇಂತಹ ಪರಿಸ್ಥಿತಿಯಲ್ಲಿ ಕೇಂದ್ರಸರ್ಕಾರ, ರಾಜ್ಯ ಸರ್ಕಾರಗಳೆರಡು ಮತ್ತು ನಮ್ಮ ರಾಜ್ಯದ 5 ಜನ ಮಂತ್ರಿಗಳಿದ್ದಾರೆ. ಆ 5 ಜನ ಮಂತ್ರಿಗಳನ್ನು ರಾಜ್ಯಸರ್ಕಾರ approach ಮಾಡಿ ಅವರಿಗೆ ಒತ್ತಾಯ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಜನರು ಎರಡೂ ಸರ್ಕಾರದ ಮೇಲೆ ಧಂಗೆ ಏಳ ಬೇಕಾಗುತ್ತದೆ. ರಾಜ್ಯಸರ್ಕಾರ ಇರಬಹುದು, ಕೇಂದ್ರಸರ್ಕಾರ ಇರಬಹುದು. ಈ ಎರಡು ಸರ್ಕಾರಗಳ ಮೇಲೆ ರಾಜ್ಯದ ಜನ ಧಂಗೆ ಏಳುವುದಕ್ಕೆ ನಾವೆಲ್ಲಾ ಸೇರಿ ನಿರ್ಣಯ ಮಾಡೋಣ ಇವತ್ತು.

ಶ್ರೀ ಉಮೇಶ್ ವಿ.ಕತ್ತಿ (ಕೃಷಿ ಸಚಿವರು) : ಸರ್ವ ಪಕ್ಷದ ನಿಯೋಗದಲ್ಲಿ ತಾವೂ ಬಂದಿದ್ದೀರಿ. ನೀವೂ, ನಾವು ಜೊತೆಯಾಗಿ ಹೋಗಿ ನಮ್ಮ ರಾಜ್ಯದ 5 ಜನ ಮಂತ್ರಿಗಳನ್ನು ಭೇಟಿಯಾಗಿದ್ದೇವೆ.

ಶ್ರೀ ಹೆಚ್.ಸಿ. ಬಾಲಕೃಷ್ಣ, ವಿಧಾನಸಭಾ ಸದಸ್ಯರು : ಅದನ್ನೇ ಅವರೂ ಹೇಳುತ್ತಿರುವುದು.

ಶ್ರೀ ಉಮೇಶ್ ಕತ್ತಿ : ಮತ್ತೆ ನಮ್ಮ ಸರ್ಕಾರದ ಮೇಲೆ ಏಕೆ ಧಂಗೆ ಏಳಬೇಕು?

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ನಾನು ರಾಜ್ಯಸರ್ಕಾರ ಮತ್ತು ಕೇಂದ್ರಸರ್ಕಾರದ ಮೇಲೆ ಎಂದು ಹೇಳುವುದಲ್ಲ. ನಾನು ಅವರ ಪರಿಸ್ಥಿತಿ ನೋಡಿದೆ ಅವತ್ತು. ಒಂದು ಕಡೆ ರಾಜ್ಯಸರ್ಕಾರದ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಮಂತ್ರಿಗಳ ಮೇಲೆ ಒತ್ತಡ ತಂದಾಗ ರಾಜ್ಯದ ಮಂತ್ರಿಗಳು ಯಾವ ರೀತಿ ನಡೆದುಕೊಂಡರು. ನಮ್ಮ ಸಿದ್ಧರಾಮಣ್ಣನವರು ಪಾಪ, ಎಷ್ಟೋ ಗೋಗರೆದರು ಸಾರ್, ಇಲ್ಲ ಸೋನಿಯಾ ಗಾಂಧಿಯವರು ಒಂದು 2 ದಿನವಾಯಿತು, ಅದಕ್ಕಾದರೂ ಒಂದಷ್ಟುದುಡ್ಡು release ಮಾಡಿ ಎಂತಲೂ ಕೇಳಿದರು. ಸಿದ್ದರಾಮಣ್ಣನವರು ಪ್ರಾಮಾಣಿಕಪ್ರಯತ್ನ ಮಾಡಿದರು. ಅದರ ಬಗ್ಗೆ ರಾಜಕೀಯ ಹೇಳುವುದು ಬೇಡ. ನಾನು ಹೇಳುವುದು, ನೀವು ಅವರ ಮೇಲೆ ಹೇಳುವುದು, ಇವರ ಮೇಲೆ ಹೇಳುವುದು ಬೇಡ. ಅವರ ಕೈಯ್ಯಲ್ಲಿ ಮಾಡಲು ಆಗುವುದಿಲ್ಲ ಎಂದರೆ ಅವರು ಕೇಂದ್ರಸರ್ಕಾರಕ್ಕೆ ಈ ತರಹ ಮಾಡುವುದಕ್ಕೆ ಆಗುತ್ತಿಲ್ಲ, ರಾಜ್ಯದ ಬರಗಾಲ ನಿರ್ವಹಣೆ ಮಾಡುವುದಕ್ಕೆ ಆಗುತ್ತಿಲ್ಲ ಎಂದು ನೀವು ಘೋಷಣೆ ಮಾಡಿ. ಅವರು ಕೊಡದೆ ಹೋದರೆ ಒಂದು ಎರಡು ಸಾವಿರ ಕೋಟಿ ಬೇರೆಯದರ ದುಡ್ಡನ್ನು ತೆಗೆದು ಇಟ್ಟು ಈ ವರ್ಷ ನಾವು ಮಾಡುತ್ತೇವೆ ಎಂದು ಹೇಳಿ. ಈಗ ಪಿ.ಡಬ್ಲ್ಯೂಡಿಯಲ್ಲಿAppendix–E ಇಲ್ಲ. ಈ ವರ್ಷ ಒಂದೂ ಕಾಮಗಾರಿ ತೆಗೆದುಕೊಂಡಿಲ್ಲ. Last Year building ಕಾಮಗಾರಿ ತೆಗೆದುಕೊಂಡಿಲ್ಲ. ಎಲ್ಲಾ ಇಲಾಖೆಗಳನ್ನು ಮುಚ್ಚಿ ಬರಗಾಲದ ಬಗ್ಗೆ

ತೆಗೆದುಕೊಳ್ಳಿ. ರೈತರ ಬಗ್ಗೆ ಒಂದು ನಿರ್ಣಯ ಮಾಡಿ. ಒಟ್ಟು 123 ತಾಲ್ಲೂಕುಗಳಲ್ಲಿ 35 ತಾಲ್ಲೂಕಿನಲ್ಲಿ ನೀರಿನಲ್ಲಿ ವಿಷ ಎಂದು ಮಂತ್ರಿಗಳು ರಿಪೋರ್ಟ್ ಮಾಡಿದ್ದಾರೆ. ನಾನಲ್ಲ. ಮಂತ್ರಿಗಳು ಆ ರೀತಿ ಹೇಳಿದ್ದಾರೆ. ನಮ್ಮಲ್ಲಿ ಈಗ ದೇವಸ್ಥಾನ ಕಟ್ಟಿದ್ದಾರೆ. ಏನೂ ಆಗಿಲ್ಲ. ಇವರು ದೇವಸ್ಥಾನದಲ್ಲಿಯೇ ಪೂಜೆ ನಡೆಯುತ್ತಿಲ್ಲ. ಕೆಲವು ದೇವಸ್ಥಾನಗಳಲ್ಲಿ ಸಾಕಷ್ಟು ಹಣ ಬಂದಿದೆ. 2 ಸರ್ಕಾರಗಳ ಕೈಯಲ್ಲಿ ಆಗುವುದಿಲ್ಲವೆಂದರೆ, ಹಿಂದೆ ಯಾರೋ ಒಂದು ಸಾರಿ ಎಲ್ಲಾ ದೇವಸ್ಥಾನಗಳಿಗೆ, ಮಳೆ ಬರುವ ಹಾಗೆ ಅಥವಾ ಬರಗಾಲ ನಿರ್ವಹಣೆ ಮಾಡಿ ರೈತರಿಗೆ ಯಾವುದೇ ತೊಂದರೆ ಆಗದೆ ಹಾಗೆ ಪೂಜೆ ಮಾಡುವ ಹಾಗೆ ಒಂದುG.O. issue ಮಾಡಿಸಿದ್ದರು ಸ್ವಾಮಿ. ಆರೀತಿ ಪ್ರಾರ್ಥನೆ ಮಾಡಿ ಎಂದು ಎಲ್ಲಾ ದೇವಸ್ಥಾನಗಳಿಗೂ ನಾಳೆಯೇ G.O issue ಮಾಡಿಸಿ! ಹೇಗೂ ಶ್ರಾವಣ ಮಾಸ ಪ್ರಾರಂಭವಾಗಿದೆ. ಈಗ ಮುಜರಾಯಿ ಸಚಿವರು ಯಾರು? ನಿಂಬೆಹಣ್ಣುಬೇಕಾದರೆ ನಿಮಗೂ ಒಂದು ಕಳುಹಿಸುತ್ತೇವೆ, ನಿಮಗೆ ಏನಾದರೂ ತೊಂದರೆ ಆಗುವುದಾದರೆ ಯಾವಾಗಲೂ ಇಟ್ಟುಕೊಳ್ಳಿ. ಏಕೆಂದರೆ, ನಿಮ್ಮ ಬಿ.ಜೆ.ಪಿ ಸರ್ಕಾರ clean ಆಗಿ ನಡೆಯಬೇಕೆಂದರೆ ನಿಂಬೆಹಣ್ಣು ಕಳುಹಿಸಿಕೊಡುತ್ತೇನೆ, ಒಬ್ಬೊಬ್ಬರು ನಿಮ್ಮ ಜೇಬಿನಲ್ಲಿ ಇಟ್ಟುಕೊಳ್ಳಿ. ನಾವೇನು ಬೇಡ ಎನ್ನುತ್ತೇವೆಯೇ? ಮಳೆ ಬರುವುದಾದರೆ ಹೋಮ-ಹವನ ಏನು ಬೇಕೋ ಮಾಡಿಸೋಣ ಬನ್ನಿ.

ಶ್ರೀ ಉಮೇಶ್ ಕತ್ತಿ : ರೇವಣ್ಣನವರ ಬಳಿ ರಾಜ್ಯದಲ್ಲಿ ಮಳೆ ಆಗಬೇಕಾದರೆ ಯಾವ ಹೋಮ-ಹವನ ಮಾಡಿಸಬೇಕೆಂಬ ಮಾಹಿತಿ ಇದೆ. ಅದನ್ನು ಅವರು ಹೇಳಲಿ. ಪೂಜೆ ಮಾಡಿಸುವುದನ್ನು ಮಾಡಿಸೋಣ. ಹೋಮ-ಹವನ, ಯಾವ ಪೂಜೆ ಮಾಡಿದರೆ ಯಾವಾಗ ಮಳೆ ಆಗುತ್ತದೆ ಎಂಬುದನ್ನು ಹೇಳಿ. ರಾಜ್ಯಕ್ಕೆ ಒಳ್ಳೆಯದಾಗಲಿ ಅಷ್ಟೆ.

ಶ್ರೀ ಹೆಚ್.ಡಿ.ರೇವಣ್ಣ : ಮುಜರಾಯಿ ಇಲಾಖೆಯನ್ನು ಬೇಕಾದರೆ ಉಮೇಶ್ ಕತ್ತಿ ಅವರಿಗೆ additional ಆಗಿ ಕೊಡೋಣ. ಈಗ ಕೃಷಿ ಸಚಿವರಾಗಿದ್ದಾರೆ, ಅದರ ಜೊತೆ ಮುಜರಾಯಿ ಇಲಾಖೆಯನ್ನು ಕೊಟ್ಟು, ಯಾರ್‍ಯಾರು ಅಯ್ಯನವರು ಇದ್ದಾರೆ ಅವರನ್ನು ಕರೆಸಿ, ಮಳೆ ಬರಲು ಏನು ಮಾಡಬೇಕೆಂದು ಅವರನ್ನೇ ಕೇಳಿ ಹೋಮ ಮಾಡಿಸಲಿ. ನಾವೇನು ಬೇಡವೆಂದು ಹೇಳುವುದಿಲ್ಲ. ಬೇಕಾದರೆ ಸರ್ಕಾರದಲ್ಲಿ ದುಡ್ಡಿಲ್ಲವೆಂದರೆ, ನಾವು ನಮ್ಮ ಪಕ್ಷದಲ್ಲಿ 26 ಜನ ಎಂ.ಎಲ್.ಎ ಗಳು ನಮ್ಮ ಒಂದು ತಿಂಗಳ ಸಂಬಳವನ್ನು ಕೊಡುತ್ತೇವೆ, ಪೂಜೆ ಮಾಡಿಸುವಾಗ ಬೇಕಾದರೆ ನಮಗೂ

ತೊಂದರೆ ಆಗುವ ಹಾಗೆ ಪೂಜೆ ಮಾಡಿಸುತ್ತೇವೆ, ಬೇಡ ಎನ್ನುವುದಿಲ್ಲ! ಮಳೆ, ಅದು ಎರಡು ಸೇರಿಸಿ. ನಾನು ಹೇಳುವುದು ಕೇವಲ ಹಿಂದಿನ ಕಾಲದಲ್ಲಿ ನಡೆಯುತ್ತಿತ್ತು. ಮಾಡಿ, ಬೇಡವೆಂದು ನಾನು ಹೇಳುವುದಿಲ್ಲ. ಅದು ಒಂದು ಕಡೆ ಇರಲಿ. ಇದರ ಜೊತೆಗೆ ಇವತ್ತು ಈ ಬರಗಾಲದಲ್ಲಿ ನಿಜವಾದ ಬಡವರಿಗೆ ಹಸಿರು ಕಾರ್ಡ್ ಕೊಡಲು ನಿಮಗೆ ಏನು ತೊಂದರೆ? ತಹಶೀಲ್ದಾರ್, Village Accountant,Revenue Inspector ರವರುಗಳು ನಿಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿಲ್ಲವೇನು? ಹಿಂದೆ ರಾಮಕೃಷ್ಣ ಹೆಗಡೆ, ದೇವೇಗೌಡರ ಕಾಲದಲ್ಲಿ ಬರಿ ಮಹಾತ್ಮಗಾಂಧಿ ಕಾರ್ಡ್, 2 ರೂ. ಕಾರ್ಡ್. ಆಗ ರಾಜ್ಯದಲ್ಲಿ ತಹಶೀಲ್ದಾರ್ ರವರು ನಿರ್ವಹಣೆ ಮಾಡಲಿಲ್ಲವೇನು? Computer ಮಾಡಿ ಅವರು ದುಡ್ಡು ಹೊಡೆಯುವುದಕ್ಕೆ ದುಡ್ಡು ಕೊಟ್ಟು, ಒಂದು ಕಡೆ ಸಿದ್ದರಾಮಣ್ಣನವರು ಹೇಳುತ್ತಿದ್ದರು.Generator ಇಲ್ಲವೆಂದು ಒಂದು ಕಡೆ ಹೇಳುತ್ತಾರೆ. Battery System ಹಾಕಿಕೊಂಡಿದ್ದರು. ಅದನ್ನುON ಮಾಡಿದರೆ ON ಆಗುವುದಿಲ್ಲವೆಂದು ಹೇಳುತ್ತಾರೆ. ಅವನ್ನೆಲ್ಲಾ ತೆಗೆದು ಹಾಕಿ. ಈ ಬರಗಾಲದಲ್ಲಿ 6 ತಿಂಗಳ ಮಟ್ಟಿಗೆ ನಮ್ಮ ರಾಜ್ಯದ ರೈತರು ಯಾರು ಇದ್ದಾರೆ, ಬಡವರು ಯಾರು ಇದ್ದಾರೆ ಪತ್ತೆ ಹಚ್ಚಿ. ಅವರಿಗೆ ಸರಿಯಾಗಿ ಕಾರ್ಡ್ ಹಂಚಿಕೆ ಮಾಡದ, ನಿರ್ವಹಣೆ ಮಾಡದ village Accountantನ್ನು ಒಂದು ವರ್ಷ ಜೈಲಿಗೆ ಹಾಕಿ. ನಾವು ಬೇಡವೆನ್ನುವುದಿಲ್ಲ. ನಿಜವಾದ ಬಡವರಿಗೆ ರೇಷನ್ ಕಾರ್ಡ್ ಕೊಡಲು ಏನು ತೊಂದರೆ? ಹೋದರೆ ಒಂದು 200 ಕೋಟಿ ಹೋಗುತ್ತದೆ ಸರ್ಕಾರದ್ದು. ಇದು ಕೇಂದ್ರಸರ್ಕಾರದಿಂದ ಹಣ ಕೊಡುತ್ತಿರುವುದು. ಕೇಂದ್ರ ಸರ್ಕಾರ ಹಣ ಕೊಟ್ಟು ನೀವು ಕೊಡುವ ಅಕ್ಕಿಯಲ್ಲಿಯೂ 4–5 ಕೆ.ಜಿ. ಹಿಡುದು ಎಲ್ಲರಿಗೂ ತೂಗಿಸಿದ್ದೇವೆಂದು ಹೇಳುತ್ತಿರಿ. ನಮ್ಮ ರಾಜ್ಯದ Food Minister ರವರು ಶೃಂಗೇರಿ ಶಾರದಾಂಬೆಯ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದಾರೆ. ಅದಕ್ಕಾದರೂ ಬಡ ರೈತ ಮಕ್ಕಳಿಗೆ ಅಕ್ಕಿ ಕೊಡಿಸಲು ಇನ್ನು ಒಂದು ವಾರ, 15 ದಿನದಲ್ಲಿ ಕೊಡಿಸಿ. ರಾಜ್ಯದಲ್ಲಿ ಬರಗಾಲವಿದೆ. ತಹಶೀಲ್ದಾರ್ ರವರಿಗೆ, Viilage Accountant ಗಳಿಗೆ, Revenue Inspector ಗಳಿಗೆ ಹೇಳಿ. ಅವರು ಮಾಡಲಿಲ್ಲವೆಂದರೆ ಬಲಿ ಹಾಕಿ. ಅವರಿಗೆ computer ಏಕೆ ಬೇಕು? ಮಹಾತ್ಮಗಾಂಧಿ ಕಾರ್ಡ್, ಕೊಡಿ ಒಂದು 6 ತಿಂಗಳು ಬೋರ್ಡ್ ಹಾಕಿ. ಸುಮ್ಮನೆ ಹಿಂದೆ ಹಾಕಲಿಲ್ಲವೇನು? ಬೇಕಾದರೆ ವಾಜಪೇಯಿಯವರ ಹೆಸರನ್ನೇ ಹಾಕಿಕೊಳ್ಳಿ. ಬೇಡವೆಂದು ಹೇಳುವುದಿಲ್ಲ. ಒಟ್ಟಿನಲ್ಲಿ ನಮಗೆ ಕಾರ್ಡ್ ಕೊಡಿ. ಕೊಡಲಾಗುವುದಿಲ್ಲವೆಂದರೆ ಸಂಪೂರ್ಣವಾಗಿ

ಹೇಳಿ. ನಮ್ಮ ಕೈಯಲ್ಲಿ ಬಡವರಿಗೆ ಬರಗಾಲದಲ್ಲಿಯೂ ಅಕ್ಕಿ ಕೊಡಲು ಆಗುವುದಿಲ್ಲ. ಇವತ್ತು ಬರಗಾಲ ನಮಗಿದೆ, ಬಿ.ಜೆ.ಪಿ ಪಕ್ಷಕ್ಕೆ, ಬಿ.ಜೆ.ಪಿ ಪಕ್ಷದ ಶಾಸಕರಿಗೆ ಬರಗಾಲವಿದೆ ಎಂದು ಹೇಳಿ. ಇನ್ನೂ ಸ್ವಲ್ಪ ಬರಗಾಲವಿದೆ, ಅದು fulfill ಆಗುವವರೆಗೆ ಬಡ ರೈತರಿಗೆ ಅಕ್ಕಿ ಕೊಡುವುದು, ಬರಗಾಲದ ಕಾರ್ಯಕ್ರಮಗಳನ್ನು ಮಾಡುವುದಿಲ್ಲ ಎಂದು ಹೇಳಿ. ಯಾಕೆ ಬೇಕು ಸಾರ್. ಸುಮ್ಮನೆ ಮಹದೇವ ಪ್ರಸಾದ್ ರವರ ಮೇಲೆ ಹೇಳುವುದು? ಮಹದೇವ ಪ್ರಸಾದ್, ನಾವು ಎಲ್ಲರೂ failure ಆಗಿದ್ದೇವೆ. ನೀವು ಮಾಡಿ. 4 ವರ್ಷದಿಂದ ನಿಮಗೆ ಜನ ಅಧಿಕಾರ ಕೊಟ್ಟಿದ್ದಾರೆ. ನಿಮ್ಮನ್ನು ಮಾಡಬೇಡಿ ಎಂದು ಹಿಡಿದುಕೊಂಡಿದ್ದಾರೇನು?ಹೋಗಲಿ Food Department ನಲ್ಲಿ ಹಸಿರು ಕಾರ್ಡ್ ಕೊಡಿಸುವಂತಹ ಯಾವ ಒಬ್ಬ ಅಧಿಕಾರಿಯೂ ಇಲ್ಲವೇನು ಈ ರಾಜ್ಯದಲ್ಲಿ? ಕಾರಣವೇನು ಹೇಳಿ. ಹಸಿರು ಕಾರ್ಡ್ ಕೊಡಲು 4 ವರ್ಷ ಬೇಕೇನು? ಅಧಿಕಾರಿ ಸರಿಯಾಗಿಲ್ಲವೆಂದು ಕಿತ್ತು ಹಾಕಿ. ಈಗ ಒಂದು ಕುಟುಂಬದಲ್ಲಿ 5,6,10 ಜನ ವಾಸವಿರುತ್ತಾರೆ. ಆ ಮನೆ ನಂಬರ್ ಒಂದು ಇರುತ್ತದೆ. ಆ ಮನೆ ನಂಬರ್ ಒಂದು ಇಟ್ಟು ಬಿಟ್ಟು ಇನ್ನು 9 ಜನರನ್ನು ಕಿತ್ತು ಹಾಕುತ್ತಾರೆ. ಒಂದೊಂದು ತಾಲ್ಲೂಕು ಕೇಂದ್ರದಲ್ಲಿ 5 ಸಾವಿರ, 4ಸಾವಿರ, ಜಿಲ್ಲಾ ಕೇಂದ್ರಗಳಲ್ಲಿ 10,15,20 ಸಾವಿರ ಕಾರ್ಡ್ ಕೈ ಬಿಡುತ್ತಿದ್ದಾರೆ. ಒಂದು ಮನೆ ಡೋರ್ ನಂಬರ್‌ನಲ್ಲಿ 5–6 ಕುಟುಂಬಗಳಿರುತ್ತವೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆಯೇ? ಕಂಪ್ಯೂಟರ್‌ನಲ್ಲಿ ಫೀಡ್ ಮಾಡುವಂಥದ್ದು ಇದೆಯಾ? ಇದರ ಮಾಹಿತಿ ಕೊಟ್ಟಿದ್ದೀರಾ? ಲೋಕಸಭೆ ಚುನಾವಣೆಯ ಪೂರ್ವದಲ್ಲಿ 15 ದಿವಸದಲ್ಲಿ ನೀವು ಕಾರ್ಡ್ ಕೊಡಿಸಿದ್ದೀರಲ್ಲವೇ?

ಶ್ರೀ ಡಿ.ಎನ್.ಜೀವರಾಜ್: ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರಾದ ಶ್ರೀ ಹೆಚ್.ಡಿ. ರೇವಣ್ಣನವರು ಹೇಳಿದ ಹಾಗೆ ಒಂದು ಮನೆಯಲ್ಲಿ ಆರ್.ಆರ್. ನಂಬರ್ ಚೇಂಜ್ ಇದ್ದು, ಬಾಡಿಗೆ ಮನೆಯವರು ಇದ್ದರೆ, ಅಕಸ್ಮಾತಾಗಿ assessment ಇದ್ದವರು ಇದ್ದರೆ, ಅವರ ರೇಷನ್ ಕಾರ್ಡ್‌ಗಳನ್ನು ತೆಗೆದಿದೆ ಎಂದು ಹೇಳುತ್ತಿದ್ದಾರೆ. ರೇಷನ್ ಕಾರ್ಡ್ ತೆಗೆದಂತಹ ಉದಾಹರಣೆಗಳು ನಮ್ಮ ಇಲಾಖೆಯಲ್ಲಿ ಇಲ್ಲ. ನಾವು ಒಂದು ಆರ್.ಆರ್. ನಂಬರ್‌ನಲ್ಲಿ 4 ಮನೆ ಬಾಡಿಗೆ ಕೊಟ್ಟಿದ್ದು ಇದ್ದರೆ, ಅವರಿಗೆ ಆ ರೇಷನ್ ಕಾರ್ಡ್‌ಗಳನ್ನೇ ಹಾಗೆ ಮುಂದುವರೆಸಿದ್ದೇವೆ. ನಮಗೆ ಮಾಹಿತಿ ಗೊತ್ತಾಗದೆ ಅವರ ಹತ್ತಿರ ಯಾವುದಾದರು ಮಾಹಿತಿ ಇದ್ದರೆ, ದಯಮಾಡಿ ಈ ತರಹ ಮಾಹಿತಿಗಳಿವೆ ಎಂದರೆ ಅದನ್ನು ಸರಿಪಡಿಸಿ ಕೊಡುತ್ತೇವೆ. ಆ ತರಹದ ಯಾವುದೇ ಘಟನೆಗಳು

ನಡೆದಿಲ್ಲ. ನಾವು ಯಾವುದೇರೇಷನ್ ಕಾರ್ಡ್ ತೆಗೆದಿಲ್ಲ, ತೆಗೆಯುವುದೂ ಇಲ್ಲ. ಬಹಳ ಸ್ಪಷ್ಟತೆ ಇದೆ, ಈ ವಾದ ಏಕೆ ನಡೆಯುತ್ತಿದೆ ಗೊತ್ತಿಲ್ಲ. ನಮ್ಮ ಇಲಾಖೆಯೊಳಗೆ ಹಳೆಯ ಕಾರ್ಡ್‌ಗಳು ಏನಿದೆ ಅವುಗಳಗೆ ಅಕ್ಕಿ ಕೊಡುವುದನ್ನು ನಿಲ್ಲಿಸುತ್ತೇವೆಂದು ಹೇಳಿಲ್ಲ, Income Certificate ಗೆ ನಾಡಿದ್ದು 30ನೇ ತಾರೀಖು last date ಎಂದು ಎಲ್ಲಿಯೂ ಕೂಡಾ ಹೇಳಿಲ್ಲ. ಇದರ ಚರ್ಚೆ ಅಲ್ಲಲ್ಲೇ ನಡೆಯುತ್ತಿದೆಯೇ ಹೊರತು ಇದಕ್ಕೆ ಸರ್ಕಾರದಿಂದ ಯಾವುದೇ ಆದೇಶಗಳು ಹೋಗಿಲ್ಲ. ನಾವು ಮಾನ್ಯ ಶಾಸಕರಾದ ಶ್ರೀ. ಹೆಚ್.ಡಿ. ರೇವಣ್ಣನವರು ಮಾರ್ಗದರ್ಶವನ್ನು ಕೊಟ್ಟಿದ್ದಾರೆ. ಅವರ ಸಲೆಹೆಗಳನ್ನು ಸ್ವೀಕರಿಸುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ:ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ವಾಸ್ತವಿಕವಾದಂತಹ ಅಂಶಗಳನ್ನು ಹೇಳುತ್ತಿದ್ದೀರಿ. ತಾವು ಹೊಸದಾಗಿ ಸಚಿವರಾಗಿದ್ದೀರಿ, ಈವತ್ತಿನ ಪರಿಸ್ಥಿತಿನಲ್ಲಿ ಬರ ಆವರಿಸಿರುವಂತಹ ಸಂದರ್ಭದಲ್ಲಿ ಎಲ್ಲರೂ ಕೂಡಾ ರೇಷನ್ ಕಾರ್ಡ್ ಕಡೆ ನೋಡುತ್ತಿದ್ದಾರೆ. ಇವತ್ತು ರೇಷನ್ ಕಾರ್ಡ್ ಕಡೆ ನೋಡುತ್ತಿರಬೇಕಾದರೆ, ಅವರು ರೇಷನ್ ಕಾರ್ಡ್ ಸಿಗದೆ ಇರತಕ್ಕಂತಹ ಜನರಲ್ಲಿ ಹಾಹಾಕಾರ ಆಗಿದೆ. ನೆಮ್ಮದಿ ಕೇಂದ್ರದ ಮುಂದೆ ಹೋಗಿ ನಿಂತಿರುತ್ತಾರೆ. ತಾಲ್ಲೂಕು ಆಫೀಸಿನಲ್ಲಿ ಅಲೆಯುತ್ತಿದ್ದಾರೆ. ಇದು ಎಲ್ಲಿ ಹೋದರು ಕೂಡಾ ಕೇಳುತ್ತಾರೆ. ಹಾಗಾಗಿ, clarity ಇರತಕ್ಕಂತಹ ಒಂದು ಹೇಳಿಕೆಯನ್ನು ನಿಮ್ಮ ಆಹಾರ ಇಲಾಖೆಯಿಂದ ಏನು ಮಾಡುತ್ತೀರಿ, ಹೇಗೆ ಸಮಸ್ಯೆಯನ್ನು ಬಗೆಹರಿಸುತ್ತೀರಿ ಎನ್ನುವುದನ್ನು clarify ಮಾಡಿ. clarifyಮಾಡುವುದಕ್ಕಿಂತ ಮುಂಚೆ ತಾವು ಸಚಿವ ಸಂಪುಟದಲ್ಲಿ ಕೂತು ಚರ್ಚೆ ಮಾಡಿ. ಎ.ಪಿ.ಎಲ್ ನವರಿಗೆ ಏನಾಗಿದೆ ಎಂದರೆ, ಎ.ಪಿ.ಎಲ್ ಕಾರ್ಡ್‌ನವರಿಗೆ ಅಕ್ಕಿ ಕೊಡುತ್ತಿಲ್ಲ. ಬರೀ ಬಿ.ಪಿ.ಎಲ್ ಕಾರ್ಡ್ ಇದ್ದವರಿಗೆ ಮಾತ್ರ ಕೊಡುತ್ತಿದ್ದಾರೆ. ಇವತ್ತು ಎಲ್ಲಿಯೂ ಕೂಡಾ ಆಹಾರ ಧ್ಯಾನ್ಯಗಳು ಸಿಗುತ್ತಿಲ್ಲ. ಬೆಲೆಗಳು ಕಂಟ್ರೋಲ್‌ನಲ್ಲಿ ಇಲ್ಲದೆ ಇರತಕ್ಕಂತಹದಾಗಿದೆ. ಅವರೂ ಕೂಡಾ ಅರೆ ಹೊಟ್ಟೆಯಲ್ಲಿ ಮಲಗುವಂತಹ ಪರಿಸ್ಥಿತಿ ಬಂದಿದೆ. ಹಾಗಾಗಿ ಬರದ ಹಿನ್ನೆಲೆಯಲ್ಲಿ ನಿಮ್ಮದೇ ಆದಂತಹ ಸ್ಪಷ್ಟವಾದ ಒಂದು ನೀತಿಯನ್ನು ಮಾಡಿ, ಒಂದು ಹೇಳಿಕೆಯನ್ನು ಕೊಡುವಂತಹ ಕೆಲಸವನ್ನು ಮಾಡಿದರೆ ಅನಗತ್ಯವಾಗಿ ಚರ್ಚೆಯನ್ನು ಮಾಡುವುದು, ಎಲ್ಲವೂ ನಿಂತುಹೋಗುವುದಕ್ಕೆ ಸಾಧ್ಯವಾಗುತ್ತದೆ, ಎಲ್ಲರಿಗೂ ಕೂಡ ವಾಸ್ತವವಾಗಿರತಕ್ಕಂತಹ ಅಂಶ ಗೊತ್ತಾಗುತ್ತದೆ. ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ಇಲಾಖೆಯಿಂದ ಬರುತ್ತಿದೆ, ನಾವು ರೇಷನ್

ಕಾರ್ಡ್‌ಗಳನ್ನು ಕೊಡುತ್ತಿದ್ದೇವೆ ಎನ್ನುತ್ತೀರಿ. ಒಂದು ತಾಲ್ಲೂಕಿನಲ್ಲಿ ಕೊಡುತ್ತಾರೆ, ಇನ್ನೊಂದು ತಾಲ್ಲೂಕಿನಲ್ಲಿ ಕೊಡುತ್ತಿಲ್ಲ. ಯಾವ ಅಧಿಕಾರಿಗಳು, ಯಾವ ಶಾಸಕರುಗಳು active ಆಗಿ ಇರುತ್ತಾರೆ ಅಂತಹ ಕಡೆ ಕೊಡುತ್ತಾರೆ, ಇನ್ನೊಂದು ಕಡೆ ಕೊಡುತ್ತಿಲ್ಲ. ಹೀಗಾಗಿ ಸಾರಾಸಗಟಾಗಿ, ಒಂದೇಸಮನಾಗಿ ಬಡವರು ಎಂದರೆ ಎಲ್ಲಾ ಕ್ಷೇತ್ರದಲ್ಲೂ ಒಬ್ಬರೇ ಇರುತ್ತಾರೆ. ಹಾರಿಕೆಯಾಗಿರದಂತಹ, ಸ್ಪಷ್ಟವಾದಂತ ರೀತಿಯಲ್ಲಿ ಒಂದು ಮಾರ್ಗದರ್ಶವನ್ನು ಕೊಡುವಂತಹ ಕೆಲಸವನ್ನು ಮಾಡಿ, ನೀವು ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು ಮಾಡತಕ್ಕಂತಹದು. ಬಿ.ಪಿ.ಎಲ್ ಅಂಡ್ ಎ.ಪಿ.ಎಲ್ ಎಲ್ಲಾ ಇದೆ. ಎಲ್ಲವೂ ಸರಿಯಿದೆ. ನೆಮ್ಮದಿ ಕೇಂದ್ರದಲ್ಲಿ ಮಾಡಿರುವ ತಪ್ಪಿಗೋಸ್ಕರವಾಗಿ ಕಾರ್ಡಿಲ್ಲ. ಫೋಟೋ ಇಲ್ಲವೆನ್ನುವ ಕಾರಣಕ್ಕೋಸ್ಕರ ಕೊಡುವುದಿಲ್ಲ. ಇವೆಲ್ಲ ಒಂದು ತರಹ ಗೊಂದಲ ಅಲ್ಲ. ನಾವು ಚರ್ಚೆ ಮಾಡಿದರೆ ಇಡೀ ದಿವಸ ಕುಳಿತುಕೊಂಡು ಚರ್ಚೆ ಮಾಡುವಷ್ಟು ಸಮಸ್ಯೆಗಳಿವೆ. ಹಾಗಾಗಿ ಹಾರಿಕೆಯಾಗಿರದಂತಹ ಹೇಳಿಕೆ ಬಂದರೆ ಬಹುಶಃ ಈ ಸಮಸ್ಯೆಗಳು ಬಗೆಹರಿಯತ್ತದೆ. ಈ ರೀತಿಯಾಗಿ ಸುಮ್ಮನೆ casual ಆಗಿಮಾತಾಡಿದರೆ ಏನೂ ಪರಿಹಾರವಾಗುವುದಿಲ್ಲ. ಚರ್ಚೆ ಮಾಡಬೇಕು, ಮಾಡುತ್ತೇವೆ ಅಷ್ಟೇ, ಪರಿಹಾರ ಸಿಗುವುದಿಲ್ಲ. ದಯಮಾಡಿ ಆ ರೀತಿಯಾಗಿ ನೀವು ಮಂತ್ರಿಗಳಿಗೆ ಒಂದು ಆದೇಶವನ್ನು ಕೊಡಿ, ಆ ರೀತಿ ಒಂದು ಹೇಳಿಕೆ ಬರಲಿ, ಒಂದು ಸ್ಪಷ್ಟವಾದ ವಿಚಾರ ಜನಗಳಿಗೆ ಮನದಟ್ಟಾಗತಕ್ಕಂತಹ ರೀತಿಯಲ್ಲಿ ಮಾಡಿ. ಅಧಿಕಾರಿಗಳಿಗೂ ಕೂಡಾ ಸೂಚನೆಯನ್ನು ಕೊಡುವಂತಹ ಕೆಲಸವನ್ನು ಮಾಡಿ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ:ಮಾನ್ಯ ಅಧ್ಯಕ್ಷರೇ, ಸರ್ಕಾರ ಬೋರ್‌ವೆಲ್ ಕೊರೆದರೂ ನೀರು ಬರುತ್ತಿಲ್ಲ. ಕುಡಿಯುವುದಕ್ಕೆ ನೀರಿಲ್ಲದೆ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅದು ಬಿಟ್ಟಬಿಟ್ಟು 3500 ದೇವಸ್ಥಾನಗಳಿಗೆಲ್ಲ 5000 ರೂ.ಗಳಂತೆ ಕೊಟ್ಟು ಮುಜುರಾಯಿ ದೇವಸ್ಥಾನಗಳಲ್ಲಿ ಪೂಜೆ ಮಾಡಿ ಮಳೆ ಬಂದುಬಿಡುತ್ತೆ, ಎಲ್ಲಾ ಸುಭಿಕ್ಷವಾಗುತ್ತದೆ ಎಂದು ಸರ್ಕಾರದಿಂದ ಆದೇಶವನ್ನು ಹೊರಡಿಸಿಕೊಂಡು... ಇವೆಲ್ಲ ಏನು ಮೌಢ್ಯ? ನಾವು 2012ನೇ ಇಸವಿಯಲ್ಲಿದ್ದೇವೆ. ಮಾನ್ಯ ಜೀವರಾಜ್‌ರವರು ಹೇಳುತ್ತಾರೆ, ಇಲ್ಲಿ ಕುಳಿತುಕೊಂಡರೆ ಯಾರಿಗೆ ಕಾರ್ಡ್ ಇಲ್ಲವೆಂದು ಕಷ್ಟ ಯಾರಿಗೂ ಗೊತ್ತಾಗುವುದಿಲ್ಲ ಸ್ವಾಮಿ,ಇಂತಹ ದಿವಸ ಬರುತ್ತಾರೆಂದು ತಾಲ್ಲೂಕು ಆಫೀಸಿನಲ್ಲಿ ನಾವು ನಿಮಗೆ ಚೇರ್ ಹಾಕಿಸಿ ಕಾಯುತ್ತೇವೆ. ನೀರಿನ ಸಮಸ್ಯೆ, ಹಸುಗಳ ಸಮಸ್ಯೆಗಳೇನಿವೆ, ಅಲ್ಲಿ ಜನ ಹೇಗೆ ಕ್ಯೂ ನಿಲ್ಲುತ್ತಾರೆಂದು ನೀವು ಬಂದು

ಕೇಳಿದರೆ ಗೊತ್ತಾಗುತ್ತದೆ. ಇವೆಲ್ಲ ಮೌಢ್ಯ. ಈ ಕಾಲಕ್ಕೂ ಸರ್ಕಾರ ಆದೇಶ ಮಾಡಿದೆಯಂತೆ. ಅದೆಲ್ಲ ಬಿಟ್ಟು ಬೋರ್‌ವೆಲ್‌ಗೆ ದುಡ್ಡು ಕೊಡಿ ಎಂದರೆ ಅದನ್ನು ಬಿಟ್ಟುಬಿಟ್ಟು ನೀವು ಮುಜರಾಯಿ ದೇವಸ್ಥಾನಕ್ಕೆ, ಪ್ರತಿ ದೇವಸ್ಥಾನಕ್ಕೆ ಪೂಜೆ ಮಾಡುವುದಕ್ಕೆ 5000 ಕೊಟ್ಟು ಮಳೆ ಬರಿಸುತ್ತೇವೆ ಎನ್ನುವುದಾದರೆ ಸಚಿವರೆಲ್ಲರೂ ಸೇರಿ ನಿಮ್ಮ ಟ್ರಜರಿ ಕೀ ಯನ್ನು ಪೂಜಾರಿ ಕೈಯಲ್ಲಿ ಕೊಟ್ಟು ದಯಮಾಡಿ ನಾವು ನೀವು ಮನೆಗೆ ಹೋಗುವುದು ಒಳ್ಳೆಯದು. ಇದು ಒಳ್ಳೆಯದಲ್ಲ. ಈವತ್ತು ಈ ರಾಜ್ಯದಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿ. ಎಲ್ಲಿ ಹೋದರೂ ಕೂಡಾ ನೀರಿಗೆ ಹಾಹಾಕಾರವಿದೆ. ಕನಿಷ್ಟ ದನಕರುಗಳಿಗೆ, ಮನುಷ್ಯರಿಗೆ ನೀರು ಸಿಗುತ್ತಿಲ್ಲ. ಆ ಕೆಲಸವನ್ನು ಮಾಡುವುದು ಬಿಟ್ಟು ನೀವು ರಾಜ್ಯ ಸರ್ಕಾರದಿಂದ ಆದೇಶ ಮಾಡಿ ಪೂಜಾರಿಗಳಿಗೆಲ್ಲ 5000 ಕೊಟ್ಟು ಮುಜುರಾಯಿ ದೇವಸ್ಥಾನಗಳಲ್ಲೆಲ್ಲಾ ಪೂಜೆ ಮಾಡಿಬಿಡಿ, ಮಳೆ ಬರುತ್ತದೆ, ಹಸಿರು ಕಾರ್ಡ್ ಬರುತ್ತದೆ ಎಂದರೆ ಏನಿದೆಲ್ಲ?

(ಗೊಂದಲ)

ಅಧ್ಯಕ್ಷರು: ಶಾಸಕರಾದ ಉಮೇಶ್ ಕತ್ತಿಯವರು ಮಾಡನಾಡಲಿ.

ಶ್ರೀ. ಹೆಚ್.ಡಿ. ರೇವಣ್ಣ:- ಮಾನ್ಯ ಮುಜುರಾಯಿ ಸಚಿವರು ಬೇಕಾದರೆ ಉತ್ತರ ಕೊಡಲಿ.

(ಗೊಂದಲ)

ಶ್ರೀ.ವಿ.ಉಮೇಶ್ ಕತ್ತಿ:- ಮಾನ್ಯ ಅಧ್ಯಕ್ಷರೆ, ಸಪ್ಟೆಂಬರ್‌ನಿಂದ ಬರಗಾಲ ಬಂದಿರುವುದು ನಮ್ಮೆಲ್ಲರಿಗೂ, ರಾಜ್ಯದ ಜನರಿಗೂ ಗೊತ್ತಿರುವಂತಹದು. ಈ ವಿಷಯವನ್ನಿಟ್ಟುಕೊಂಡು ಕೇಂದ್ರ ಸರ್ಕಾರಕ್ಕೆ ಹೋಗಿ 3.5 ಲಕ್ಷ ಟನ್ ಅಕ್ಕಿ ಮತ್ತು ಗೋಧಿಯನ್ನು ಕೊಡುವುದಕ್ಕೆ ವಿನಂತಿಯನ್ನು ಮಾಡಿದ್ದೇವೆ. ಪದೇ ಪದೇ ಕೇಂದ್ರ ಮಂತ್ರಿಗಳು, ಕೇಂದ್ರದ ಕೃಷಿ ಮಂತ್ರಿಗಳು, ಲಾ-ಮಂತ್ರಿಗಳು, ಇನ್ನಿತರ ಮಂತ್ರಿಗಳು ಮುಂದಿನ ವರ್ಷಕ್ಕೆ ಬೇಕಾಗುವಷ್ಟು ಆಹಾರ ಧಾನ್ಯಗಳು ದೇಶದಲ್ಲಿದೆ ಎಂದು ಹೇಳಿಕೆಯನ್ನು ಕೊಡುತ್ತಿದ್ದಾರೆ. ಬರಗಾಲ ಬಂದಿದೆ, ರೈತರು ತೊಂದರೆಯಲ್ಲಿದ್ದಾರೆ, ಜನ ತೊಂದರೆಯಲ್ಲಿದ್ದಾರೆ. ನಾವು ಈಗಾಗಲೆ ಎರಡು ಬಾರಿ ನಿಯೋಗ ಹೋಗಿ ವಿನಂತಿ ಮಾಡಿದ್ದೇವೆ. Extra 3.5 ಲಕ್ಷ ಟನ್ ಹೆಚ್ಚುವರಿ ಅಕ್ಕಿ ಕೊಡಿ ಎಂದು ಕೇಳಿದ್ದೇವೆ. ಅದಕ್ಕೂ ಸ್ಪಂದನೆ ಇಲ್ಲ. ಬರೀ ನೀವು ಕೊಡಿ ಕೊಡಿ ಎಂದು ನಮಗೆ ಹೇಳುವುದಕ್ಕಿಂತ ಕೇಂದ್ರಕ್ಕೂ ಹೋಗಿ ಹೇಳುವುದನ್ನು ಸ್ವಲ್ಪ ಕಲಿಯಿರಿ. ನಿಮ್ಮದೇ ಪಕ್ಷ, ನಿಮ್ಮದೇ ಸರ್ಕಾರ ಇದೆ, ಅಲ್ಲಿಯೂ ಸ್ವಲ್ಪ ಒತ್ತಾಯ ಮಾಡಿ.

(ಗೊಂದಲ)

ಶ್ರೀ.ಟಿ.ಬಿ. ಜಯಚಂದ್ರ:- ಬರೀ ಹೋಗಿ ತೆಗೆದುಕೊಂಡು ಬನ್ನಿ ಅಂದರೆ ಹಾಗೆ ತುರುವುದಿಲ್ಲ.

(ಗೊಂದಲ)

ಶ್ರೀ.ವಿ.ಉಮೇಶ್ ಕತ್ತಿ:- ಪದೇ ಪದೇ ಕೇಂದ್ರದ ಮಂತ್ರಿಗಳು ಮುಂದಿನ ವರ್ಷಕ್ಕೆ ಸಾಕಾಗುವಷ್ಟು ಆಹಾರ ಧಾನ್ಯಗಳು ಇದೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ.ಹೆಚ್.ಸಿ.ಬಾಲಕೃಷ್ಣ:- ನೀವು ಎಲ್ಲರೂ ಸೇರಿ ರಾಜ್ಯವನ್ನು ಹಾಳು ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ: ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಿ, ನಾವು ಕೇಂದ್ರ ಸರ್ಕಾರಕ್ಕೆ ಪದೇ ಪದೇ ಹೆಚ್ಚುವರಿಯಾಗಿರತಕ್ಕಂತಹ ರೀತಿಯಲ್ಲಿ, ನಾವು ಇದೇ ರೀತಿ ಮಾಡಿ ಎಂದು ಹೇಳಿದ್ದೇವೆಯೇ? ಎ.ಪಿ.ಎಲ್ ನವರದು ಏನು ಬಿ.ಪಿ.ಎಲ್ ನವರದು ಏನು, ಫೋಟೊ ಇದ್ದರೆ ಏನು, ಫೋಟೊ ಇಲ್ಲದಿದ್ದರೆ ಏನು, Physically handicapped ಇದ್ದವರ ಪರಿಸ್ಥಿತಿ ಏನು? ಅರ್ಥ ಮಾಡಿಕೊಳ್ಳಿ. Physically handicapped ಸುಮಾರು ಲಕ್ಷಾಂತರ ಜನರದ್ದು, ನಾವು ಹಿಂದೆ ಡಿ.ವಿ.ಸದಾನಂದಗೌಡರು ಇದ್ದಾಗ ಚರ್ಚೆ ಮಾಡಿದ್ದೇವೆ. ಇವತ್ತು ಮರು ಪರಿಶೀಲನೆ ಮಾಡುವುದಕ್ಕೆ ಆದೇಶವನ್ನು ಕೊಟ್ಟಿದ್ದಾರೆ. ಮರು ಪರಿಶೀಲನೆ ಮಾಡಿ ಇವತ್ತು ಸರ್ಕಾರದ ಮುಂದೆ ಕೂತಿದ್ದೇವೆ, ನಾಚಿಕೆಯಾಗಬೇಕು ಮಾನ್ಯ ಅಧ್ಯಕ್ಷರೇ. ಇಲ್ಲಿಯವರೆಗೆ ಒಂದು ವರ್ಷವಾದರೂ ಕೂಡಾ, ಮುಖ್ಯಮಂತ್ರಿ ಬದಲಾದರೂ ಕೂಡಾ, ಅವರಿಗೆ ಇನ್ನೂ ಪೆನ್ಷನ್ ಸಿಗಲಿಲ್ಲ. ನಮಗೆ ಒಂದು ರೇಷನ್ ಕಾರ್ಡ್ ಆದರೂ ಕೊಡಿ ಎಂದು ಕೇಳುತ್ತಾರೆ. ಅದು ಕೂಡಾ ಕೊಡುವುದಕ್ಕೆ ಆಗುತ್ತಿಲ್ಲ. ದಯಮಾಡಿ ಅದಕ್ಕೆ ನಾನು ಹೇಳಿದ್ದು, ತಾವು ಹಿರಿಯ ಸಚಿವರಾಗಿದ್ದೀರಿ, ನೀವು ಸಚಿವ ಸಂಪುಟದಲ್ಲಿ ಕೂತು ಇದನ್ನು ಚರ್ಚೆ ಮಾಡಿ. ನೋಡಿ ಸ್ವಾಮಿ ನಾನೂ ಕೂಡಾ 3-4 ವರ್ಷ ಕೃಷಿ ಸಚಿವನಾಗಿದ್ದಾಗ Cabinet Sub Committee Chairman ನಾನೇ ಆಗಿದ್ದೆ, ಒಂದು ಸಲ Cabinet Sub Committee ಯಲ್ಲಿ ಕೂತು ಇವರು ಚರ್ಚೆ ಮಾಡಲಿ, ಅದರಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಇರುತ್ತಾರೆ, ನೀರಾವರಿ ಸಚಿವರಿರುತ್ತಾರೆ. ಎಲ್ಲರೂ ಕುಳಿತುಕೊಂಡು ಚರ್ಚೆ ಮಾಡಿ ತೀರ್ಮಾನ ಮಾಡಿ. ದಯಮಾಡಿ ಬರೀ ಬರದ ಬಗ್ಗೆ ಮಾತನಾಡುವುದರಿಂದ ಏನೂ ಆಗುವುದಿಲ್ಲ. ಮಾನ್ಯ ಸಚಿವರೆ, ದಯಮಾಡಿ ಮಧ್ಯ ಮಧ್ಯದಲ್ಲಿ ಎದ್ದು ಉತ್ತರವನ್ನು

ಕೊಡಬೇಡಿ ನೀವು. ನೀವು ನಮ್ಮ ಕಷ್ಟ ಏನು ಎನ್ನುವುದನ್ನು ಅರ್ಥ ಮಾಡಿಕೊಳ್ಳಿ. ಮಾಧ್ಯಮದಲ್ಲಿ ಇರತಕ್ಕಂತಹ ಮಾಹಿತಿಯನ್ನು ತರಿಸಿಕೊಳ್ಳಿ. ಅಂತಿಮವಾಗಿ ಉತ್ತರವನ್ನು ಕೊಡಬೇಕಾದಾಗ ಕೊಡಿ. ನೀವು ಮಹತ್ವವಾಗಿರುವಂತಹ ಉತ್ತರವನ್ನು ಕೊಡಬೇಕು. ನೀವು ಆ ಉತ್ತರವನ್ನು ಕೊಟ್ಟಾಗಲೆ ಸಮಾಧಾನ ತರುವಂತಹದು. ಚರ್ಚೆ ಎಷ್ಟು ಮಾಡುತ್ತೇವೆ ಎನ್ನುವುದು ಅಲ್ಲ. ಉತ್ತರ ಯಾವ ರೀತಿ ಇದೆ ಎಂದು ಹೇಳಿ. ನಮಗೆ ಈ ರೀತಿ ಆಯಿತು ಎಂದು ಹೇಳಿದರೆ, ಚರ್ಚೆಯಲ್ಲಿ ಉತ್ತರ ಎನ್ನುವುದಾದರೆ ಮಾನ್ಯ ಈಶ್ವರಪ್ಪನವರು ನಾಳೆ ಭಾಷಣದಲ್ಲಿ ಏನು ಆಡುತ್ತಾರೆ ಎನ್ನುವುದನ್ನು ಈಗಲೆ ಹೇಳಿಬಿಡಿ ಎಂದರೆ ಹೇಳಿಬಿಡುತ್ತೇನೆ. ದಯಮಾಡಿ ಅದು ಆಗಬಾರದು. ಜನ ಅತ್ಯಂತ ಸಂಕಷ್ಟದಲ್ಲಿದ್ದಾರೆ. ಆಹಾರಕ್ಕೋಸ್ಕರ ಅಲೆದಾಡುವಂತಹ ಪರಿಸ್ಥಿತಿ ಇದೆ. ನಾನು ಒಂದು ಮಾತನ್ನು ಹೇಳುತ್ತೇನೆ. ಹಾಸ್ಟೆಲ್ ಅನ್ನು ಮಧ್ಯಾಹ್ನದ ಹೊತ್ತು ನಡೆಸಬೇಕು, ರಜಾ ದಿವಸದಲ್ಲಿ ನಿಲ್ಲಿಸಬೇಡಿ ಎಂದು ಹೇಳಿ ಜನ ಹಳ್ಳಿಯಲ್ಲಿ ಮುಗಿ ಬೀಳತಕ್ಕಂತಹ ಸಂದರ್ಭ ಇತ್ತು. ಅಂದರೆ ನಮ್ಮ ಮಕ್ಕಳಿಗೆ ಮದ್ಯಾಹ್ನದ ಒಂದು ಹೊತ್ತು ಊಟವಾದರೂ ಸಿಗಲಿ ಎನ್ನತಕ್ಕ ರೀತಿಯಲ್ಲಿ ಭಾವನೆ ಇತ್ತು. ಬಡತನ ಎನ್ನತಕ್ಕಂತಹದು ಆ ಮಟ್ಟಕ್ಕೆ ಹೋಗಿದೆ. ಅರೆಹೊಟ್ಟೆಯಲ್ಲಿ ಇವತ್ತು ಜನ ಬದುಕುತ್ತಿದ್ದಾರೆ. ಅದರಲ್ಲೂ ಪರಿಶಿಷ್ಟ ವರ್ಗದವರನ್ನು ಕೇಳುವವರೇ ಇಲ್ಲದಂತಹ ಪರಿಸ್ಥಿತಿ ಇದೆ. ದಯಮಾಡಿ ಇದನ್ನು ಅರ್ಥ ಮಾಡಿಕೊಂಡು ಉತ್ತರ ಕೊಡುವ ಪ್ರಯತ್ನ ಆಗಬೇಕು.

ಉಪಾಧ್ಯಕ್ಷರು:- ಮಾನ್ಯ ಜಯಚಂದ್ರ ಅವರೇ ತಾವು ಒಂದು ವಿಷಯದ ಬಗ್ಗೆ ಬೆಳಕು ಚೆಲ್ಲಬೇಕು. ಇಲ್ಲಿ Supreme Court direction ಗೋಡೌನ್‌ಗಳಲ್ಲಿ ಕೊಳೆತು ಹಾಳಾಗುತ್ತಿರುವಂತಹ ಆಹಾರಧಾನ್ಯಗಳನ್ನು ಇಂತಹ ಕಡೆಗಳಲ್ಲಿ ಕೊಡಿ ಎಂದು ಬಂದಿತ್ತು. ಎಲ್ಲಿ ಅದು ನ್ಯೂನತೆ ಬಂದಿದೆ? ಅದರ ಬಗ್ಗೆ ಕೂಡ ಬೆಳಕು ಚೆಲ್ಲುವಂತಹ ಅವಶ್ಯಕತೆ ಇದೆ. ನಿಜವಾಗಲೂ ಇಂತಹ ದುಸ್ಥಿತಿಯಲ್ಲಿ ಅದು ವಿತರಣೆ ಆಗದಿದ್ದರೆ, ಏಕೆ ಆಹಾರಧಾನ್ಯಗಳ ಗೋಡೌನ್ ಇರುವುದು?

ಶ್ರೀ.ಹೆಚ್.ಡಿ.ರೇವಣ್ಣ:- ಮಾನ್ಯ ಜಯಚಂದ್ರ ಅವರೇ, ಎಷ್ಟು ಮಾತನಾಡಿದರೂ ಅಷ್ಟೇ.

ಶ್ರೀ.ಟಿ.ಬಿ.ಜಯಚಂದ್ರ:- ಮಳೆ ಬರಲಿಲ್ಲ, ಮೇವು ಇಲ್ಲ. ಮಳೆ ಬರದೇ ಇದ್ದರೆ ಬೆಳೆ ಬರುವುದಕ್ಕೆ ಸಾಧ್ಯ ಇಲ್ಲ. ಪರಿಹಾರ ಹೇಗೆ? ಅದರ ಬಗ್ಗೆ ಇಲ್ಲಿ ಚರ್ಚೆ ಆಗಲಿ. ಇನ್ನೊಂದು ದಿವಸ ಸದನವನ್ನು extend ಮಾಡಿ ಚರ್ಚೆ

ಮಾಡೋಣ. ನಮಗೂ ಅವಕಾಶ ಸಿಗಲಿ, ನಾವೂ ಹೇಳುತ್ತೇವೆ. ಸಮಸ್ಯೆ Solve ಮಾಡುವ ಬಗ್ಗೆ ನಾವೂ ಸಲಹೆ ಕೊಡುತ್ತೇವೆ.

ಶ್ರೀ.ಹೆಚ್.ಡಿ.ರೇವಣ್ಣ:– 2–3 ವಿಷಯಗಳನ್ನು ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು ಎಂದು ಹೇಳುತ್ತೇನೆ. ಮಾನ್ಯ ಉಪ ನಾಯಕರಾದ ಜಯಚಂದ್ರ ಅವರೂ ಹೇಳುತ್ತಾರೆ. ಈ ಕಡೆ ನಮ್ಮ ಶೃಂಗೇರಿಯ ಮಾನ್ಯ ಜೀವರಾಜ್ ಅವರೂ ಹೇಳುತ್ತಾರೆ. ನಾನು ಈಗ ಎರಡೇ ಪ್ರಶ್ನೆ ಹಾಕುವುದು. ಈಗ ಕೇಂದ್ರ ಸರ್ಕಾರಕ್ಕೆ First time ನಾವೇ ನಿಯೋಗ 26.11.2011ರಂದು ಹೋಗಿದ್ದೆವು. 180 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡುತ್ತೇವೆಂಬ ಬಗ್ಗೆ ಲೆಟರ್ ಬಂತಾ? ದುಡ್ಡು ಎಷ್ಟು ಬಂತು ಹೇಳಿ ಮಾನ್ಯ ಕೃಷಿ ಸಚಿವರೇ? 70 ಕೋಟಿ ರೂಪಾಯಿ ಬಂತು 110 ಕೋಟಿ ಬರಲೇ ಇಲ್ಲ. ನಾವು ಅವರನ್ನು ಇವರನ್ನು ದೊಷಣೆ ಮಾಡುವುದಕ್ಕೆ ಹೋಗುವುದು ಬೇಡ. ಈಗ ನಾನು ಹೇಳುವುದು ಎಂದರೆ ನಾವು ಎರಡನೇ ಸಾರಿ ನಿಯೋಗವನ್ನು ತೆಗೆದುಕೊಂಡು ಹೋದೆವು. ಮಾನ್ಯ ಕೃಷಿ ಸಚಿವರೂ ಇದ್ದಿರಿ. ಮಾನ್ಯ ಸಿದ್ದರಾಮಣ್ಣನವರು ಎಷ್ಟು ಗೋಗರೆದರು ಅಂದರೆ ಸಾರ್ ನಮ್ಮ ಮರ್ಯಾದೆಯನ್ನಾದರೂ ಉಳಿಸಿ, ಮರ್ಯಾದೆ ಹೋಗುತ್ತಿದೆ ಎಂದರು. ಆದರೆ ಏನಾಯಿತು ಎನ್ನುವುದು ನನಗೆ ಗೊತ್ತಿದೆ. ಆ ವಿಚಾರವನ್ನು ಬಿಡಿ, ತಲೆ ಕೆಡಿಸಿಕೊಳ್ಳುವುದು ಬೇಡ. ಈಗ ಅದರ ಬಗ್ಗೆ ಹೇಳುವುದಕ್ಕೆ ಸರಿ ಆಗುವುದಿಲ್ಲ. ಇಬ್ಬರಿಂದ ಸೇರಿಕೊಂಡು ನಮ್ಮ ರಾಜ್ಯ ಹಾಳಾಗುತ್ತಿದೆ. ಈಗ ನೀವು Order ಎಲ್ಲಿ ಸಾರ್ ಎಂದು ಕೇಳಿದಿರಲ್ಲ. 19.07.2012ರ ಒಂದು ಸುತ್ತೋಲೆ ಇದೆ. ರಾಜ್ಯದಲ್ಲಿ ಬರಗಾಲ ಪ್ರಯುಕ್ತ ಧಾರ್ಮಿಕ ಮತ್ತು ದತ್ತಿ ಇಲಾಖೆಗಳ ವ್ಯಾಪ್ತಿಗೆ ಬರುವ ದೇವಾಲಯಗಳಿಗೆ ಅಧಿಸೂಚನೆ. ದೇವಾಲಯಗಳಲ್ಲಿ ಮಳೆಗಾಗಿ ಪ್ರಾರ್ಥನೆ, ವಿಶೇಷ ಪೂಜೆ ನಡೆಸುವ ಬಗ್ಗೆ. ನೀಲಕಂಠೇಶ್ವರನಿಂದ ಹಿಡಿದು ಯಾವುದು ಎ ಗ್ರೇಡ್, ಬಿ ಗ್ರೇಡ್, ಸಿ ಗ್ರೇಡ್ ಎಂದು ಮಾಡಿದ್ದಾರೆ. ಅದೂ ದೇವರುಗಳನ್ನು ಎ ಗ್ರೇಡ್, ಬಿ ಗ್ರೇಡ್, ಸಿ ಗ್ರೇಡ್ ಎಂದು ಹೇಳಿ ಸರ್ಕಾರದ ಆದೇಶ ಆಗಿರುವುದು. ಗ್ರೇಡ್ ಮಾಡಿ ಅದರಲ್ಲಿ ಯಾವ್ಯಾವ ಪೂಜೆ ಮಾಡಬೇಕು ಎಂದು ಇದೆ. ಇದನ್ನು ನಾವಲ್ಲ ಹೇಳುತ್ತಿರುವುದು, ಅವರೇ ಯಾವ್ಯಾವ ಪೂಜೆ ಮಾಡಬೇಕು ಎಂದು ಹೇಳಿದ್ದಾರೆ. ಪುನರ್ಜನ, ಹೋಮ ಮತ್ತು ವರುಣ ದೇವರಿಗೆ ಹೋಮ. ಇವೆಲ್ಲಾ ಮಾಡಿ ಕೊನೆಗೆ ಒಂದೊಂದು ದೇವಸ್ಥಾನಕ್ಕೆ 5–5 ಸಾವಿರ ರೂಪಾಯಿ ಕೊಡುವುದು. ದೇವಸ್ಥಾನ ಎ ಗ್ರೇಡ್ ಇರಬಹುದು, ಬಿ ಗ್ರೇಡ್ ಇರಬಹುದು. ನೀಲಕಂಠೇಶ್ವರ ಸ್ವಾಮಿಯಿಂದ ಹಿಡಿದು ಎ, ಬಿ, ಸಿ ಎಂದು ಗ್ರೇಡ್ ಮಾಡಿದ್ದಾರೆ. ನಮ್ಮೂರಿನ ಮಾರಮ್ಮನನ್ನೂ ತೆಗೆದುಕೊಂಡು ಹೋಗಿದ್ದಾರೆ.

ಅದಕ್ಕೂ ಬೇಕಾದರೆ ಪೂಜೆ ಮಾಡಿಸಿ 5 ಸಾವಿರ ಕೊಡುತ್ತೇವೆ ಎಂದು ಹೇಳುತ್ತಾರೆ. ಅದರಲ್ಲಿ ಏನಾಗಿದೆ ಅಂದರೆ ಪಾಪ ಅರ್ಚಕರಿಗೆ ನೀವು ಸಂಬಳ ಕೊಡುವುದೇ ಕಡಿಮೆ. 50 ರೂಪಾಯಿ, 30 ರೂಪಾಯಿ ಸಂಬಳ ಕೊಡುತ್ತೀರಿ. ಅವರೂ ಹೇಗೋ ಮುಂದೆ ಗಣಪತಿ ಹಬ್ಬ ಬರುತ್ತದೆ. ಅವರ ಮನೆಯಲ್ಲೂ ಮದುವೆ ಆಗದ ಹೆಣ್ಣು ಮಕ್ಕಳು ಇರಬಹುದು. ವಿಶೇಷ ಪೂಜೆ ಎಂದರೆ ಎಷ್ಟು ಖರ್ಚು ಮಾಡುತ್ತಾರೆ? ಒಂದು ಸಾವಿರ ರೂಪಾಯಿ ಖರ್ಚು ಮಾಡುತ್ತಾರೆ. ಗೌರಿ ಗಣೇಶ ಹಬ್ಬಕ್ಕೆ ನಾಲ್ಕು ಸಾವಿರ ರೂಪಾಯಿ ಇರಲಿ ಎಂದು ಕೊಟ್ಟಿದ್ದರೆ ಪರವಾಗಿಲ್ಲ, ಒಳ್ಳೆಯದಾಯಿತು. ಇನ್ನೂ ಒಂದು ಐದೈದು ಕೊಟ್ಟಿದ್ದರೆ ಸಾಕಾಗುತ್ತಿತ್ತು. ಏಕೆಂದರೆ ಆ ಪೂಜಾರಿಗೆ ಸಂಬಳ ಸಿಗುವುದೇ 30 ರೂಪಾಯಿ, 40 ರೂಪಾಯಿ, 50 ರೂಪಾಯಿ. ಎಂತಹ ಟಾಪ್ ಆಗಿ ಪೂಜೆ ಮಾಡಿದರೂ ಒಂದು ಸಾವಿರ ರೂಪಾಯಿ ಅಷ್ಟೇ.

ಶ್ರೀ.ಹೆಚ್.ಎಸ್.ಮಹದೇವ ಪ್ರಸಾದ್:– 34 ಸಾವಿರ ದೇವಸ್ಥಾನಗಳಿಗೆ 5–5 ಸಾವಿರ ರೂಪಾಯಿ ಎಂದರೆ 17 ಕೋಟಿ ರೂಪಾಯಿ ಆಯಿತು. 17 ಕೋಟಿ ರೂಪಾಯಿಯನ್ನು ಮೇವಿಗೋ, ಕುಡಿಯುವ ನೀರಿಗೋ ಬರದಲ್ಲಿ ಖರ್ಚು ಮಾಡಿ, ಆಗ ದೇವರೂ ಮೆಚ್ಚುತ್ತಾನೆ.

ಶ್ರೀ.ಹೆಚ್.ಡಿ.ರೇವಣ್ಣ:– ಮಾನ್ಯ ಸಭಾಧ್ಯಕ್ಷರೆ, ಅವರು ಹೇಳಲಿ. ನಾವೇ ಹೇಳಿ ಬಿಟ್ಟು ಯಾವ್ಯಾವ ಪೂಜೆ ಮಾಡಿಸಬೇಕು ಎಂದು ಮಾಡಿಸುತ್ತೇವೆ. ನಿಮ್ಮ ಇಲಾಖೆಯ ಆಗಮಿಕರು ಇದ್ದಾರಲ್ಲ, ಅವರ ಕಡೆಗೆ ಹೇಳಿದರೆ ನಾವೇ ಸಂಬಳ ಖರ್ಚು ಮಾಡಿ ಪೂಜೆ ಮಾಡಿಸುತ್ತೇವೆ. ಈ ಪತ್ರವನ್ನು ಮಾನ್ಯ ಸಚಿವೆಯಾದ ಶೋಭರವರಿಗೆ ಕೊಡಿ, ಏಕೆಂದರೆ ಅವರು ಮಾನಸ ಸರೋವರಕ್ಕೆ ಹೋಗಿ ಬಂದಿರುವವರು.

ಶ್ರೀ.ಉಮೇಶ್ ವಿ.ಕತ್ತಿ(ಮಾನ್ಯ ಕೃಷಿ ಸಚಿವರು):– ದುಡ್ಡೇನೋ ಸರ್ಕಾರ ಕೊಡಲಿ, ಆದರೆ ಯಾವ ಪೂಜೆ ಮಾಡಿಸಬೇಕು, ಯಾವ ಹೋಮ ಮಾಡಿಸಬೇಕು ಎಂದು ತಮ್ಮ ಸಲಹೆ ಬರಲಿ!

ಶ್ರೀ.ಹೆಚ್.ಡಿ.ರೇವಣ್ಣ:– ಅಲ್ಲೇ ಬರೆದಿದ್ದಾರೆ, Government order ಮಾಡಿದ್ದಾರಲ್ಲ. ಮಾನ್ಯ ಉಮೇಶ್ ಕತ್ತಿಯವರು ಯಾವ್ಯಾವ ಹೋಮ ಮಾಡಬೇಕೆಂದು ಹೇಳುತ್ತಿದ್ದಾರೆ. ಅದನ್ನು ಸರ್ಕಾರದ ಆರ್ಡರ್‌ನಲ್ಲಿ ತೋರಿಸಿಬಿಟ್ಟಿದ್ದಾರೆ. ಯಾವ್ಯಾವ ಹೋಮ ಮಾಡಬೇಕು? ವರುಣನಿಗೆ ಏನು ಮಾಡಬೇಕೆಂದು ಹೇಳಿ Government order ಮಾಡಿದ್ದಾರೆ ನಾವೇನೂ ಮಾಡಬೇಕಾಗಿಲ್ಲ.

ಶ್ರೀ.ಎಂ.ಶಿವಣ್ಣ:– ನಿಮ್ಮ ಕಡೆಯಿಂದ ಸಲಹೆ ಬರಲಿ.

ಶ್ರೀ.ಹೆಚ್.ಡಿ.ರೇವಣ್ಣ:- ನಮಗೆ ಸಲಹೆ ಕೊಡಲು ಆಗಮಿಕರು ನಮ್ಮ ಕಡೆ ಇಲ್ಲ. ಬೇಕಾದರೆ ನಿಮ್ಮ ಮುಜರಾಯಿ ಸಚಿವರನ್ನು ನಮ್ಮ ಹತ್ತಿರ ಕಳುಹಿಸಿ ಕೊಡಿ ಹೇಳುತ್ತೇನೆ. ಇವತ್ತು ಒಂದು Ration Card ವಿಚಾರ ಬಂತು. ನಮ್ಮ ಆಹಾರ ಮಂತ್ರಿಗಳು ಬಂದು ಮೂರು ದಿನ ಆಗಿದೆ. Food Minister ಬಂದು ಮೂರು ದಿನ ಆಯಿತು. ಎಲ್ಲಾ ಮಾಹಿತಿಯನ್ನು ಅವರು ಮೂರು ದಿನದಲ್ಲಿ ತಿಳಿದುಕೊಂಡಿದ್ದಾರೆಂದರೆ ನಾನು ಅವರನ್ನು ಅಪ್ರಿಷಿಯೇಟ್ ಮಾಡಬೇಕಾಗುತ್ತದೆ. ಏಕೆಂದರೆ ಶಾರದಾಂಬಾ ಜೀವರಾಜ್ ಅವರಿಗೆ ಶಕ್ತಿ ಕೊಟ್ಟಿದ್ದಾಳೆ. ನಾಲ್ಕು ವರ್ಷದಿಂದ ಮಾಡುವುದಕ್ಕೆ ಆಗಿಲ್ಲ. ಒಂದು ಕಡೆ ಮಾನ್ಯ ಹಾಲಪ್ಪನವರು ಮನೆಗೆ ಹೋದರು. ಮೇಡಮ್ ಅವರ ಹತ್ತಿರ ಆಹಾರ ಖಾತೆ ಇತ್ತು. ಆಮೇಲೆ ನಮ್ಮ ಆಹಾರ ಸಚಿವರಾಗಿ ಮಾನ್ಯ ಕಾರಜೋಳ್ ಅವರು ಇದ್ದರು. 4–5 ಜನ ಆಹಾರ ಮಂತ್ರಿಗಳಾಗಿದ್ದಾರೆ ಇವರು ಮೂರೇ ದಿನದಲ್ಲಿ ಮಾಹಿತಿ ಇದೆ ಎಂದು Challenge ಮಾಡಿ ಹೇಳುತ್ತಾರಲ್ಲ. ಸ್ವಾಮಿ ಒಂದು ಕೆಲಸ ಮಾಡೋಣ. ನನ್ನ ತಾಲ್ಲೂಕಿನ ಮೂರು ಪ್ರದೇಶದಲ್ಲಿ ಬರಗಾಲ ಇದೆ, ನೀರಾವರಿ ಇಲ್ಲದೇ ಇರುವುದು. ನನಗೆ ಗೊತ್ತಿರುವುದು ಹಾಸನ ತಾಲ್ಲೂಕಿನಲ್ಲಿ ಎರಡು ಹೋಬಳಿ ಇದೆ. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಒಂದು ಹೋಬಳಿ ಇದೆ, ಮಾನ್ಯ ಪುಟ್ಟೇಗೌಡರವರು ಇಲ್ಲೇ ಇದ್ದಾರೆ. ಅಲ್ಲಿಗೆ ಮಾನ್ಯ ಸಚಿವರನ್ನು ಕರೆದುಕೊಂಡು ಹೋಗುತ್ತೇನೆ. ನಿಜವಾಗಿ ಅರ್ಹರಾದವರಿಗೆ ಅಲ್ಲಿ ಹಸಿರು ಕಾರ್ಡು ಸಿಕ್ಕಿದೆ ಎಂದು ಹೇಳಿದರೆ, ಅವರು ಹೇಳಿದ ಹಾಗೆ ನಾನು ಇಲ್ಲೇ ಬೇಕಾದರೆ ಎಂಎಲ್ಎ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ಈಗ ಎರಡು ವಿಚಾರ ಇದೆ. ಒಂದು ಎಪಿಎಲ್, ಇನ್ನೊಂದು ಬಿಪಿಎಲ್ಲ, ಬಿಪಿಎಲ್ ಅಂದರೆ ಏನು? ಎಪಿಎಲ್ ಅಂದರೆ ಏನು? ಹಿಂದೆಲ್ಲಾ ಎಪಿಎಲ್, ಬಿಪಿಎಲ್ ಎಂದು ಇತ್ತಾ? ಒಬ್ಬರೇ ಮಹಾತ್ಮಾ ಗಾಂಧಿ ಇದ್ದದ್ದು. ಒಂದೇ ಕಾರ್ಡಿನಲ್ಲಿ ಎರಡು ರೂಪಾಯಿಗೆ ಮಹಾತ್ಮಾ ಗಾಂಧಿ ಚಿತ್ರ ಪ್ರಿಂಟ್ ಹೊಡೆದು ಎಲ್ಲಾ ಕಡೆಗೆ ಕೊಡುವಂತಹ ಪದ್ಧತಿ ಇತ್ತು. ದಯಮಾಡಿ ಇವತ್ತು ಏನಾಗಿದೆ? ಬರಗಾಲದಲ್ಲಿ ಅನ್ನ ಕೊಡಿ. ಕುಡಿಯುವ ನೀರು ಕೊಡಿ. ಇವತ್ತು ಉದಾಹರಣೆಗೆ ಹೇಳುತ್ತೇನೆ. ಇವತ್ತು ಒಂದು ಪ್ರಶ್ನೆಗೆ ತಾವೇ ಹೇಳುತ್ತೀರಿ. 55 ಲಕ್ಷ ಟನ್ ಮೇವು ಬೇಕು ಎಂದು ಹೇಳುತ್ತೀರಿ. ಅಷ್ಟು ಕೊಟ್ಟಿದ್ದೀರಾ? ಮೇವು ಇದೆಯಾ? ಐದು ಕೋಟಿ ರೂಪಾಯಿ ಪಶು ಆಹಾರಕ್ಕೆ ಡೈರಿಗೆ ಕೊಟ್ಟಿದ್ದೀರಿ. ಪಶು ಆಹಾರ ಎಲ್ಲೆಲ್ಲಿ ಎಷ್ಟು ಕೊಟ್ಟಿದ್ದಾರೆ? ನಾಲ್ಕು ವಾರ, ಐದು ವಾರ ಆದರೂ ಪಶು ಆಹಾರ ಇಲ್ಲ. ಒಂದು ಕಡೆಗೆ ರೈತರಿಗೆ ಮಳೆ ಇಲ್ಲ. ಇನ್ನೊಂದು ಕಡೆ ರೈತರು ಬೆಳೆದಂತಹ ಬೆಳೆಯ ಸರ್ವ ನಾಶ ಆಗಿದೆ. ಇನ್ನೊಂದು ಕಡೆ ಹಾಲು ಉತ್ಪಾದಕರ ವಿಚಾರ.

ಶ್ರೀ.ಎನ್.ಸಂಪಂಗಿ: ಒಬ್ಬನೇ ಮಹಾತ್ಮಾ ಗಾಂಧಿ ಇದ್ದ ಎಂದು ಏಕ ವಚನದಲ್ಲಿ ಒಬ್ಬರು ಮಹಾತ್ಮರನ್ನು ಹೇಳಬಹುದಾ?

ಶ್ರೀ.ಹೆಚ್.ಡಿ.ರೇವಣ್ಣ:- ನಾನು ಅದನ್ನು ಹೇಳಲಿಲ್ಲ, ದಯಮಾಡಿ ಅದನ್ನು ವಾಪಸ್ ತೆಗೆದುಕೊಂಡು ಬಿಡಿ. ಮಹಾತ್ಮ ಗಾಂಧಿ ಅವರ ಬಗ್ಗೆ ಗೌರವ ಇದೆ. ನಾನು ಹೇಳಿದ್ದು ಏನೆಂದರೆ ಮಹಾತ್ಮಾ ಗಾಂಧಿಯವರ ಕಾರ್ಡು ಹಾಕಿ ಮಾನ್ಯ ರಾಮಕೃಷ್ಣ ಹೆಗಡೆ ಅವರ ಸರ್ಕಾರದಲ್ಲಿ ಮತ್ತು ಮಾನ್ಯ ದೇವೇಗೌಡರು ಇದ್ದಾಗ ಕಾರ್ಡು ಕೊಟ್ಟಿದ್ದರು. ಈಗ ಕೊಡಲು ಏಕೆ ಹಿಂದೇಟು ಎಂದು ನಾನು ಹೇಳಿದ್ದೇನೆ ಹೊರತು ನಾನು ಆ ತರಹ ಏಕವಚನದಲ್ಲಿ ಹೇಳಲಿಲ್ಲ, ದಯಮಾಡಿ ಗಮನಿಸಿ. ಒಂದು ಕಡೆಗೆ ಕುಡಿಯುವ ನೀರು ಇಲ್ಲ, ಇನ್ನೊಂದು ಕಡೆ ರೇಷನ್ ಅಕ್ಕಿ ಬಡವರಿಗೆ ಇಲ್ಲ. ಇನ್ನೊಂದು ಕಡೆ ಹಾಲು ಹಾಕಿ ಐದು ವಾರ, ಆರು ವಾರ, ಏಳು ವಾರ ಆದರೂ ಬಟವಾಡೆ ಕೊಡುವುದಕ್ಕೆ ಆಗಿಲ್ಲ. ಮೊನ್ನೆ ಪೇಪರ್‌ನಲ್ಲಿ ನೀವೇ ನೋಡಿರಬಹುದು. ಪೇಪರ್ ಕಟಿಂಗ್ ಬಂದಿದೆ. ನಾನು ಕೊಟ್ಟ ಪತ್ರವನ್ನು ಮಾನ್ಯ ಮೇಡಮ್ ಅವರ ಹತ್ತಿರ ಇರಲಿ. ಅವರು Modification ಮಾಡುವ ಹಾಗಿದ್ದರೆ ಮಾಡಲಿ, ನನಗೇಕೆ ಈ ಪತ್ರ? ನಾನು ಹೇಳುವುದು ಇವತ್ತು ಹಾಲು ಉತ್ಪಾದಕರ ವಿಚಾರವನ್ನು. 1995ನೇ ಇಸವಿಯಲ್ಲಿ ಬರೇ ಹತ್ತು ಲಕ್ಷ ಲೀಟರ್ ಹಾಲು ಬಂದರೆ ರಜಾ ಘೋಷಣೆ ಮಾಡುವಂತಹ ದಿನ ಇತ್ತು. ಹತ್ತು ಲಕ್ಷ ಲೀಟರ್ ಹಾಲು ಬಂದರೆ ರಜಾ ಘೋಷಣೆ ಮಾಡುವಂತಹ ದಿನ, ಕೆಲವು ಕಡೆ ಗೋಲೀಬಾರ್ ಎಲ್ಲಾ ನಡೆದಿದೆ. ಮಾನ್ಯ ದೇವೇಗೌಡರವರು ಪ್ರಧಾನ ಮಂತ್ರಿಗಳಾಗಿದ್ದಾಗ ಬೆಂಗಳೂರಿನಲ್ಲಿ ಒಂದು ಮೆಗಾಡೈರಿ ಕೊಡಿಸಿದ್ದರು. ಮಾನ್ಯ ಶರದ್ ಪವಾರ್ ಅವರು ಚನ್ನರಾಯಪಟ್ಟಣದಲ್ಲಿ ಡೈರಿ ಕೊಟ್ಟಿದ್ದಾಗ 51 ಲಕ್ಷ ಲೀಟರ್ ನಷ್ಟು ಬಂದಿದೆ. ಹೊಸದಾಗಿ ಯಾವುದೇ ಒಂದು ಯೋಜನೆ ಮಾಡಿಲ್ಲ. ಆದರೆ ಇವತ್ತು ಏನಾಗಿದೆ? ಮಾನ್ಯ ಉಪಾಧ್ಯಕ್ಷರೆ, 9 ಸಾವಿರ ಟನ್ ಇವತ್ತು SMP ಪೌಡರ್ Stock ಇದೆ. ಕೆಲವು ಕಡೆ, ಒಂದೊಂದು ಯೂನಿಯನ್‌ನಲ್ಲಿ 30-40 ಕೋಟಿ ರೂ.ಗಳಷ್ಟು ಬಟವಾಡೆ ಕೊಡುವುದಕ್ಕೂ ಇವತ್ತು ದುಡ್ಡಿಲ್ಲ. ಇವತ್ತು ನಾನು ಹೇಳಿಲ್ಲ, ಮೊನ್ನೆ ಶಿವಮೊಗ್ಗ Milk Union ನ Director ರವರು 132 ಕೋಟಿ ರೂ.ಗಳಷ್ಟು ನಷ್ಟವಾಗುತ್ತದೆಂದು ಹೇಳಿರುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ನೀವು ಏಕೆ ಆ ಪೌಡರ್ ಅನ್ನು ಮಾರಾಟ ಮಾಡುತ್ತಿಲ್ಲ? ಅದನ್ನು ಮಾರಾಟ ಮಾಡಬೇಡಿ ಎಂದು ನಾವೇನಾದರೂ ನಿಮ್ಮನ್ನು ಹಿಡಿದಿಟ್ಟುಕೊಂಡಿದ್ದೇವೆಯೇ? ಹೋಗಲಿ, ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗವನ್ನಾದರೂ ತೆಗೆದುಕೊಂಡು

ಹೋಗಿ, 'ನಮ್ಮಲ್ಲಿ ಇಷ್ಟು SMP ಪೌಡರ್ ಇದೆ, ಅದನ್ನು ಕೊಂಡುಕೊಳ್ಳಿ' ಎಂದು ಅವರಿಗೆ ಹೇಳಿ. ನಿಮಗೆ ಮಾರಾಟ ಮಾಡುವುದಕ್ಕೆ ಆಗದೆ ಹೋದರೆ, ಹೊರಗಡೆ ಮಾರಾಟ ಮಾಡಿಸಿಕೊಡಿ ಎಂದು NDDB ಯವರಿಗೆ ಕೇಳಿ. 9 ಸಾವಿರ ಟನ್ SMP ಪೌಡರ್ ಸ್ಟಾಕ್ ಇದೆ. ಸುಮಾರು 150 ಕೋಟಿ ರೂ.ಗಳಷ್ಟು SMP ಪೌಡರ್ Stock ಹಾಗೇ ಬಿದ್ದಿದೆ. ಅದಕ್ಕೆ 180 ರೂ. ರೇಟ್ ಇತ್ತು. ಅದಕ್ಕೆ 180 ರೂ.ಗಳ ರೇಟ್ ಇದ್ದಾಗ, ಅದನ್ನು ನೀವು ಏಕೆ ಮಾರಾಟ ಮಾಡಲಿಲ್ಲ? ಇವತ್ತು ಅದು 120 ರೂ.ಗಳಿಗೆ ಬಂದಿದೆ. ಒಂದು ಕೆ.ಜಿ.ಗೆ. 60 ರೂ.ಗಳೆಂದರೂ, 9 ಸಾವಿರ ಟನ್‌ಗಳಿಗೆ ಎಷ್ಟಾಗುತ್ತದೆಂದು ನೀವೇ ಹೇಳಿ? ಈ ನಷ್ಟವನ್ನು ಅನುಭವಿಸುವವರು ಯಾರು? ಇದನ್ನು ತುಂಬಿ ಕೊಡುವವರು ಯಾರು? ಇದರ ಬಗ್ಗೆ ಸರ್ಕಾರಕ್ಕೆ ಏನಾದರೂ ಚಿಂತನೆ ಇದೆಯೇ? ಹೋಗಲಿ, ಕೇಂದ್ರ ಸರ್ಕಾರದ ಮೇಲೆ ಒತ್ತಾಯ ಮಾಡಿ, NDDB ಯವರನ್ನು ಸಂಪರ್ಕ ಮಾಡಿ, ಆ ಪೌಡರ್ ಅನ್ನು ಮಾರಾಟ ಮಾಡಿಸಿ ಅಥವಾ ಆ ಪೌಡರ್ ಮಾರಾಟ ಆಗುವವರೆಗೂ ದುಡ್ಡು ಕೊಡಿ, ಆಮೇಲೆ ನೋಡೋಣ, ನಾವು ರೈತರಿಗೆ ಕೊಡಬೇಕು ಎಂದು ಹೇಳುವುದಕ್ಕೆ ನಿಮಗೆ ತೊಂದರೆ ಏನಾದರೂ ಇದೆಯೇ? ಏನು ಕಾರಣ ಹೇಳಿ? ಒಂದು ಕಡೆ ನೀರಿಲ್ಲ, ಒಂದು ಕಡೆ ಮಕ್ಕಳ ವಿದ್ಯಾಭ್ಯಾಸಕ್ಕೆ ಕರೆಂಟ್ ಇಲ್ಲ, ಇನ್ನೊಂದು ಕಡೆ ರೇಷನ್ ಕೊಡುತ್ತಿಲ್ಲ, ಇನ್ನೊಂದು ಕಡೆಯಲ್ಲಿ 5–7 ವಾರಗಳವರೆಗೆ ಹಾಲು ಹಾಕಿದವರಿಗೆ ಬಟವಾಡೆ ಕೊಡುವುದಿಲ್ಲವೆಂದರೆ ಏನರ್ಥ ಸ್ವಾಮಿ? ಏನಾದರೂ ಇದ್ದರೆ, ಆ ಯೂನಿಯನ್‌ಗಳ ಮೇಲೆ ನೀವು ತೋರಿಸುತ್ತೀರಿ. ಇವತ್ತು ರೇಟ್ 2 ರೂ.ಗಳನ್ನು ಜಾಸ್ತಿ ಕೊಟ್ಟಿದ್ದರಿಂದ, ಉತ್ಪಾದನೆ 51 ಲಕ್ಷ ಲೀಟರ್‌ಗೆ ಬಂದಿದೆ ಎಂದು ನೀವು ಹೇಳಿಕೊಳ್ಳುತ್ತೀರಿ. ನಾನು ಹೊಸದಾಗಿ ಏನೂ ಹೇಳುತ್ತಿಲ್ಲ. 9 ಸಾವಿರ ಟನ್ SMP ಪೌಡರ್ ಹಾಗೇ ಬಿದ್ದಿದೆ. ಅದರ ಬಗ್ಗೆ ನೀವು ಏನು ಮಾಡುತ್ತಿದ್ದೀರಿ? 7 ವಾರ ರೈತರಿಗೆ ಬಟವಾಡೆ ಕೊಟ್ಟಿಲ್ಲ, ನೀವು ಏನು ಮಾಡುತ್ತಿದ್ದೀರಿ? ಸರ್ಕಾರವೇನಾದರೂ ಕಣ್ಣುಮುಚ್ಚಿಕೊಂಡು ಕುಳಿತಿದೆಯೇ? ನಾನು ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳನ್ನು, ಕಂದಾಯ ಖಾತೆ ಹೊಂದಿರುವ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಹೇಳಬಯಸುವುದೇನೆಂದರೆ, ನೀವು ಕೇಂದ್ರದ ಕೃಷಿ ಸಚಿವರಿಗೆ ಕೇಳಿ, NDDB ಮೊರೆ ಹೋಗಿ. 9 ಸಾವಿರ ಟನ್‌ಗಳಷ್ಟು SMP ಪೌಡರ್ ಏನಿದೆ, ಅದನ್ನು ನೀವು ಏಕೆ ಮಾರಾಟ ಮಾಡಿಲ್ಲ? ಜನವರಿ ತಿಂಗಳಿನಲ್ಲಿ 180 ರೂ.ಗಳ ಬೆಲೆ ಇತ್ತು. ಜನವರಿಯಿಂದ ಜೂನ್‌ವರೆಗೆ ಐದು ತಿಂಗಳು ನೀವು ಮಾರಾಟವನ್ನೇ ಮಾಡಿಲ್ಲ. 180 ರೂ.ಗಳ

ಟೆಂಡರ್ ಬಂದರೂ ನೀವು ಏಕೆ ಮಾರಲಿಲ್ಲ? ಒಂದು ಕಡೆ ಇದು, ಇನ್ನೊಂದು ಕಡೆ ಪಶು ಆಹಾರ. ನಿಮ್ಮ ಕೈಯಲ್ಲಿ ಇವತ್ತು ಪಶು ಆಹಾರವನ್ನು ಕೊಡಲಿಕ್ಕೆ ಆಗುತ್ತಿದೆಯೇ? ಹಿಂದೆ ಎಷ್ಟು ಪಶು ಆಹಾರ ಸರಬರಾಜು ಆಗುತ್ತಿತ್ತು? ಈಗ ನೀವು ರೈತರಿಗೆ ಎಷ್ಟು ಕೊಡುತ್ತಿದ್ದೀರಿ? ಎನ್ನುವುದನ್ನು ದಯಮಾಡಿ ಹೇಳಿ. ಹಾಲು ಉತ್ಪಾದಕರಿಗೆ ಇವತ್ತು ನೀವು ಪಶು ಆಹಾರವನ್ನು ಕೊಡಲಿಕ್ಕಾಗುತ್ತಿಲ್ಲ. ಇವತ್ತು ಒಂದು ತಿಂಗಳು ಅಥವಾ ಎರಡು ತಿಂಗಳವರೆಗೂ ನಿಮಗೆ ಪಶು ಆಹಾರವನ್ನು ಕೊಡಲಿಕ್ಕಾಗುತ್ತಿಲ್ಲ. ಪಶು ಆಹಾರಕ್ಕೆ ಬೇಕಾದಂತಹ ಕಚ್ಚಾ ಸಾಮಗ್ರಿಗಳನ್ನು ನೀವು ಸುಗ್ಗಿ ಸಮಯದಲ್ಲಿ ಖರೀದಿ ಮಾಡಿಟ್ಟಿದ್ದೀರಾ? ಹೇಳಿ. ಇವತ್ತು ಒಂದಕ್ಕೆ ಮೂರು ಪಟ್ಟು ದುಡ್ಡು ಕೊಟ್ಟು ಖರೀದಿ ಮಾಡಿ ದುಡ್ಡು ಹೊಡೆಯುತ್ತಿದ್ದೀರಿ. ಇಲ್ಲಿ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ನೀವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಬರಗಾಲದಲ್ಲಿ ಒಂದು ಕಡೆ ಕುಡಿಯುವ ನೀರಿಲ್ಲ, ರಸ್ತೆ ಸರಿಯಾಗಿಲ್ಲ, ಕೂಲಿಗಾರರಿಗೆ ಕಾಳಿಲ್ಲ. ಇವತ್ತು 3 ಸಾವಿರ ಕೆರೆಗಳಲ್ಲಿ ನೀರಿಲ್ಲ ಎಂದು ನೀವೇ ಹೇಳಿದ್ದೀರಿ. 86% ಎಂದರೆ, ಸುಮಾರು 151 ತಾಲ್ಲೂಕುಗಳು, 5 ಹೋಬಳಿ, 29 ಜಿಲ್ಲೆಗಳಲ್ಲಿ ಇವತ್ತು ಬರಗಾಲ ಇದೆ. ಒಂದು ಕಡೆ ಬರಗಾಲವನ್ನು ನಿರ್ವಹಣೆ ಮಾಡಲಿಕ್ಕಾಗುತ್ತಿಲ್ಲ. ಇನ್ನೊಂದು ಕಡೆ ಕುಡಿಯುವ ನೀರನ್ನೂ ಸಹಾಕೊಡಲಿಕ್ಕಾಗುತ್ತಿಲ್ಲ. ಒಂದು ಕಡೆ ರೈತರು ಬೆಳೆದಂತಹ ಬೆಳೆಗೆ ಸರಿಯಾದಂತಹ ಬೆಲೆ ನಿಗದಿಪಡಿಸಿ, ಅವರಿಗೆ ದುಡ್ಡು ಕೊಡಲಿಕ್ಕೆ ನಿಮಗೆ ಆಗಿಲ್ಲ. ಇವತ್ತು ರೈತರಿಗೆ ಮುಂಗಾರು ಬೆಳೆ ಸಂಪೂರ್ಣವಾಗಿ ನಷ್ಟವಾಗಿದೆ. ಆಲೂಗಡ್ಡೆ ಪ್ಯಾಕೇಜ್ ಮಾಡಲಿಕ್ಕೆ ಹೋಗಿ, ಒಬ್ಬ ಮುಖ್ಯಮಂತ್ರಿಯನ್ನು ನೀವು ಬಲಿ ತೆಗೆದುಕೊಂಡ್ರಲ್ಲಾ? ಆ ಬಗ್ಗೆ ನಿನ್ನೆ ಮಾನ್ಯ ಉಮೇಶ್ ಕತ್ತಿಯವರೇ ಹೇಳಿದರು. ಆಲೂಗಡ್ಡೆ ಪ್ಯಾಕೇಜ್‌ಗೋಸ್ಕರ, ಆ ಲೆಟರ್ ತೋರಿಸಿ ಬಿಟ್ಟು, ನಾವು ಮಾನ್ಯ ಸದಾನಂದಗೌಡರನ್ನು ಮನೆಗೆ ಕಳುಹಿಸಿದೆವು ಎಂದು ನಿನ್ನೆ ನೀವೇ ಇಲ್ಲಿ ಹೇಳಿದರಲ್ಲಾ? ಈ ಮಾತನ್ನು ನಾನು ಹೇಳುತ್ತಿಲ್ಲ. ನಿನ್ನೆ ನೀವೇ ಈ ಮಾತನ್ನು ಹೇಳಿದಿರಿ.

ಶ್ರೀ.ಉಮೇಶ್.ವಿ.ಕತ್ತಿ:– ನಾನು ಆ ರೀತಿ ಹೇಳಿಲ್ಲ.

ಶ್ರೀ.ಹೆಚ್.ಡಿ.ರೇವಣ್ಣ:– ನೀವೇ ನಿನ್ನೆ ಆ ರೀತಿ ಹೇಳಿದ್ದಿರಿ. ಮಾನ್ಯ ಸದಾನಂದಗೌಡರ ಬಳಿಗೆ ನಾನೇನೂ ಯಾವುದೂ ಅರ್ಜಿ ಹಿಡಿದುಕೊಂಡು ಹೋಗಿರಲಿಲ್ಲ. ನಾನಾಗಲಿ, ದೇವೇಗೌಡರಾಗಲಿ, ಕುಮಾರಸ್ವಾಮಿಯವರಾಗಲಿ ಸದಾನಂದಗೌಡರ ಬಳಿ ಅರ್ಜಿ ಇಟ್ಕೊಂಡು ಹೋಗಿರಲಿಲ್ಲ.

ಶ್ರೀ.ಉಮೇಶ್.ವಿ.ಕತ್ತಿ:– ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಆಲೂಗಡ್ಡೆ ಬೆಳೆಗಾರರು ಹಾಸನ ಜಿಲ್ಲೆಯೊಂದರಲ್ಲಿ ಮಾತ್ರವೇ ಇಲ್ಲ. ಅವರು

ಬೆಳಗಾಂ ಜಿಲ್ಲೆಯಲ್ಲಿದ್ದಾರೆ, ಧಾರವಾಡ ಜಿಲ್ಲೆಯಲ್ಲಿದ್ದಾರೆ. ರಾಜ್ಯದ ಇನ್ನಿತರ ಜಿಲ್ಲೆಗಳಲ್ಲೂ ಆಲೂಗಡ್ಡೆ ಬೆಳೆಯುವಂತಹ ಜನರಿದ್ದಾರೆ. ಇಡೀ ರಾಜ್ಯಕ್ಕೆ ಆಲೂಗಡ್ಡೆ ಪ್ಯಾಕೇಜ್ ಅನ್ನು ಮಾಡಬೇಕಾಗಿತ್ತು. ಆದರೆ ಮಾನ್ಯ ರೇವಣ್ಣನವರ ಕೃಪೆಯಿಂದ ಆಲೂಗಡ್ಡೆ ಪ್ಯಾಕೇಜ್ ಕೇವಲ ಹಾಸನಕ್ಕೆ ಮಾತ್ರ ಆಯಿತು. ಹಾಸನಕ್ಕೆ ಮಾತ್ರವೇ ಆಲೂಗಡ್ಡೆ ಪ್ಯಾಕೇಜ್ ಘೋಷಿಸಲಾಯಿತು. ಮಾನ್ಯ ಸದಾನಂದಗೌಡರನ್ನು ನೀವೇ ಬಲಿ ತೆಗೆದುಕೊಂಡಿರಿ ಎಂದು ನಾನು ನಿನ್ನೆ ಅವರಿಗೆ ಹೇಳಿದ್ದೆ. ನಾವ್ಯಾರೂ ಅವರನ್ನು ಬಲಿ ತೆಗೆದುಕೊಂಡಿಲ್ಲ.

ಶ್ರೀ.ಹೆಚ್.ಡಿ.ರೇವಣ್ಣ:– ಮಾನ್ಯ ಉಪಾಧ್ಯಕ್ಷರೆ, ಇದು ದೇವರ ಸಭೆ, ಈ ಸಭೆಯಲ್ಲಿ ಮಾನ್ಯ ಕೃಷಿ ಮಂತ್ರಿಗಳು ಸತ್ಯವನ್ನು ಹೇಳಿಬಿಡಲಿ. ನಾನೇನಾದರೂ ಹಾಸನ ಜಿಲ್ಲೆಗೆ ಮಾತ್ರವೇ ಕೊಡಿ ಎಂದು ಕೇಳಿದ್ದೆನೇ? ಮಾನ್ಯ ರವೀಂದ್ರನಾಥ್‌ರವರು ಇಲ್ಲೇ ಇದ್ದಾರೆ. ಅವತ್ತು ಅರಸೀಕೆರೆ, ತಿಪಟೂರು ಮುಂತಾದ ಸುಮಾರು ಭಾಗಗಳಿಂದ ಕೊಬ್ಬರಿ ಬೆಳೆಗಾರರು ಬಂದಿದ್ದರು. ಬಿ.ಜೆ.ಪಿ.ಯವರೇ ಆದ ತಿಪಟೂರು ಶಾಸಕರೂ ಅಂದು ನಮ್ಮೊಂದಿಗಿದ್ದರು. ಮಾನ್ಯ ಶಿವಲಿಂಗೇಗೌಡರೆ, ಅವತ್ತು ನಾವು ಕೇವಲ ಹಾಸನ ಜಿಲ್ಲೆಯ ಅರಸೀಕೆರೆಗೆ ಮಾತ್ರವೇ ಪ್ಯಾಕೇಜ್ ಮಾಡುವಂತೆ ಕೇಳಿದ್ದೆವೇ? 6050 ರೂ.ಗಳನ್ನು ಮಾಡಿದ್ದೀರಿ, ಇವತ್ತಿನವರೆಗೂ ಅದು ಜಾರಿಗೆ ಬಂದಿದೆಯೇ? ಕಳೆದ ಐದು ವರ್ಷಗಳಿಂದ ಆಲೂಗಡ್ಡೆ ಬಗ್ಗೆ ಮಾನ್ಯ ಯಡಿಯೂರಪ್ಪ ಸಾಹೇಬರು ಕೇಳುತ್ತಲೇ ಇರುತ್ತಾರೆ. ರೇವಣ್ಣನವರೆ, ಈ ಸಲ ಆಲೂಗಡ್ಡೆ ಬೆಳೆ ಹೇಗಿದೆ ಎಂದು ಅವರು ನನ್ನನ್ನು ಕೇಳಿದರು. ಇಲ್ಲ ಸಾರ್, ಎಲ್ಲಾ ಸತ್ತು ಹೋಗಿವೆ ಎಂದು ಹೇಳಿದೆ. ಈಗೇನಾಗಿದೆ ಎಂದರೆ, ಮಾನ್ಯ ರವೀಂದ್ರನಾಥ್‌ರವರೆ, ಇವತ್ತು ನೀವೇ ಘೋಷಣೆ ಮಾಡಿದ್ದೀರಿ. ಕೊಡಿ ಎಂದು ನೀವೇ ಹೇಳಿದವರು. ಇವತ್ತಿನವರೆಗೂ ಅದರ ಬಗ್ಗೆ Order ಆಗಿರುವುದೇ ನನಗೆ ಗೊತ್ತಿಲ್ಲ. ಅದು ಜಾರಿಯಾಗಿಲ್ಲ. ಮುಂದಿನ ವಾರದಲ್ಲೇ ಕೊಡುತ್ತೇವೆಂದು ಹೇಳಿದ್ದರು. ಈಗ ಆ ಮುಖ್ಯಮಂತ್ರಿಗಳು ಹೋಗಿದ್ದಾರೆ. ಈಗಲಾದರೂ ನಮಗೆ ಆ Order Copy ಯನ್ನು ಕೊಡಿ ಸ್ವಾಮಿ. ಆ Order ನಲ್ಲಿ ಕೊಟ್ಟಿರುವ ಪ್ರಕಾರ ಜಾರಿ ಮಾಡುತ್ತೀರಾ? ಎಂಬುದನ್ನು ಹೇಳಿ. ಹೋಗಲಿ, ನೀವೇ ಹೇಳಿದಂತೆಯೇ ಕೇಳೋಣ. ಮಾನ್ಯ ಯಡಿಯೂರಪ್ಪ ಸಾಹೇಬರು ಇಲ್ಲೇ ಇದ್ದಾರೆ. ಅವರು ಇಂಜಿನಿಯರಿಂಗ್ ಕಾಲೇಜ್ ಅನ್ನು ಓಪನ್ ಮಾಡಿ ಬಂದರು. ಅವರೇ ಈ ಸದನದಲ್ಲಿ ಹೇಳಿದರು. 'ರೇವಣ್ಣ, ಒಳ್ಳೆಯ ಕಾಲೇಜ್ ಅನ್ನು ಕಟ್ಟಿಸಿದ್ದಾನೆ, ಪರವಾಗಿಲ್ಲ' ಎಂದು ಅವರು ಈ ಸಭೆಯಲ್ಲಿ ಹೇಳಿದರು. ಅವರು ಹಾಗೆ ಹೇಳಿದ ಮೇಲೆ, ಅವರು ಓಪನ್ ಮಾಡಿದ್ದಕ್ಕಾದರೂ ಗೌರವ ಕೊಡಬೇಕಲ್ಲವೇ?

ಅಲಿ ಗಿಡ ಕೀಳುವುದಕ್ಕಾದರೂ ನೀವು ದುಡ್ಡು ಕೊಟ್ಟಿದ್ದೀರಾ? ಮಾನ್ಯ ಉದಾಸಿಯವರು ಇಲ್ಲೇ ಇದ್ದಾರೆ. ಪಾಪ! ಮಾನ್ಯ ಉದಾಸಿಯವರ ಬಗ್ಗೆ ನಾನು ದೂಷಿಸುವುದಿಲ್ಲ, ಅವರು ಏನೂ ಮಾಡಲಿಕ್ಕಾಗುತ್ತಿಲ್ಲ. ಹಣಕಾಸಿನ ಇಲಾಖೆಯವರು approval ಕೊಟ್ಟರೆ, ಮಾನ್ಯ ಉದಾಸಿ ಸಾಹೇಬರು ಕೊಡುತ್ತಾರೆ. ಇವತ್ತು ಲೆಟರ್ ಬರೆದರು. ಅಲ್ಲಿ ಇನ್ನೇನೂ ಬೇಡಿ ಸಾರ್. ಅಲ್ಲಿ ಕಾಡು ಬೆಳೆದಂತೆ ಬೆಳೆದಿದೆ, ಮಾನ್ಯ ಯಡಿಯೂರಪ್ಪನವರು ಅದನ್ನು ಓಪನ್ ಮಾಡಿ ಹೋಗಿದ್ದಾರೆ, ಮಾನ್ಯ ಯಡಿಯೂರಪ್ಪ ಸಾಹೇಬರಿಗಾದರೂ ಗೌರವ ಕೊಟ್ಟು, ಆ ಗಿಡವನ್ನಾದರೂ ಅಲ್ಲಿ ಕೀಳಿಸಿ ಕೊಡಿ ಸಾರ್. ನಮಗೆ ಯಾವುದೇ ಪ್ಯಾಕೇಜ್ ಅನ್ನು ಕೊಟ್ಟಿಲ್ಲ. ಯಾವ ಪ್ಯಾಕೇಜೂ ಇಲ್ಲ, ಏನೂ ಇಲ್ಲ. ಸುಮ್ಮನೆ ಏನೋ ಹೇಳುತ್ತೀರಿ. 'ಹಾಸನ ಪ್ಯಾಕೇಜ್', 'ಹಾಸನ ಪ್ಯಾಕೇಜ್' ಎಂದು ಸುಮ್ಮನೆ ಹೇಳಲಾಗುತ್ತಿದೆ, ಆದರೆ ಅಲ್ಲಿ ರೈತರು ಸಾಯುತ್ತಿದ್ದಾರೆ. ಹೋಗಲಿ, ನಮ್ಮ ಮೇಲೆ ನೀವು ಏನಾದರೂ ಮಾಡಿಕೊಳ್ಳಿ ಸ್ವಾಮಿ. ಆದರೆ ಆ ಹಾಸನ ಜಿಲ್ಲೆಯ ಜನ ನಿಮಗೇನು ಮಾಡಿದ್ದಾರೆ? ಅವರು ಏನು ಪಾಪ ಮಾಡಿದ್ದಾರೆ ಎನ್ನುವುದನ್ನು ಹೇಳಿ. ಆಲೂಗಡ್ಡೆಯನ್ನು ಬಿಡಿ, ನೀವೇನೂ ಮಾಡುವುದಕ್ಕಾಗುವುದಿಲ್ಲ. ನೀವು ಇನ್ನೆಷ್ಟು ದಿನ ಇರುತ್ತೀರೋ? ನಾವಲ್ಲ, ಆ ದೇವರೇ ನಿಮಗೆ ಶಿಕ್ಷೆ ಕೊಡುತ್ತಾನೆ. ಮೇವು ಸರಬರಾಜಿಗಾಗಿ ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಏನು ಕಾರ್ಯಕ್ರಮವನ್ನು ರೂಪಿಸಿದ್ದೀರಿ? ಇಲ್ಲಿ ಕೇಳಿದ್ದಕ್ಕೆ, ನಮ್ಮಲ್ಲಿ 11 ವಾರಗಳಿಗೆ ಆಗುವಷ್ಟು ಮಾತ್ರವೇ ಇದೆ ಎಂದು ಮಾಹಿತಿ ನೀಡಿದ್ದೀರಿ. ಇರುವ 29 ಜಿಲ್ಲೆಗಳಲ್ಲಿ, ನೀವು ಮೇವನ್ನು ಎಲ್ಲಿ ಸ್ಟಾಕ್ ಮಾಡಿದ್ದೀರಿ? ಎಂಬುದನ್ನು ನಮಗೆ ಹೇಳಿ. ಯಾವ ಜಿಲ್ಲೆಯ ಯಾವ ತಾಲ್ಲೂಕಿನಲ್ಲಿ ನೀವು ಮೇವನ್ನು ಸ್ಟಾಕ್ ಮಾಡಿದ್ದೀರಿ? ದಯಮಾಡಿ ಸ್ವಲ್ಪ ನಮಗೆ ಅದನ್ನು ತೋರಿಸಿ. ಇಂತಹ ಕಡೆ, ಇಂತಹ ಯಾರ್ಡ್‌ನಲ್ಲಿ ಇಷ್ಟನ್ನು ತರಿಸಿ ಇಟ್ಟಿದ್ದೇವೆ ಎಂದು ಹೇಳಿ ನೋಡೋಣ. ಅದರಲ್ಲಿ ಹೊರರಾಜ್ಯದಿಂದ ಲಭ್ಯವಾಗಿರುವುದು ಎಷ್ಟು ಎಂಬ ಮಾಹಿತಿ ನಮ್ಮಲ್ಲಿದೆ. ಆ ಮಾಹಿತಿ ಪ್ರಕಾರ ಹೊರ ರಾಜ್ಯದಿಂದ ಒಂದು ಚೂರು ಮೇವು ತರಿಸಿಲ್ಲ. ಹೊರ ರಾಜ್ಯದಿಂದ ಒಂದೇ ಒಂದು ಟನ್ ಮೇವನ್ನೂ ನೀವು ತರಸಿಲ್ಲ. ಇವತ್ತು ಪಶು ಸಂಗೋಪನಾ ಇಲಾಖೆ, ಕೃಷಿ ಇಲಾಖೆಯವರು, ಎಲ್ಲೆಲ್ಲಿ ಐ.ಪಿ. ಸೆಟ್ ಇದೆಯೋ, ಆ ರೈತರುಗಳಿಗೆ, ದೊಡ್ಡವರಿಗೆ ಕೊಡುವುದಕ್ಕೆ ಹೋಗಬೇಡಿ, ಸಣ್ಣ ಹಿಡುವಳಿದಾರರಿಗೆ ಎಷ್ಟು ಜನರಿಗೆ ಮೇವು ಬೆಳೆಯುವುದಕ್ಕೆ ಗೊಬ್ಬರ ಮತ್ತು ಬಿತ್ತನೆ ಬೀಜ ಕೊಟ್ಟಿದ್ದೀರಿ? ಅವರಿಗೆ ಒಂದೈದು ಸಾವಿರ ರೂ.ಗಳನ್ನಾದರೂ

ಕೊಡಿ. ಯಾರ್ಯಾರೋ ತಿಂದುಕೊಳ್ಳುತ್ತಿದ್ದಾರೆ, ಹೀಗಿರುವಾಗ ರೈತರಿಗೆ ಒಂದೈದು ಸಾವಿರ ರೂ.ಗಳನ್ನು ಕೊಟ್ಟರೆ, ಅವರೇ ಮೇವು ಬೆಳೆದು ಕೊಡುತ್ತಾರಲ್ಲಾ?

(ಗೊಂದಲ)

ಶ್ರೀ.ಹೆಚ್.ಡಿ.ರೇವಣ್ಣ:- ಈಗ ಅಂತಹ ಪರಿಸ್ಥಿತಿ ಆಗಿದೆ. ಹಾಲು ಹಾಕಿದವರಿಗೆ ದುಡ್ಡು ಕೊಡುತ್ತಿಲ್ಲ.

(ಗೊಂದಲ)

ಶ್ರೀ. ಉಮೇಶ್.ವಿ.ಕತ್ತಿ:- ಒಂದು ಕಡೆ ಹಾಲು ಉತ್ಪಾದನೆ ಹೆಚ್ಚಾಯಿತು ಎಂದು ಹೇಳುತ್ತೀರಿ.

ಶ್ರೀ.ಹೆಚ್.ಡಿ.ರೇವಣ್ಣ:- ನಾನು ಹಾಲು ಉತ್ಪಾದನೆ ಹೆಚ್ಚು ಆಯಿತು ಎಂದು ಹೇಳಲಿಲ್ಲ.

ಶ್ರೀ.ಉಮೇಶ್.ವಿ.ಕತ್ತಿ:- 10 ಲಕ್ಷ ಇದ್ದದ್ದು 51 ಲಕ್ಷ ಲೀಟರ್‌ಗಳಷ್ಟು ಉತ್ಪಾದನೆಯಾಗಿದೆ ಎಂದು ಒಂದು ಕಡೆ ಹೇಳುತ್ತಿದ್ದೀರಿ. ರೈತರಿಗೆ ಮೇವಿನ ಕೊರತೆ ಇದೆ ಎಂದು ಇನ್ನೊಂದು ಕಡೆಯಲ್ಲಿ ಹೇಳುತ್ತೀರಿ. ಇದರಲ್ಲಿ ಯಾವುದು ನಿಜ? ಹಾಲಿನ ಉತ್ಪಾದನೆ ಹೆಚ್ಚು ಆಯಿತೇ? ಮೇವಿನ ಕೊರತೆ ಇದೆಯೇ? ಯಾವುದು ನಿಜ? ಹಾಲು ಉತ್ಪಾದನೆ ಹೆಚ್ಚಾಗಬೇಕಾದರೆ, ಅದಕ್ಕೆ ಮೇವು ಬೇಕಲ್ಲವೇ? ಮೇವಿಲ್ಲದೆ ಹಾಲು ಉತ್ಪಾದನೆ ಹೇಗೆ ಹೆಚ್ಚಾಗುತ್ತದೆ? ಹಾಲು ಉತ್ಪಾದನೆ ಹೆಚ್ಚಾಗಬೇಕಾದರೆ, ಅದಕ್ಕೆ ಮೇವು ಬೇಕೇ ಬೇಕು. ನಿಮ್ಮ ಮಾತಿನಲ್ಲಿ ಹಾಲು ಉತ್ಪಾದನೆ ಹೆಚ್ಚಾಗಿದೆ ಎಂದು ನೀವೇ ಹೇಳುವಾಗ, ಮೇವು ಇದೆ ಎಂದು ಅರ್ಥವಾಯಿತಲ್ಲವೇ? ಒಂದು ವೇಳೆ ಮೇವಿನ ಕೊರತೆ ಇದ್ದಿದ್ದರೆ, ಹಾಲು ಉತ್ಪಾದನೆ ಹೆಚ್ಚಾಗುತ್ತಿರಲಿಲ್ಲ. ನೀವು ಹೇಳುವುದರಲ್ಲಿ ಯಾವುದು ನಿಜ?

(ಗೊಂದಲ)

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಉಪಧ್ಯಕ್ಷರೆ, ಈ ರೀತಿ ತರ್ಕ ಮಾಡಿದರೆ ಹೇಗೆ?...

(ಗೊಂದಲ)

ಶ್ರೀ.ಕೆ.ಎಂ.ಶಿವಲಿಂಗೇಗೌಡ:- ಏನು ಮಂತ್ರಿಗಳು ನೀವು? ಬನ್ನಿ, ನಮ್ಮ ಕಡೆಗೆ ತೋರಿಸುತ್ತೇವೆ.

(ಗೊಂದಲ)

ಶ್ರೀ.ಕೆ.ಎಂ.ಶಿವಲಿಂಗೇಗೌಡ:- ರೈತರ ಬಗ್ಗೆ ನೀವು ಬಹಳ ಅಪಹಾಸ್ಯವಾಗಿ ಮಾತನಾಡುತ್ತಿದ್ದೀರಿ?

(ಗೊಂದಲ)

ಉಪಾಧ್ಯಕ್ಷರು:– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಶಿವಲಿಂಗೇಗೌಡರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ.ಕೆ.ಎಂ.ಶಿವಲಿಂಗೇಗೌಡ:– ಒಂದೊಂದು ಹೊರೆ ಹುಲ್ಲಿಗೂ ರೈತರು ಭಿಕ್ಷೆ ಎತ್ತುತ್ತಿದ್ದಾರೆ.

(ಗೊಂದಲ)

ಶ್ರೀ.ಉಮೇಶ್.ವಿ.ಕತ್ತಿ:– ಹಾಲಿನ ಉತ್ಪಾದನೆ ಹೆಚ್ಚಾಗಬೇಕಾದರೆ, ಅದಕ್ಕೆ ಮೇವಿನ ಅನುಕೂಲ ಇರಲೇಬೇಕು. ಮೇವಿನ ಕೊರತೆ ಇದ್ದಿದ್ದರೆ, ಹಾಲಿನ ಉತ್ಪಾದನೆ ಕಡಿಮೆಯಾಗಬೇಕಾಗಿತ್ತು.

(ಗೊಂದಲ)

ಉಪಾಧ್ಯಕ್ಷರು:– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರೇವಣ್ಣನವರೆ, ತಾವು ಮಾತನಾಡುವುದನ್ನು ಮುಂದುವರೆಸಿ.

ಜಿಲ್ಲಾ ಉಸ್ತುವಾರಿ ಮಂತ್ರಿಗಳ ಸಭೆನಲ್ಲಿ, ನೀರಾವರಿ ಪ್ರದೇಶದಲ್ಲಿ ಮೇವು ಸಿಗುತ್ತದೆ, ಹೀಗಾಗಿ ಸ್ಟಾಕ್ ಮಾಡಿ ನಾವು ಹೇಳಿದರೂ ಕೂಡ ಯಾರು ಕಾಳಜಿ ತೆಗೆದುಕೊಳ್ಳಲಿಲ್ಲ, ಎಲ್ಲೂ ಮೇವು ಸ್ಟಾಕ್ ಮಾಡಲಿಲ್ಲ. ಈಗ ಮೇವು ಮೇವು ಎಂದು ಅಡ್ಡಾಡುತ್ತಿದ್ದಾರೆ, ಎಲ್ಲಿ ಮೇವು ಸಿಗುತ್ತದೆ? ಮೇವು ಎಲ್ಲಿದೆ? ಅಧಿಕಾರಿಗಳು ಮಾಡಿದಂಥ ತಪ್ಪಿನಿಂದ ಇವತ್ತು ಮೇವು ಸಿಗುತ್ತಿಲ್ಲ...

(ಗೊಂದಲ)

ಶ್ರೀ.ಕೆ.ಎಂ.ಶಿವಲಿಂಗೇಗೌಡ:– ಮೊದಲು ಮೇವು ಕೊಡಿ, ಶಿವಮೊಗ್ಗ ಜಿಲ್ಲೆಗೆ ಹೋದರು ನಮಗೆ ಭತ್ತದ ಹುಲ್ಲು ಮೇವು ಸಿಗುತ್ತಿಲ್ಲ, ರಾಗಿ ಹುಲ್ಲು ಬೇಡ. ಒಂದು ಗಾಡಿ ರಾಗಿ ಹುಲ್ಲಿಗೆ ರೂ.15,000 ಆಗಿದೆ, ಆ ದನವನ್ನು ಸಂತೆಗೆ ಹೊಡೆದರೆ ಹತ್ತುಸಾವಿರ ಬೆಲೆಗೆ ಹೋಗುವುದಿಲ್ಲ. ಉಮೇಶ್ ಕತ್ತಿಯವರೆ, ಅಪಹಾಸ್ಯವಾಗಿ ಮಾತನಾಡುತ್ತೀರಿ, ದನಗಳ ಬಗ್ಗೆ ರೈತರ, ಬಗ್ಗೆ ಆ ರೀತಿ ಮಾತನಾಡಬೇಡಿ..

(ಗೊಂದಲ)

ಉಪಾಧ್ಯಕ್ಷರು:– ರೇವಣ್ಣನವರೇ, ತಾವು ಮುಂದುವರೆಸಿ.

ಶ್ರೀ.ಹೆಚ್.ಡಿ.ರೇವಣ್ಣ:– ಮಾನ್ಯ ಕೃಷಿ ಸಚಿವರು, ಒಬ್ಬ ಕೃಷಿ ಸಚಿವರಾಗಿ ಅವರೊಂದು ಹೇಳಿಕೆಯನ್ನು ಕೊಡಬೇಕಾದರೆ, ಜವಾಬ್ದಾರಿಯುತ ಸ್ಥಾನದಲ್ಲಿರುವ ಒಬ್ಬ ಕೃಷಿ ಮಂತ್ರಿ, ಹಾಲು ಉತ್ಪಾದನೆ 51 ಲಕ್ಷ ಲೀಟರ್ ಹೇಗೆ ಹೆಚ್ಚಾಯಿತು ಎಂದು ಕೇಳುತ್ತಾರೆ, ಅದು ಹೇಗೆ ಹೆಚ್ಚಾಯಿತು ಎನ್ನುವುದನ್ನು ಮಾನ್ಯ ಕೃಷಿ ಸಚಿವರು, ಪಶುಸಂಗೋಪನ ಸಚಿವರ ಹತ್ತಿರ ಕೇಳಿ. ನಿಮಗೆ

ಕಬ್ಬಿನ ಬಗ್ಗೆ ಬಹಳ ಆಸಕ್ತಿ, ಸಕ್ಕರೆ ಬಗ್ಗೆ ಬಹಳ ಆಸಕ್ತಿ, ನಮಗೆ ಸಕ್ಕರೆ ಇಲ್ಲ, ಸಿಹಿ ಇಲ್ಲ ಸ್ವಾಮಿ, ನಾವು ಬೇವಿನ ಎಲೆ ತಿನ್ನುತ್ತಿದ್ದೇವೆಂದು ನಿಮಗೆ ಹೇಳುತ್ತಿದ್ದೇವು, ನೀವು ಆರಾಮಾಗಿ ಸಿಹಿನಲ್ಲಿದ್ದೀರಿ. ಅವರಿಗೆ ಹಾಲು ಮತ್ತು ಬೇವು ಗೊತ್ತಿಲ್ಲವೆಂದು ನಾನು ಹೇಳುತ್ತಿದ್ದೇನೆ. ನಾನು ಹೇಳಿದ್ದು, ಒಂದು ಕಡೆ ಹಸಿರು ಕಾರ್ಡು ಕೊಡದೆ ರೈತರಿಗೆ ಅಕ್ಕಿ ಸಿಗುತ್ತಿಲ್ಲ, ಕುಡಿಯುವ ನೀರಿಲ್ಲ. ರೈತರು ಎಲ್ಲೋ ಪಂಪು ಸೆಟ್ಟೋ ಇಟ್ಟುಕೊಂಡು ಅಥವಾ ಎಲ್ಲಾದರು ಇಂಡಿಯನ್ನು ತರುತ್ತಾರೆ. ಆ ಇಂಡಿಯನ್ನು ಪ್ರೈವೇಟ್ ನಲ್ಲಿ ತರುತ್ತಾರೆ, ನಾವು ಪ್ರೈವೇಟ್ ನವರಿಗೆ ಚಾಲೆಂಜ್ ಮಾಡಿದ್ದೇವೆ, ಹೇಗೆ 51 ಲಕ್ಷ ಲೀಟರ್ ಹಾಲು ಬಂತು ಎನ್ನುವುದನ್ನು ಮಾಹಿತಿಯನ್ನು ತರಿಸಿ ನೋಡಿ. 4 ವರ್ಷದಲ್ಲಿ ಯಾವುದಾದರು ಹೊಸ ಯೋಜನೆಯನ್ನು ಮಾಡಿದ್ದೀರಾ? ಹೇಳಿ ದಯಮಾಡಿ. ರೈತರಿಗೆ 7 ವಾರದಿಂದ ಬಟವಾಡೆ ಕೊಟ್ಟಿಲ್ಲವೆನ್ನುವುದನ್ನು ನಾನು ನಿಮ್ಮ ಗಮನಕ್ಕೆತರುತ್ತಿದ್ದೇನೆ. ಇವತ್ತು ಒಂದು ಕಡೆ ಅನ್ನವಿಲ್ಲ, ಒಂದು ಕಡೆ ಅಕ್ಕಿ ಕೊಡುವುದಕ್ಕೆ ನಿಮ್ಮ ಕೈಯಲ್ಲಾಗುತ್ತಿಲ್ಲ. ರೈತರು ಕಷ್ಟಪಟ್ಟು ಹುಲ್ಲು ಮೇವನ್ನು ತಂದು ಹಾಕಿ ಹಾಲು ಮಾರಿದ್ದ ಹಣ ಕೊಡಿ ಎಂದು ಕೇಳುತ್ತಿರುವುದು ಸ್ವಾಮಿ? 51 ಲಕ್ಷ ಲೀಟರ್ ಹಾಲು ಹೇಗೆ ಬಂತು ಎಂದು ಹೇಳುತ್ತೀರಿ, ಅವರು ಹೊಟ್ಟೆಗೆ ಹಿಟ್ಟಿಲ್ಲದವರು ವಾರಕ್ಕೆ ಒಂದು ಸಾರಿ ಉಪ್ಪು ಉಣ್ಣುವುದಕ್ಕೆ ಖರ್ಚಿಗಾಗುತ್ತದೆಂದು ಎಲ್ಲೋ ಸಾಲ-ಸೂಲ ಮಾಡಿ ಹಸುವನ್ನು ತಂದಿದ್ದಾರೆ, ಅವರಿಗೆ ಬಟವಾಡೆ ಕೊಡಿ. ನಿನ್ನೆ 9,000 ಟನ್ SMP ಪೌಡರ್ ಅನ್ನು 6-7 ತಿಂಗಳಿಂದ ಏಕೆ ಇಟ್ಟುಕೊಂಡಿರಿ? ಕಾರಣ ಹೇಳಿ. ಇಟ್ಟುಕೊಂಡಿರುವುದಕ್ಕೆ ಕಾರಣವಿದೆಯಾ, ಸರ್ಕಾರದಿಂದ 50 ಸಾವಿರ ಕೋಟಿ ರೂಪಾಯಿಗಳನ್ನು ಕೊಡಿ. ಈ ನಷ್ಟಕ್ಕೆ ಕಾರಣ ಯಾರು? ರೂ.170 ಇರುವುದನ್ನು ರೂ.120, ರೂ.150 ಆಗಿದೆ ಕಾರಣ ಯಾರು? ನಾವು ಇವತ್ತು ವಾರಕ್ಕೆ ಒಂದು ಸಾರಿ ಬಟವಾಡ ಕೇಳುತ್ತಿದ್ದೇವೆ ಹೊರತು ಬೇರೆ ಏನು ನಾನು ಕೇಳಲಿಲ್ಲ, ಇದನ್ನು ಕೃಷಿ ಸಚಿವರು ಲಘುವಾಗಿ ಮಾತನಾಡಬಾರದು. ದನಕರುಗಳಿಗೆ ಮೇವಿಲ್ಲ, ಬರಿ ಹಸುವಿಗಲ್ಲ, ಉಳುವ ಎತ್ತುಗಳಿಗೆ ಮೇವು ಕೇಳುತ್ತಿರುವುದು. ಬರಿ ಹಸುಗಳಿಗೆ ಯಾರೊ ಬೋರ್ ವೆಲ್ ಇಟ್ಟುಕೊಳ್ಳುತ್ತಾರೆ ಅಥವಾ ಹಿಂಡಿಗಿಂಡಿ ತಂದು ಹಾಲು ತೆಗೆದುಕೊಳ್ಳುತ್ತಾರೆ. ಇವತ್ತು ನಿಮ್ಮ ಡೈರಿ ಕಡೆ ಹಿಂಡಿಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇನೆ ಎಂದರಲ್ಲ, 25 ಕೋಟಿ ರೂಪಾಯಿಗಳನ್ನು ಎಸ್.ಎಂ.ಪಿ.ಪೌಡರ್‌ಗೆ ಕೊಡಿ, ರೈತರಿಗೆ ಬಟವಾಡ ಕೊಡುವುದಕ್ಕೆ ಅಡ್ವಾನ್ಸ್ ಆಗಿ ಕೊಟ್ಟಿರಿ. ನಾನು ನಿರ್ದೇಶಕನಾಗಿರುವುದಕ್ಕೆ ಟಿ.ಎ., ಡಿ.ಎ ಬರುತ್ತದೆ ಅಷ್ಟೆ ಇನ್ನೇನು ಇಲ್ಲ. ನಾನು ಮಾಜಿ ಅಧ್ಯಕ್ಷನಾದರೂ ಕೂಡ ನನ್ನ ಕೈಯಲ್ಲಿ ಇಲ್ಲ

ಸ್ವಾಮಿ? ನೀವು ಇವತ್ತು ಆಡಳಿತ ನಡೆಸುತ್ತಿದ್ದೀರಿ, ಇಲ್ಲವೆಂದರೆ ಕ್ಲೋಸ್ ಮಾಡಿ, ನಮ್ಮ ಕೈಯಲ್ಲಿ ಆಡಳಿತ ನಡೆಸುವುದಕ್ಕಾಗುವುದಿಲ್ಲ, ನಾನು ಕೃಷಿ ಸಚಿವರು, ಕೇಂದ್ರ ಸರ್ಕಾರಕ್ಕೆ ಸಿದ್ದರಾಮಯ್ಯನವರನ್ನು ಕರೆದುಕೊಂಡು ಹೋದೆ, ನಮ್ಮ ಕೈಯಲ್ಲಿ ತರುವುದಕ್ಕಾಗಲಿಲ್ಲ, ನನ್ನ ಕೈಯಲ್ಲಿ ಈ ರಾಜ್ಯದ ಬರ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕಾಗಲಿಲ್ಲವೆಂದು ಹೇಳಿ, ಘೋಷಣೆ ಮಾಡಿ. ಇವತ್ತು ಸಿದ್ದರಾಮಯ್ಯನವರನ್ನು ಕರೆದುಕೊಂಡು ಹೋಗಿ ಒತ್ತಾಯ ಮಾಡಿ, ದೆಹಲಿಗೆ ಕರೆದುಕೊಂಡು ಹೋಗಿ ಒತ್ತಾಯ ಮಾಡಿಲಿಲ್ಲವೇ? ಹೇಳಿ, ಎಸ್.ಎಂ.ಪಿ.ಪೌಡರ್ ಮಾಡುವುದಕ್ಕೆ ನಮ್ಮಲ್ಲಿ ಹಣವಿಲ್ಲ, ದಯಮಾಡಿ NDDB ಕಡೆಯಿಂದ ದುಡ್ಡು ಕೊಡಿಸಿ, ಕೇಂದ್ರ ಸರ್ಕಾರದ ಕೃಷಿ ಸಚಿವರು ಮಧ್ಯಪ್ರವೇಶ ಮಾಡಿ ಎಂದು ನೀವು ಕೇಳಿ? ಹೊರಗಡೆಗೆ ರಫ್ತು ಮಾಡುವುದಕ್ಕೆ ಹೇಳಿ. ಇವತ್ತು ಇಡೀ ದೇಶದಲ್ಲಿ ಏನಿದೆ, ದಯಮಾಡಿ ಹೇಳಿ. ಅದನ್ನು ಹೇಳುವುದು ಬಿಟ್ಟು, ಉತ್ತರ ಹೇಳುವುದಕ್ಕೆ ನೀವು ಬರೆದುಕೊಳ್ಳಬೇಕು. ಈಗ ಆಲೂಗಡ್ಡೆಯನ್ನು ಪರ್ಚೇಸ್ ಮಾಡಿದೆವು, ಒಬ್ಬ ಮುಖ್ಯಮಂತ್ರಿಯನ್ನು ತೆಗೆದುಹಾಕಿದ್ದೇವೆ ಎಂದರಪ್ಪ, ನಾವೇನು ಬೇಡವೆಂದು ಹೇಳಿದೆವೆಯೇ? ಏನು ಹಾಸನ ಜಿಲ್ಲೆಗೆ ಪ್ಯಾಕೇಜ್ ಮಾಡಿ ಎಂದು ಕೇಳುವುದಕ್ಕೆ ನಿಮ್ಮ ಹತ್ತಿರ ಬಂದಿದ್ದೇವೆಯೇ? ಬೇಕಾದರೆ ಇಡೀ ರಾಜ್ಯಕ್ಕೆ ಮಾಡಿ.

ಶ್ರೀ.ಬಿ.ಎನ್.ಬಚ್ಚೇಗೌಡ(ಕಾರ್ಮಿಕ ಸಚಿವರು):- ಆಡಳಿತ ಮಂಡಳಿಯಲ್ಲಿ ತಾವೇ ನಿರ್ದೇಶಕರು, ಮಾಜಿ ಅಧ್ಯಕ್ಷರು, ಇವನ್ನೆಲ್ಲಾ ಅಲ್ಲೇ ಹೇಳಬಹುದು. ಆದರೆ ಇಲ್ಲಿ ಬಂದು ಮಾತನಾಡುತ್ತಿದ್ದೀರಿ, ತಾವು ಅಲ್ಲಿ ನಿರ್ದೇಶಕರಲ್ಲವೇ? ದಯಮಾಡಿ ಈ ಫ್ಯಾಕ್ಟ್ಸ್ ಹೇಳಿ ಸರ್, ಯಾರು ಬೇಡವೆಂದರು.

ಶ್ರೀ.ಹೆಚ್.ಡಿ.ರೇವಣ್ಣ:- ತಾವು ಹಿರಿಯ ಸದಸ್ಯರಿದ್ದೀರಿ ತಮ್ಮ ಗಮನಕ್ಕೆ ತರುತ್ತೇನೆ, ನಾನು ಎಷ್ಟು ಪತ್ರಗಳನ್ನು ಬರೆದಿದ್ದೇನೆಂಬುದಕ್ಕೆ ಬೇಕಾದರೆ ಪ್ರತಿಯನ್ನು ನಿಮಗೆ ಕಳುಹಿಸಿಕೊಡುತ್ತೇನೆ. ನಾನು ಕೊಟ್ಟು ಮಾಡಿಸುವುದಕ್ಕೆ ಶಕ್ತಿ ಇಲ್ಲ, ನಿಮಗೆ ಅಧಿಕಾರವಿದೆ ಮಾಡಿ ಎಂದು ನಾನು ಕೇಳುತ್ತಿದ್ದೇನೆ. ಬೇಡವೆಂದರೆ 9 ವಾರವಲ್ಲ 10 ವಾರ ಕೊಡುವುದು ಬೇಡವೆಂದರೆ, ನಮ್ಮದೇನು ಅಭ್ಯಂತರವಿಲ್ಲ. ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ಸಾಮಾನ್ಯ ವಿಧಾನಸಭೆ ಸದಸ್ಯನಾಗಿ ಮಾತನಾಡುತ್ತಿದ್ದೇನೆ. 9,000 ಟನ್ ಬಿದ್ದಿದೆ, 132 ಕೋಟಿ ರೂಪಾಯಿಗಳು ನಷ್ಟವಾಗುತ್ತದೆ, ಪತ್ರಿಕೆ ಕಟಿಂಗ್ ಅನ್ನು ಕೊಡಲೇ? ಅದನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಬಚ್ಚೇಗೌಡರು, ಇದನ್ನು ಗಮನಕ್ಕೆ ತರುವುದು ಬೇಡವೆಂದು ಹೇಳಿದರೆ ನನ್ನದೇನು ಅಭ್ಯಂತರವಿಲ್ಲ 51 ಲಕ್ಷ ಲೀಟರ್ ಹೇಗೆ

ಬಂತು ಎಂದು ಹೇಳುತ್ತಾರಲ್ಲ, ದಾಖಲೆಗಳಿವೆ ಸ್ವಾಮಿ, ಪೇಪರ್ ಕಟಿಂಗ್ ಕೊಡಲೇ?

ಶ್ರೀ.ವಿ.ಉಮೇಶ್ ಕತ್ತಿ:– ನಾನು ಹೇಳಿದ್ದು, 51 ಲಕ್ಷ ಲೀಟರ್ ಹಾಲಿನ ಉತ್ಪಾದನೆಯಾಯಿತು ಎಂದು ಹಿಂದೆ 10 ಲಕ್ಷ ಆಗುತ್ತಿರುಲಿಲ್ಲವೆಂದು ನೀವೇ ಹೇಳಿದಿರಿ.

ಶ್ರೀ.ಬಿ.ಎನ್.ಬಚ್ಚೇಗೌಡ:– ನಮ್ಮ ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟ 12 ಲಕ್ಷ ಲೀಟರ್ ಹಾಲು ಉತ್ಪಾದನೆ ಮಾಡುತ್ತಿದೆ ಎಂದು ಹೇಳಿದ್ದು ನಿಜವೇ. ಒಂದು ಒಕ್ಕೂಟವೇ ಇವತ್ತು 12 ಲಕ್ಷ ಲೀಟರ್ ಉತ್ಪಾದನೆ ಮಾಡಬೇಕಾದರೆ, ಕೋಲಾರ ಸೇರಿಸಿದರೆ ರಾಜ್ಯದ ಅರ್ಧದಷ್ಟು ಹಾಲನ್ನು ಈ ಎರಡು ಒಕ್ಕೂಟಗಳು ಉತ್ಪಾದನೆ ಮಾಡುತ್ತಿದ್ದಾವೆ, ಉಳಿದವನ್ನು ಮಿಕ್ಕವು ಮಾಡುತ್ತಿದ್ದಾವೆ. 1994ನಲ್ಲಿ 12 ಲಕ್ಷ ಲೀಟರ್ ಇದ್ದದ್ದು, ಇವತ್ತು ನಾವು 2012ರಲ್ಲಿದ್ದೇವೆ, ನಮ್ಮಿಂದ ಗ್ರೋತ್ ಜಾಸ್ತಿಯಾಗಿರುವುದನ್ನು ತಿಳಿದುಕೊಳ್ಳಬೇಕು. ನಿಮ್ಮ ತಂದೆಯವರೆ (ಮಾಜಿ ಪ್ರಧಾನ ಮಂತ್ರಿ ದೇವೇಗೌಡರು) ಪ್ರಧಾನಮಂತ್ರಿಗಳಾಗಿದ್ದರು, ಮೊದಲು ಇಲ್ಲೇ ಇದ್ದರು ನಾನು ಆಗ ಪಶುಸಂಗೋಪನ ಸಚಿವನಾಗಿದ್ದೆ, ಆಗ ಗೂಳಿಗಳನ್ನು ಆಸ್ಟ್ರೇಲಿಯದಿಂದ ತೆಗೆದುಕೊಂಡು ಬಂದೆವು, ತಂದಾದ ಮೇಲೆ ಇಷ್ಟು ಇಂಕ್ರೀಸ್ ಆದಂಥ ವ್ಯವಸ್ಥೆ, ಅದು ತಮಗೇ ಗೊತ್ತಿದೆ.

ಶ್ರೀ.ಹೆಚ್.ಡಿ.ರೇವಣ್ಣ:– ಕೃಷಿ ಸಚಿವರೆ, ನಿಮಗೆ ಗೊತ್ತಿಲ್ಲ ಕುಳಿತುಕೊಳ್ಳಿ, ಬಚ್ಚೇಗೌಡರು ಸರಿಯಾಗಿ ಹೇಳುತ್ತಿದ್ದಾರೆ.

ಶ್ರೀ.ವಿ.ಉಮೇಶ್ ಕತ್ತಿ:– ರಾಜ್ಯದಲ್ಲಿ ಮೇವಿಲ್ಲವೆಂದು ಹೇಳುತ್ತಿದ್ದಾರೆ, ಮೇವಿಲ್ಲದೆ ಹಾಲು ಉತ್ಪಾದನೆ ಹೆಚ್ಚು ಹೇಗಾಗುತ್ತದೆನ್ನುವುದಷ್ಟೆ ನನ್ನ ಪ್ರಶ್ನೆ.

ಶ್ರೀ.ಹೆಚ್.ಡಿ.ರೇವಣ್ಣ:– ಮಾನ್ಯ ಬಚ್ಚೇಗೌಡರು ಒಂದು ಮಾತನ್ನು ಹೇಳಿದರು ನಿಜ, 1994ರಲ್ಲಿ 12 ಲಕ್ಷ ಲೀಟರ್ ಇದ್ದದ್ದನ್ನು ಅವರೇ ಒಪ್ಪಿಕೊಂಡಿದ್ದಾರೆ. ಈಗ ರೈತರ ಹಾಲಿಗೆ ಪೇಮೆಂಟ್ ಕೊಡುವುದಕ್ಕೆ ನೀವು ಮಾರಾಟ ಮಾಡಿ ಹಣ ಕೊಡಿ, ಇಲ್ಲವೆಂದರೆ, ಸರ್ಕಾರದಿಂದ ಆ ದುಡ್ಡನ್ನು ಕೊಟ್ಟು ಆಮೇಲೆ ಬೇಕಾದರೆ ನೀವು ಮಾರಾಟ ಮಾಡಿಕೊಳ್ಳಿ ನಾವು ಬೇಡವೆನ್ನುವುದಿಲ್ಲ, ಈಗ ಬರಗಾಲವಿದೆ, ರೈತರಿಗೆ ಮೇವಿಗೆ ತೊಂದರೆ ಇದೆ ಬಟವಾಡೆ ಕೊಡಿ. ರೂ.180 ಇದ್ದು ರೂ.120 ಹೋಗುತ್ತಿದೆ ಆ ನಷ್ಟಕ್ಕೆ ಕಾರಣ ಯಾರು? ಅದನ್ನು ದಯಮಾಡಿ ನೀವು ಅರ್ಥ ಮಾಡಿಕೊಳ್ಳಿ. ಇವತ್ತು ಕಂದಾಯ ಇಲಾಖೆಯಲ್ಲಿ ನಮ್ಮ ಸನ್ಮಾನ್ಯ ಉಪ ಮುಖ್ಯಮಂತ್ರಿಗಳೇ ಇದ್ದಾರೆ. ಅಲ್ಲಿ ನೆಮ್ಮದಿ ಕೇಂದ್ರಗಳನ್ನು ಮಾಡಿದ್ದಾರೆ, ಇದರಿಂದ ರೈತರ ನೆಮ್ಮದಿಯೇ

ಹಾಳಾಗಿದೆ. ರೈತರು ನೆಮ್ಮದಿಯಾಗಿ ಮನೆಯಲ್ಲಿ ಮಲಗುವಂತಿಲ್ಲ, ಅವರ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಸೇರಿಸುವುದಕ್ಕೆ ಒಂದು ಆದಾಯ ಪ್ರಮಾಣಪತ್ರ ತೆಗೆದುಕೊಳ್ಳಬೇಕಾದರೆ ರಾತ್ರಿ 3 ಗಂಟೆ, 4 ಗಂಟೆ 5 ಗಂಟೆಗೆ ಹೋಗಿ ಕಾಯುತ್ತಿದ್ದಾರೆ, ಇದರಿಂದ ಕಾಲೇಜುಗಳಿಗೆ ಅಡ್ಮಿಷನ್ ಆಗುತ್ತಿಲ್ಲ.

ಪ್ರಕಾಶ್‌ರವರು ಮೊನ್ನೆ ರಾತ್ರಿ ಮೂರು ಗಂಟೆಯವರೆಗೆ ಕಾದು ಅಲ್ಲಿಯೇ ಅನ್ನ ಸಾಂಬಾರ್ ತರಿಸಿಕೊಂಡು ತಿಂದು ರಾತ್ರಿ ಮೂರು ಗಂಟೆಗೆ ಇನ್‌ಕಮ್ ಸರ್ಟಿಫಿಕೇಟ್ ಕೊಡಿಸಿದ್ದಾರೆ. ನಿಮಗೆ Computer ಏಕೆ ಬೇಕು? ಅದನ್ನು ತೆಗೆದು ಹಾಕಿ. ಹಿಂದೆ ಶಾನುಭೋಗರಿಗೆ ಒಂದು ಸೇರು ಬೆಣ್ಣೆ ಕೊಟ್ಟರೆ ಸಾಕು ಪಹಣಿ ಖಾತೆ ತಂದು ಮನೆಗೆ ಕೊಡುವರು. ನೆಮ್ಮದಿ ಕೇಂದ್ರದಲ್ಲಿ ಒಂದು ಅರ್ಧ ಗುಂಟೆ ಜಮೀನು ರಿಜಿಸ್ಟರ್ ಮಾಡಿಸಬೇಕಾದರೆ ಎಷ್ಟು ವರ್ಷ ಬೇಕು ಕೇಳಿ. ಎರಡು–ಮೂರು ವರ್ಷಗಳಾದರೂ ಕೂಡ ಪಕ್ಕಾ ಪೋಡಿ ಆಗಿದೆಯಾ? ಆ ಜಮೀನು ಮಾರುವುದಕ್ಕೆ ಪಕ್ಕಾ ಪೋಡಿ ಮಾಡದೇ ಇದ್ದರೆ ಅವನು ಜಮೀನು ಮಾರಾಟ ಮಾಡುವುದಕ್ಕಾಗುವುದಿಲ್ಲ. ಮೂರು ವರ್ಷಗಳು ಕಳೆದರೂ ಅವನ ಪಹಣಿಯಲ್ಲಿ ಅವನು ಏನು ಬೆಳೆ ಬೆಳೆದಿದ್ದಾನೆಂದು ನಿಮ್ಮ Computer ನಲ್ಲಿ ಎಂಟ್ರೀ ಆಗುತ್ತಿದೆಯಾ? ಅವರು ಆ ಸಿಸ್ಟಮ್ ಇಲ್ಲವೆಂದು ಹೇಳುತ್ತಾರೆ. ಕಂಪ್ಯೂಟರ್ ಏಕೆ ಬೇಕು? ನೆಮ್ಮದಿ ಕೇಂದ್ರ ತೆಗೆದು ಅವರಿಗೆ ಕೊಡಿ. ರೈತರ ಪಹಣಿ ವಿಲೇಜ್ ಅಕೌಂಟೆಂಟ್ ಕೈಯಲ್ಲಿ ಕೊಡಿಸಿ ಆ ಮೇಲೆ ನಿಧಾನವಾಗಿ ಕಂಪ್ಯೂಟರ್‌ನಲ್ಲಿ ಎಂಟ್ರೀ ಮಾಡಿ. ನಾವು ಬೇಡವೆನ್ನುವುದಿಲ್ಲ. ಸುವರ್ಣ ಭೂಮಿ ಲಾಟರಿಗೆ ಅರ್ಜಿ ಹಾಕಬೇಕಾದರೆ ಮೂರರಿಂದ ನಾಲ್ಕು ರಾತ್ರಿಗಳಿಂದ ಕ್ಯೂ ನಿಂತು ತಂದಿದ್ದಾರೆ. ಏಕೆಂದರೆ ಸುವರ್ಣ ಭೂಮಿಗೆ Income Certificate ಕೊಡಬೇಕು. ಸ್ಥಳೀಯ ದೃಢೀಕರಣ ಪತ್ರ ಕೊಡಬೇಕು. ಪಹಣಿ ಎಲ್ಲಾ ಕಂಪ್ಯೂಟರ್‌ನಲ್ಲಿ ಬರಬೇಕು. ಕಂಪ್ಯೂಟರ್ ತೆಗೆಯಿರಿ. ನೀವೂ ರೈತರ ಮಕ್ಕಳು. ಕೈಯಲಿಯೇ ಪಹಣಿ ಬರೆಯಿರಿ. ಪಹಣಿ ತೆಗೆದುಕೊಳ್ಳುವುದಕ್ಕೆ ಹೋದರೆ ಕರೆಂಟ್ ಇಲ್ಲ, ಜನರೇಟರ್ ಇಲ್ಲವೆಂದು ಹೇಳುತ್ತಾರೆ. ಪಹಣಿ ತೆಗೆದುಕೊಳ್ಳುವುದಕ್ಕೆ 25 ರೂಪಾಯಿ ಕೊಡಬೇಕು. ಹಿಂದೆ ಶಾನುಭೋಗರು ಇದ್ದಾಗ ಅರ್ಧ ಸೇರ್ ಬೆಣ್ಣೆ ಕೊಟ್ಟರೆ ಅವರು ಪಹಣಿ ಬರೆದು ಮನೆಗೆ ತಂದು ಕೊಡುವರು.

ಉಪಾಧ್ಯಕ್ಷರು:– ಮಾನ್ಯ ಕಂದಾಯ ಸಚಿವರು ಸ್ವಲ್ಪ ಗಮನಿಸಿ. ಭೂಮಿಯಲ್ಲಿ 22 ದೋಷಗಳನ್ನು ಗುರುತಿಸಿದ್ದಾರೆ. ಇದರ ಬಗ್ಗೆ ಅರ್ಜಿಗಳ ಸಮಿತಿಯಲ್ಲಿ ಸಾಕಷ್ಟು ಚರ್ಚೆಯಾಗಿದೆ ಕಂದಾಯದಲ್ಲಿ 10 ದೋಷಗಳು ಇವೆ.

ಇವು ಇಷ್ಟನ್ನು ಅಪ್‌ಗ್ರೇಡ್ ಮಾಡಿದರೆ, 90% Problem Solve ಆಗುತ್ತದೆ. Suo-Motu ಆಗಿ ಸಮಿತಿಯಿಂದ ಇದರ ಬಗ್ಗೆ ಅಧ್ಯಯನ ಮಾಡಿ ಪರಿಹಾರ ಕಾಣುವಂತಹ ಪ್ರಯತ್ನ ಆಗುತ್ತಿದೆ. ತಕ್ಷಣ ಅದನ್ನು ಅಪ್‌ಗ್ರೇಡ್ ಮಾಡುವುದನ್ನು ಮಾಡಿ. ಇಲ್ಲದೇ ಇದ್ದರೆ ಜನ ಸಫರ್ ಆಗುತ್ತಾರೆ.

ಶ್ರೀ.ಹೆಚ್.ಡಿ.ರೇವಣ್ಣ:- ಮಾನ್ಯ ಉಪಾಧ್ಯಕ್ಷರೆ, ಇವತ್ತು ಬರಗಾಲ ಇರುವುದರಿಂದ ಬರಗಾಲಕ್ಕೆ ಹಲವಾರು ಅರ್ಜಿಗಳನ್ನು ಕೊಡಬೇಕಾಗಿದೆ. ಬೆಳೆ ಬೆಳೆದಿರುವ ಬಗ್ಗೆ ಪಹಣಿಯಲ್ಲಿ ಎಂಟ್ರೀ ಆಗಬೇಕಾಗಿದೆ. ಅದು ಎಂಟ್ರೀ ಆಗುತ್ತಿದೆಯಾ? ಮೂರು ವರ್ಷಗಳಿಂದ ಪಹಣಿಯಲ್ಲಿ ಯಾವುದಾದರೂ ಬೆಳೆ ಬೆಳೆದಿರುವುದು ಎಂಟ್ರೀ ಆಗಿದ್ದರೆ ನಾನು ನೀವು ಹೇಳಿದ್ದನ್ನು ಕೇಳುತ್ತೇನೆ. ಬೇಕಾದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ. ಎಲ್ಲಾ ಖಾಲಿ ಬಿಟ್ಟಿದ್ದಾರೆ. ನೆಮ್ಮದಿ ಕೇಂದ್ರಗಳಲ್ಲಿ ಈ ಪರಿಸ್ಥಿತಿ ಇದೆ.

ಶ್ರೀ.ಸಿ.ಎಂ.ಉದಾಸಿ:- ಬೇರೆ ರಾಜ್ಯದವರು ಕರ್ನಾಟಕ ರಾಜ್ಯದ ಮಾದರಿಯಂತೆ ಮಾಡಬೇಕೆಂದು ಹೇಳುವಾಗ ನೀವು ರದ್ದುಪಡಿಸಿ ಎಂದು ಹೇಳುವುದು ಎಷ್ಟರಮಟ್ಟಿಗೆ ಸಮಂಜಸ? ಲೋಪದೋಷಗಳನ್ನು ಸರಿಪಡಿಸುವುದಕ್ಕೆ ಏನು ಮಾಡಬೇಕೆಂಬ ಬಗ್ಗೆ ಯೋಜನೆ ಮಾಡಬೇಕೇ ಹೊರತು, ಇದರಲ್ಲಿ Malpractice ಗೆ ತೊಂದರೆಯಾಗಿದೆ. Malpractice ಯಾರೂ ಮಾಡುವುದಕ್ಕೆ ಆಗದ ಹಾಗೆ ವ್ಯವಸ್ಥೆಯಾಗಿದೆ. ಮೊದಲಿನ ಹಾಗೆ ಅಲ್ಲಿ ಏನು ತೊಂದರೆಯಾಗುತ್ತಿತ್ತು ಅದನ್ನು ತಪ್ಪಿಸುವ ಕೆಲಸವಾಗಿದೆ. ಸುಧಾರಣೆ ಮಾಡುವ ಬಗ್ಗೆ ತಮ್ಮ ಸಲಹೆಗಳನ್ನು ಹೇಳಬೇಕೇ ವಿನಃ ಅದನ್ನು ರದ್ದುಪಡಿಸಿ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸಮಂಜಸವೆಂದು ನೀವು ಹೇಳಬೇಕು.

ಶ್ರೀ.ಹೆಚ್.ಡಿ.ರೇವಣ್ಣ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉದಾಸೀ ಸಾಹೇಬರು ಹಿರಿಯ ಸದಸ್ಯರು. ಅವರನ್ನು ಹಾಸನ ತಾಲ್ಲೂಕ್ ಆಫೀಸಿಗೆ ಕರೆದುಕೊಂಡು ಹೋಗುತ್ತೇನೆ. ಅಲ್ಲಿ ಜಮೀನು ಮಾರಾಟ ಮಾಡುವುದಕ್ಕೆ ಅವನಿಗೆ 5 ರಿಂದ 10 ಗುಂಟೆ ಜಮೀನು ಇರುತ್ತದೆ, ಐದು ಗುಂಟೆ ಜಮೀನು ಮಾರುವುದಕ್ಕೆ ಪಕ್ಕಾ ಪೋಡಿ ಮಾಡುವುದಕ್ಕೆ ಎಷ್ಟು ದಿನ ತೆಗೆದುಕೊಂಡಿದ್ದಾರೆ ಕೇಳಿ. ಮೂರರಿಂದ ನಾಲ್ಕು ವರ್ಷಗಳಾದರೂ ಆಗಿದೆಯೇ ಕೇಳಿ. ರೈತ ಅವನ ಮಗಳಿಗೆ ಮದುವೆ ಮಾಡಬೇಕು, ಒಂದು ಹತ್ತು ಗುಂಟೆ ಜಮೀನು ಮಾರಬೇಕು, ಹತ್ತು ಗುಂಟೆ ಜಮೀನು ಮಾರಬೇಕಾದರೆ ಇವತ್ತು ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಪಕ್ಕಾ ಪೋಡಿ ಇಲ್ಲದೆ ಮಾರುವುದಿಲ್ಲ. ರಿಜಿಸ್ಟ್ರೇಷನ್ ಆಗುತ್ತಿದೆಯೇ? ದಯಮಾಡಿ ಹೇಳಿ. ಒಬ್ಬ ಹುಡುಗ ಶಾಲೆಗೆ

ಸೇರಿಕೊಳ್ಳಬೇಕಾದರೆ Income Certificate ತೆಗೆದುಕೊಳ್ಳಬೇಕಾಗುತ್ತದೆ. ಶಾಲೆಗೆ ಸೇರುವವನು 25 ರೂಪಾಯಿ ಕಂಪ್ಯೂಟರ್‌ಗೆ ದುಡ್ಡು ಕೊಟ್ಟು ಮೂರರಿಂದ ನಾಲ್ಕು ದಿನ ನಿಂತುಕೊಳ್ಳಬೇಕು. ಅವನಿಗೆ ಅಡ್ಮಿಷನ್‌ಗೆ 15 ದಿನ ಸಮಯ ಇರುತ್ತದೆ. ಇದರ ಬಗ್ಗೆ ಒಂದು ಸದನ ಸಮಿತಿ ಮಾಡಿ. ಏನೇನು ಲೋಪದೋಷಗಳಿವೆ ಎಂದು ಪತ್ತೆ ಹಚ್ಚಿ. ಮಾಲ್ ಪ್ರಾಕ್ಟೀಸ್‌ಗೆ ಅವಕಾಶ ಕೊಡಿ ಎಂದು ನಾನು ನಿಮ್ಮ ಹತ್ತಿರ ಕೇಳುವುದಕ್ಕೆ ಬಂದಿಲ್ಲ. ಲೋಪದೋಷಗಳನ್ನು ಸರಿಪಡಿಸುವುದಕ್ಕೆ ನಾಲ್ಕು ವರ್ಷ ಬೇಕಾ? Computerize ಆಗಿ ಎಷ್ಟು ವರ್ಷ ಆಯಿತು? ಬೇರೆ ತಾಲ್ಲೂಕು ಆಫೀಸ್‌ಗಳಲ್ಲಿ ಮಾಡಿದ್ದಾರೆಂದರೆ ನೀವು ಹೇಳಿದ್ದನ್ನು ನಾನು ಕೇಳುತ್ತೇನೆ. ಕ್ಷಮೆ ಕೇಳುತ್ತೇನೆ. ನೆಮ್ಮದಿ ಕೇಂದ್ರದಲಿ ರೈತರಿಗೆ ಆಗುವ ಅನುಕೂಲಗಳನ್ನು ದಯಮಾಡಿ ಸಭೆಯ ಗಮನಕ್ಕೆ ತೆಗೆದುಕೊಂಡು ಬನ್ನಿ. ಶಾಲೆಗೆ ಅಡ್ಮಿಷನ್ ಆಗಬೇಕಾದರೆ Income Certificate ತೆಗೆದುಕೊಳ್ಳಬೇಕು. ಹಾಸ್ಟೆಲ್‌ಗೆ ಅರ್ಜಿ ಹಾಕಬೇಕಾದರೆ Income Certificate ತೆಗೆದುಕೊಳ್ಳಬೇಕು. ಮನೆ ತೆಗೆದುಕೊಳ್ಳಬೇಕೆಂದರೆ, Income Certificate ತೆಗೆದುಕೊಳ್ಳಬೇಕು. ಯಾವುದಾದರೂ ಲೋನ್ ತೆಗೆದುಕೊಳ್ಳಬೇಕೆಂದರೆ, ಪಹಣಿ ಬೇಕೆಂದು ಹೇಳುತ್ತೀರಿ. ಮಾನ್ಯ ಕಂದಾಯ ಸಚಿವರು ಕೂಡ ರೈತ ಕುಟುಂಬದಿಂದ ಬಂದಂತಹವರು. ಇರುವ ನ್ಯೂನತೆಗಳನ್ನು ಸರಿಪಡಿಸಿ. ವಿಲೇಜ್ ಅಕೌಂಟೆಂಟ್‌ಗೆ ಅರ್ಜೆಂಟಾಗಿ ಪಹಣಿ ಕೊಡುವುದಕ್ಕೆ ಅಧಿಕಾರ ಕೊಡಿ. ಕೊನೇ ಹಂತದಲ್ಲಿ ನೀವು ಕಂಪ್ಯೂಟರನಲ್ಲಿ ನಿಧಾನವಾಗಿ ಸೇರಿಸಿ. ಬೆಳೆದ ಬೆಳೆ ಪಹಣಿಯಲ್ಲಿ ಎಂಟ್ರೀ ಮಾಡುವುದಕ್ಕೆ ಮೂರರಿಂದ ನಾಲ್ಕು ವರ್ಷ ಬೇಕಾ? ನಾನು ಏನು ಬೆಳೆ ಬೆಳೆದಿದ್ದೇನೆಂದು ಲೋಕಾಯುಕ್ತಕ್ಕೆ ಮಾಹಿತಿ ಕೊಡ-ಬೇಕಾಗುತ್ತದೆ. ಲೋಕಾಯುಕ್ತದವರು ನಾಳೆ ಬೆಳಿಗ್ಗೆ ನನಗೆ ಹಿಡಿದುಕೊಂಡು ಕೇಸ್ ಹಾಕುತ್ತಾರೆ. ಅವರಿಗೆ ಹೇಳಿ ಕೈ ಪಹಣಿಯಾದರೂ ಕೊಡಲಿ. ಆಲೂಗಡ್ಡೆ ಇರಬಹುದು, ಹೊಗೆಸೊಪ್ಪು ಇರಬಹುದು, ಇವುಗಳ ಪಹಣಿ ಬರೆಯುತ್ತಿದ್ದಾರಾ ದಯಮಾಡಿ ಹೇಳಲಿ. ಜನತಾ ಮನೆ ಕಟ್ಟಬೇಕು, ನಿವೇಶನ ಇರುವುದಿಲ್ಲ, ಸರ್ಕಾರಿ ಜಮೀನು ಇರುತ್ತದೆ, ಅವನ ಹೊಲದಲ್ಲಿ ಖಾಲಿ ಜಾಗ ಇರುತ್ತದೆ. ಡಿಸಿಗಳಿಗೆ ಒಂದು ಡೈರೆಕ್ಷನ್ ಕೊಡಿ. ನಗರ ಪ್ರದೇಶಗಳಲ್ಲಿ ಇವತ್ತು ಧಂದೆ ನಡೆಯುತ್ತಿದೆ. ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಬಡವರು ನಿವೇಶನ ಖರೀದಿ ಮಾಡುವುದಕ್ಕಾಗುತ್ತಿಲ್ಲ. ಮಾನ್ಯ ಪ್ರಕಾಶ್‌ರವರು ಇಲ್ಲಿಯೇ ಕೂತಿದ್ದಾರೆ. ನಾವು ಹಾಸನ ಜಿಲ್ಲೆಯಲ್ಲಿ ಹೌಸಿಂಗ್‌ಬೋರ್ಡ್‌ನಿಂದ 5000 ನಿವೇಶನ ಕೊಡಬೇಕೆಂದು ಮಾಡಿದೆವು. ಅದನ್ನು ಡಿ ನೋಟಿಫಿಕೇಷನ್ ಮಾಡಿದಿರಿ.

ಇವತ್ತು ಮಧ್ಯವರ್ತಿಗಳ ಹಾವಳಿ ಜಾಸ್ತಿಯಾಗಿದೆ. ಹೌಸಿಂಗ್ ಬೋರ್ಡ್‌ನಿಂದ ಮಾಡಿದ ಸೈಟು ಸರ್ಕಾರದಿಂದ 500 ರೂಪಾಯಿಗೆ ತೆಗೆದುಕೊಂಡು ಮಾರನೆ ದಿನ ಬೆಳಿಗ್ಗೆ 2000 ರೂಪಾಯಿಗೆ ಮಾರುತ್ತಾರೆ. ಅದಲ್ಲದೆ ಕೆಲವು ಖಾಸಗಿಯವರು ಇವತ್ತು ನಿವೇಶನ ಮಾಡುವುದಕ್ಕೆ ಹೊರಟಿದ್ದಾರೆ. ಜಿಲ್ಲಾ ಕೇಂದ್ರ ಇರಬಹುದು, ತಾಲ್ಲೂಕು ಕೇಂದ್ರ ಇರಬಹುದು. ಐದು ಕಿ.ಮಿ. ವರೆಗೆ ಯಾವುದಾದರೂ ಪ್ಲ್ಯಾನ್ ಇದೆಯೇ? ರಸ್ತೆ ಮಾಡುತ್ತಾರಾ? ಪಾರ್ಕಿಗೆ ಜಾಗ ಇಡುತ್ತಾರಾ? ಆಟದ ಮೈದಾನಕ್ಕೆ ಜಾಗ ಇಡುತ್ತಾರಾ? ಶಾಲೆಗಲಿಗೆ ಜಾಗ ಇಡುತ್ತಾರಾ? ಹೋಗೋದು ಒದೊಂದು ಕುಂಟೆ ಏಲಿನೇಷನ್ ಮಾಡಿಸುವುದು ಮಾರಾಟ ಮಾಡುವುದು ರೈತರ ಜಮೀನನ್ನು ಲೂಟಿ ಮಾಡುವುದು. ರೈತರಿಗೂ ಅನುಕೂಲ ಇಲ್ಲ, ಈ ಕಡೆ ಬಡವರಿಗೂ ಸೈಟೂ ಇಲ್ಲ. ಮಾನ್ಯ ಉಪಾಧ್ಯಕ್ಷರೆ ನೀವು ಅರ್ಥ ಮಾಡಿಕೊಳ್ಳಬೇಕು. ಇಡೀ ರಾಜ್ಯದಲ್ಲಿ 29 ಜಿಲ್ಲೆಗಳಲ್ಲಿ ಇವತ್ತು ಮಳೆ ಇಲ್ಲ. 151 ತಾಲ್ಲೂಕುಗಳಲ್ಲಿ ಇವತ್ತು ಬರಗಾಲ ಇದೆ. 506 ಹೋಬಳಿಗಳು ಸೇರಿದಂತೆ ಇಡೀ ರಾಜ್ಯದಲ್ಲಿ ಸುಮಾರು 82 ಪರ್ಸೆಂಟ್ ಬರಗಾಲವಿದೆ. ರೈತರು ಬೆಳೆದ ಮುಂಗಾರು ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಇದೇ ರೀತಿ ಹಿಂಗಾರು ಬೆಳೆಯೂ ಕೂಡ ಸಂಪೂರ್ಣ ನಾಶವಾಗುತ್ತದೆ. ಹೀಗಾಗಿ ಇವತ್ತು ರೈತರು ವಿಷ ತೆಗೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಕೇಂದ್ರ ಸರ್ಕಾರಕ್ಕೆ ನೀವು ಇದರ ಬಗ್ಗೆ ಮನವರಿಕೆಯನ್ನು ಮಾಡಿ. ಈ ರಾಜ್ಯದ 5 ಜನ ಮಂತ್ರಿಗಳಿದ್ದಾರಲ್ಲಾ, ಅವರ ಹತ್ತಿರ ಹೋಗಿ ಕೇಳಿ. ನಿಮಗೇನು ಹೆದರಿಕೆ? ಸಿದ್ದರಾಮಯ್ಯನವರನ್ನೂ ಕೂಡ ಜೊತೆಗೆ ಕರೆದುಕೊಂಡು ಹೋಗಿ. ನಮ್ಮನ್ನೇನು ಕರೆದುಕೊಂಡು ಹೋಗಬೇಡಿ, ನಮ್ಮದೇನೂ ನಿಮಗೆ ಲೆಕ್ಕಕ್ಕಿಲ್ಲ. ನೋಡಿ, ಈಗಾಗಲೇ ಮಾನ್ಯ ಜಗದೀಶ್ ಶೆಟ್ಟರ್‌ರವರು ಹೋಗಿ ಕೇಂದ್ರದ ಮಂತ್ರಿಗಳನ್ನು ನೋಡಿದ್ದಾರೆ. ಈಗಾಗಲೇ ಮೂರು ಬಾರಿ ಬೇಡಿಕೆಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಈಗ ಏನಾಗಿದೆ ಸ್ವಾಮಿ? ಮಹಾರಾಷ್ಟ್ರ ರಾಜ್ಯಕ್ಕೆ ಕೇಂದ್ರದವರು ದುಡ್ಡು ಕೊಡುತ್ತಾರೆ, ಬೇರೆ ಬೇರೆ ರಾಜ್ಯಗಳಿಗೆ ಹಣವನ್ನು ಕೊಡುತ್ತಾರೆ. ಕರ್ನಾಟಕದವರಾದ ನಾವೇನು ಮಾಡಿದ್ದೀವಿ? ಕರ್ನಾಟಕಕ್ಕೆ ದುಡ್ಡು ಕೊಡದಿರುವುದಕ್ಕೆ ಏನು ಕಾರಣ? ಪಕ್ಷ ಯಾವುದಾದರೂ ಇರಲಿ ಅದರ ಬಗ್ಗೆ ನೋಡಬಾರದು ಎಂದು ನಾನು ಹೇಳುವುದು. ಆ ದೃಷ್ಟಿಯಿಂದ ಇವತ್ತು ಒಂದು ನಿರ್ಣಯವಾಗಬೇಕು. ಇವತ್ತು ರಾಜ್ಯದಲ್ಲಿ ರೇಶನ್‌ಗೆ ಸಂಬಂಧಪಟ್ಟಂತೆ ಹಸಿರು ಕಾರ್ಡ್‌ನ ಪಡೆಯಲು ಹತ್ತು ವರ್ಷಗಳ ಹಿಂದಿನ ಸೆನ್ಸೆಸ್ ಪ್ರಕಾರ ಕೇಂದ್ರ ಸರ್ಕಾರ ಹೆಚ್ಚು ರೇಶನ್ ಕೊಡಬೇಕೆಂದರೆ ಕಷ್ಟ. ಈ ಬಗ್ಗೆ ಮಾಹಿತಿಯನ್ನು ಈಶ್ವರಪ್ಪನವರೆ ನೀವು ಕೊಡಬೇಕಾಗುತ್ತದೆ. ದಯಮಾಡಿ ನೀವು ಈ ಬಗ್ಗೆ ಕ್ರಮ

ತೆಗೆದುಕೊಳ್ಳಬೇಕು. ಇನ್ನು ತಾವು ಜಿಲ್ಲಾಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟು ರೈತರುಗಳು ಬೆಳೆಗಾಗಿ ಏನು ಸಾಲವನ್ನು ತೆಗೆದುಕೊಂಡಿದ್ದಾರೋ ಅದಕ್ಕೆ ಸಂಬಂಧಪಟ್ಟಂತೆ, ಲೀಡ್ ಬ್ಯಾಂಕ್‌ಗಳ ಮ್ಯಾನೇಜರ್‌ಗಳನ್ನು, ಸಹಕಾರಿ ಸಂಘಗಳವರನ್ನು ಕರೆದು ಆ ಸಾಲಗಳನ್ನೆಲ್ಲಾ ಮತ್ತೆ ಇನ್ನು ಎರಡು ವರ್ಷಕ್ಕೋ, ಮೂರು ವರ್ಷಕ್ಕೋ ಮುಂದುವರಿಸಬೇಕು, ಮತ್ತೆ ಒಂದು ಬಾರಿ ರೈತರು ತೆಗೆದುಕೊಂಡಿರುವ ಸಾಲಗಳನ್ನೆಲ್ಲಾ ಒಂದು ಬಾರಿ ಸಾಲ ಮನ್ನಾ ಮಾಡಿ. ಸಾಲ ಮನ್ನಾ ಮಾಡುವುದಕ್ಕೆ ಏನು ತೊಂದರೆಯಾಗಿರುವುದು? ಆದುದರಿಂದ ಒಂದು ಬಾರಿ ಸಾಲ ಮನ್ನಾ ಮಾಡಿ. ಇವತ್ತು ನಮ್ಮ ರಾಜ್ಯ ಸರ್ಕಾರದ ಸಹಕಾರಿ ಸಂಘಗಳ ಸಾಲ ಏನಿದೆ ಅದನ್ನು entire ಸಂಪೂರ್ಣ ಮನ್ನಾ ಮಾಡಿ. ಕೇಂದ್ರ ಸರ್ಕಾರಕ್ಕೆ Nationalised Bank ಗೆ ಕೊಡಬೇಕಾಗಿರುವ ಸಾಲವನ್ನೆಲ್ಲಾ ಒಂದು ಬಾರಿ ಮನ್ನಾ ಮಾಡಬೇಕೆಂದು ಈ ಸದನದ ಮೂಲಕ ಒತ್ತಾಯವನ್ನು ಮಾಡಿ. ಒಂದು ಬಾರಿ ರೈತರ ಸಾಲವನ್ನು ಮನ್ನಾ ಮಾಡಿ. ಯಾರು ಯಾರೋ ತಿಂದು ತೇಗುತ್ತಾರೆ, ಹೀಗಿರುವಾಗ ಒಂದು ಬಾರಿ ರೈತರ ಐದು ಸಾವಿರವೋ, ಹತ್ತು ಸಾವಿರವೋ ಸಾಲವನ್ನು ಮನ್ನಾ ಮಾಡುವುದಕ್ಕೆ ಏನು ತೊಂದರೆ ಸ್ವಾಮಿ? ಅವರೇನು ಸಾಲವನ್ನು ಬೇರೆ ಯಾವುದೋ ಕಾರಣಕ್ಕೆ ಮಾಡಿಲ್ಲ. ಕಷ್ಟಪಟ್ಟು ಈ ರಾಜ್ಯಕ್ಕೆ, ರಾಷ್ಟ್ರಕ್ಕೆ ಅನ್ನ ಬೆಳೆಯುವಂಥ ರೈತ ಮಳೆ ಇಲ್ಲದೇ ಬೆಳೆಯನ್ನು ಲಾಸ್ ಮಾಡಿಕೊಂಡಿರುವಾಗ, ಇಂಥ ರೈತರು ತೆಗೆದುಕೊಂಡಿರುವ ಸಾಲವನ್ನು ಮನ್ನಾ ಮಾಡುವುದಕ್ಕೆ ಏನು ತೊಂದರೆ? ಆದುದರಿಂದ ಈ ಬಗ್ಗೆ ಕಂದಾಯ ಸಚಿವರು ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ಮಾಡಬೇಕಾಗುತ್ತದೆ ಮತ್ತು ರಾಜ್ಯ ಸರ್ಕಾರ ಕೂಡ ರಾಜ್ಯ ಸರ್ಕಾರದ ಮಟ್ಟದಲ್ಲಿ ರೈತರಿಗೆ ಈ ನಿಟ್ಟಿನಲ್ಲಿ ಏನು ಸಹಾಯವನ್ನು ಮಾಡಬಹುದೋ ಅದನ್ನು ನೀವು ಮಾಡಿ ಮತ್ತು ಕೇಂದ್ರ ಸರ್ಕಾರಕ್ಕೆ ರೈತರ ಸಾಲ ಒಂದು ಬಾರಿ ಮನ್ನಾ ಮಾಡವುದಕ್ಕೆ ಒತ್ತಾಯವನ್ನು ಮಾಡಿ. ಇನ್ನು ರಾಜ್ಯದಲ್ಲಿ 151 ವಿಧಾನಸಭಾ ಕ್ಷೇತ್ರಗಳ ಜೊತೆಗೆ ಇನ್ನೂ ಹಲವಾರು ತಾಲ್ಲೂಕುಗಳಲ್ಲಿ ಮತ್ತು ಬೆಂಗಳೂರು ನಗರದಲ್ಲಿಯೂ ಕೂಡ ಕೆಲವು ಕಡೆ ಕುಡಿಯುವ ನೀರಿಗೆ ತೊಂದರೆಯಾಗಿದೆಯೆಂದು ಹೇಳುತ್ತಾರೆ. ಕುಡಿಯುವ ನೀರನ್ನು ಪೂರೈಕೆ ಮಾಡುವ ಸಲುವಾಗಿ ಎರಡೆರಡು ಕೋಟಿ ರೂ.ಗಳನ್ನು ಪ್ರತಿ ಕ್ಷೇತ್ರಕ್ಕೆ ತಕ್ಷಣ ಬಿಡುಗಡೆ ಮಾಡಿ. ಶಾಸಕರಿಗೆ ಹೇಳಿ. ಬಿ.ಎ.ಸಿ. ಮೀಟಿಂಗ್‌ನಲ್ಲಿ ಇದರ ಬಗ್ಗೆ ಚರ್ಚೆ ಮಾಡುವ ಸಲುವಾಗಿಯೇ ಇನ್ನೂ ಒಂದು ಹದಿನೈದು ದಿವಸ ಅಧಿವೇಶನವನ್ನು ನಡೆಸಿ ಎಂದು ಸಿದ್ಧರಾಮಣ್ಣನವರು ಮತ್ತು ನಾವು ಕೇಳಿಕೊಂಡೆವು. ಅದಕ್ಕೆ ಈಶ್ವರಪ್ಪನವರು ಬರಗಾಲದ ಬಗ್ಗೆ ನಾವು ನೋಡಬೇಕು, ಎಲ್ಲಾ ಕಡೆ ಹೋಗಬೇಕು ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಕ್ಕೆ ನಾವು

ಕೂಡ 2ನೇ ತಾರೀಖಿನವರೆಗೂ ಮಾತ್ರ ಸದನ ನಡೆಸುತ್ತೇವೆಂದು ಹೇಳಿರುವದಕ್ಕೆ ನಾವು ಒಪ್ಪಿಕೊಂಡೆವು. ತಾವು ದಯಮಾಡಿ ತಾಲ್ಲೂಕು ಕೇಂದ್ರ, ಜಿಲ್ಲಾ ಕೇಂದ್ರದ ಜವಾಬ್ದಾರಿಯನ್ನು ಮಂತ್ರಿಗಳಿಗೆ ಕೊಡಿ. ಜಿಲ್ಲಾಧಿಕಾರಿಗಳಿಗೆ ಮತ್ತು ಜಿಲ್ಲಾ ಪಂಚಾಯಿತಿ ಸಿ.ಇ.ಒ. ಗಳಿಗೂ ಹೇಳಿ. ಲೀಡ್ ಬ್ಯಾಂಕ್‌ಗಳವರನ್ನೂ ಕರೆಯಿರಿ. ಈ ಲೀಡ್ ಬ್ಯಾಂಕ್‌ಗಳವರನ್ನು ಕರೆದು ಎಷ್ಟು ರೈತರುಗಳಿಗೆ ಸಾಲ ಕೊಟ್ಟಿದ್ದೀರಿ? ಏತಕ್ಕಾಗಿ ರೈತರುಗಳಿಗೆ ಹೊಸದಾಗಿ ಸಾಲವನ್ನು ಕೊಡುತ್ತಿಲ್ಲ? ರೈತರುಗಳಿಗೆ ಸಾಲ ಕೊಡದಿರುವುದಕ್ಕೆ ಕಾರಣವೇನು? ಆ ಬ್ಯಾಂಕ್‌ಗಳ ಗೈಡ್‌ಲೈನ್ಸ್ ಏನಿದೆ? ಅವರಿಗೆ ಎಷ್ಟು ನಷ್ಟವಾಗುತ್ತಿದೆ, ಹೀಗೆ ಇದರ ಬಗ್ಗೆ ಎರಡು ತಿಂಗಳಿಗೊಂದು ಬಾರಿಯಾದರೂ ಮೀಟಿಂಗ್ ಮಾಡುವುದಕ್ಕೆ ತಾವು ಹೇಳಿ. ಜಿಲ್ಲಾಧಿಕಾರಿಗಳಿಗೆ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಂದ ಸುತ್ತೋಲೆಯನ್ನು ಕಳುಹಿಸಿ. ಈಗೇನು ಮುಜರಾಯಿ ದೇವಸ್ಥಾನಗಳಿಗೆ ಸುತೋಲೆಯನ್ನು ಕಳುಹಿಸಿಕೊಟ್ಟಿದ್ದೀರೋ ಅದೇ ರೀತಿ ನಾಳೆಯೇ ಮುಖ್ಯ ಕಾರ್ಯದರ್ಶಿಗಳಿಂದ ಜಿಲ್ಲಾಧಿಕಾರಿಗಳಿಗೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸಿ. ಈಗೇನು ಅರ್ಚಕರಿಗೆ ಸುತ್ತೋಲೆಯನ್ನು ಹೊರಡಿಸಲಾಗಿದೆಯೋ ಅದೇ ರೀತಿ ಜಿಲ್ಲಾಧಿಕಾರಿಗಳಿಗೆ, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸುತ್ತೋಲೆಯನ್ನು ಹೊರಡಿಸಿ ಆ ಲೀಡ್ ಬ್ಯಾಂಕ್‌ಗಳವರಿರಬಹುದು, ಸಹಕಾರಿ ಬ್ಯಾಂಕ್‌ಗಳವರಿರಬಹುದು. ಇವರು ಎಷ್ಟು ಜನ ರೈತರಿಗೆ ಸಾಲವನ್ನು ಕೊಟ್ಟಿದ್ದಾರೆ, ಆ ಸಾಲದ ಮರು ಪಾವತಿ ಯಾವ ರೀತಿ ಇದೆ ಎಂಬುದನ್ನು ತಿಳಿದುಕೋಳ್ಳಿ. ಇವತ್ತು ಮೂರು ಲಕ್ಷದ ಮೇಲೆ ಸಾಲವಿದ್ದರೆ ಅದಕ್ಕೆ ಶೇಕಡ 13 ರಂತೆ ಬಡ್ಡಿ ಹಾಕುತ್ತಿದ್ದೀರಿ. ಅದನ್ನು ತೆಗೆದು 1 ಪರ್ಸೆಂಟ್ ಹಾಕಿ, ಅವರು ಎಷ್ಟಾದರೂ ಸಾಲವನ್ನು ತೆಗೆದುಕೊಳ್ಳಲಿ. ಎರಡು ಪರ್ಸೆಂಟ್‌ನಲ್ಲಿ ಸಾಲ ಕೊಡಿ. ಬಾಕಿಯ ಬಡ್ಡಿಯನ್ನು ಸರ್ಕಾರದಿಂದ ನೀವು ಕಟ್ಟಿಕೊಡಿ. ಈ ರೀತಿ ಮಾಡುವುದಕ್ಕೆ ನಿಮಗೇನು ತೊಂದರೆಯಾಗಿರುವುದು? ಆದುದರಿಂದ ನಾಳೆಯೇ ಮುಖ್ಯ ಕಾರ್ಯದರ್ಶಿಗಳಿಂದ ಸುತ್ತೋಲೆಯನ್ನು ಹೊರಡಿಸಿ ಪ್ರತಿ ಜಿಲ್ಲಾಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಎರಡು ತಿಂಗಳಿಗೊಮ್ಮೆ ಲೀಡ್ ಬ್ಯಾಂಕ್ ಗಳವರನ್ನು ಕರೆದು ಮೀಟಿಂಗ್ ಮಾಡಬೇಕೆಂದು ತಿಳಿಸಬೇಕು ಅಥವಾ ಕೇಂದ್ರ ಸರ್ಕಾರದ ಗಮನಕ್ಕಾದರೂ ಇದರ ಬಗ್ಗೆ ತರಬೇಕಾಗುತ್ತದೆ. ನೀವು ಇದರ ಬಗ್ಗೆ ರಿಸರ್ವ್ ಬ್ಯಾಂಕ್ ಗಮನಕ್ಕೆ ತನ್ನಿ. ಇದರ ಜೊತೆಗೆ ರೈತರ ಸಾಲವನ್ನು ಸಂಪೂರ್ಣವಾಗಿ ಒಂದು ಬಾರಿ ಮನ್ನಾ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಪೂರ್ವಕ ಮನವಿಯನ್ನು ಮಾಡುತ್ತೇನೆ. ಒಟ್ಟು ರೈತರ

ಸಾಲ ಎಷ್ಟಿದೆ? ಇದರ ಜೊತೆಗೆ ಮುಂಗಾರು ಬೆಳೆ ನಾಶವಾಗಿದೆ, ಹಿಂಗಾರು ಬೆಳೆ ಕೂಡ ಇವತ್ತು ಸಂಪೂರ್ಣವಾಗಿ ರೈತರಿಗೆ ಕೈಕೊಡುವಂಥ ಸನ್ನಿವೇಶವಿದೆ. ಹೀಗಿರುವಾಗ ಇವತ್ತು ಉದ್ಯೋಗ ಖಾತರಿ ಯೋಜನೆಯಲ್ಲಿ ಎಲ್ಲಿ ಸ್ವಾಮಿ ಕೆಲಸವಾಗಿದೆ? ಇಲ್ಲಾದರೂ ಉದ್ಯೋಗ ಖಾತರಿ ಯೋಜನೆಯಲ್ಲಿ ಕೆಲಸ ಪ್ರಾರಂಭ ವಾಗಿದೆಯೆ? ಯಾರಾದರೂ ಮುಖ್ಯ ಕಾರ್ಯದರ್ಶಿಗಳು Action Plan ಮಾಡಿದ್ದಾರೆಯೆ? ಇದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಿದೆಯೆ? ನಿಮ್ಮ ಡೆವಲಪ್‌ಮೆಂಟ್ ಕಮಿಶನರ್ ಏನು ಮಾಡುತ್ತಿದ್ದಾರೆ? ಯಾವ ಮೀಟಿಂಗ್ ಮಾಡುತ್ತಿದ್ದಾರೆ ಡೆವಲಪ್‌ಮೆಂಟ್ ಕಮಿಶನರ್? ಚೀಫ್ ಸೆಕ್ರೆಟರಿಗಳು ಡಿ.ಸಿ.ಗಳನ್ನು ಕರೆದು ಮೀಟಿಂಗ್ ಮಾಡುತ್ತೀರಲ್ಲ. ಈಗಾಗಲೇ ಕೇಂದ್ರ ಸರ್ಕಾರದಿಂದ ಹಣ ಬಂದು ಐದು ತಿಂಗಳಾಗಿದೆ. ಇವತ್ತು ನಿಮಗೆ ಉದ್ಯೋಗ ಖಾತರಿ ಯೋಜನೆಗೆ Action Plan ಮಾಡುವುದಕ್ಕೆ ತೊಂದರೆಯೇನಾದರೂ ಇದೆಯೆ? ಯಾವ ತೊಂದರೆ ಇದೆ ಹೇಳಿ. ಆಮೇಲೆ ಪಂಚಾಯತಿಗಳಲ್ಲಿ ಆ ಉದ್ಯೋಗ ಖಾತರಿ ಯೋಜನೆ ಕೆಲಸಗಳನ್ನು ಮಾಡಿಸುವುದಕ್ಕೆ ಬೇರೆ ಬೇರೆ ರಾಜ್ಯಗಳಿಗೆ ಕೇಂದ್ರ ಸರ್ಕಾರ ಕೊಟ್ಟಿರುವ ಹಣವನ್ನು ನೋಡಿದರೆ ನಮ್ಮ ರಾಜ್ಯಕ್ಕೆ ಬಹಳ ಕಡಿಮೆ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಒಂದೊಂದು ತಾಲ್ಲೂಕು ಕೇಂದ್ರದಲ್ಲಿ ಎರಡೆರಡು ಸಾವಿರ ಬೋರ್‌ವೆಲ್‌ಗಳನ್ನು ಕೊರೆಸಿದ್ದಾರೆ. ಎಸ್‌ಸಿ/ಎಸ್‌ಟಿ ಮತ್ತು ಹಿಂದುಳಿದ ವರ್ಗದ ಸಮಾಜದವರಿಗಾಗಿ ಒಂದೊಂದು ತಾಲ್ಲೂಕು ಕೇಂದ್ರದಲ್ಲಿ ಎರಡೆರಡು ಸಾವಿರ ಬೋರ್‌ವೆಲ್‌ಗಳನ್ನು ಉದ್ಯೋಗ ಖಾತರಿ ಯೋಜನೆಯಲ್ಲಿ ಕೊರೆಸಿಕೊಟ್ಟಿದ್ದಾರೆ. ನೀವು ಕೇಳಿ. ಆಂಧ್ರಪ್ರದೇಶದಲ್ಲಿ ಈ ರೀತಿ ಮಾಡಿಸಿರುವಾಗ ನಮ್ಮಲ್ಲಿಯೂ ಮಾಡಿ ಎಂದು ಕೇಂದ್ರ ಸರ್ಕಾರದವರನ್ನು ಕೇಳಿ. ಆಂಧ್ರದಲ್ಲಿ ಈ ರೀತಿ ಉದ್ಯೋಗ ಖಾತರಿ ಯೋಜನೆಯನ್ನು ಇಂಪ್ಲಿಮೆಂಟ್ ಮಾಡಿರುವ ಬಗ್ಗೆ ದಾಖಲೆಯಿರುವ ಪ್ರತಿಯನ್ನು ಬೇಕಾದರೆ ನಿಮಗೆ ನಾನು ಕಳುಹಿಸಿಕೊಡುತ್ತೇನೆ. ಆಂಧ್ರಪ್ರದೇಶದಲ್ಲಿ ಒಂದೊಂದು ತಾಲ್ಲೂಕು ಕೇಂದ್ರಕ್ಕೂ ಎರಡು ಸಾವಿರ ಬೋರ್‌ವೆಲ್ ಕೊರೆಸಿದ್ದಾರೆ. ಅದೇ ರೀತಿ ನೀವು ಕೂಡ ಎಸ್‌ಸಿ/ಎಸ್‌ಟಿ ಸಮಾಜದವರಿಗಾಗಿ, ಹಿಂದೂಳಿದ ವರ್ಗದ ಸಮಾಜದವರಿಗಾಗಿ ಪ್ರತಿ ತಾಲ್ಲೂಕಿಗೆ ಎರಡು ಸಾವಿರ ಬೋರ್‌ವೆಲ್ ಕೊರೆಸುವುದಕ್ಕೆ ನಿಮಗೇನು ತೊಂದರೆಯಾಗಿರುವುದು? ಇದರ ಜೊತೆಗೆ ಈಗಾಗಲೇ ಎಸ್‌ಸಿ/ಎಸ್‌ಟಿ ಸಮಾಜದವರಿಗಾಗಿ 2011–2012ರಲ್ಲಿ ಬೋರ್‌ವೆಲ್ ಕೊರೆಯುವುದಕ್ಕೆ ಸ್ಯಾಂಕ್ಷನ್ ಆಗಿದ್ದರೂ ಕೂಡ ಯಾರೋ ಕಂಟ್ರ್ಯಾಕ್ಟರ್ ಇನ್ನೂ ಬೋರ್‌ವೆಲ್‌ಗಳನ್ನು ಕೊರೆದಿಲ್ಲ. ಆ ಕಂಟ್ರ್ಯಾಕ್ಟರ್ ಯಾರು ಸ್ವಾಮಿ? ಎಸ್‌ಸಿ/ಎಸ್‌ಟಿ

ಸಮಾಜದವರಿಗಾಗಿ ಎರಡು ವರ್ಷವಾದರೂ ಇನ್ನೂ ಬೋರ್‌ವೆಲ್ ಕೊರೆದಿಲ್ಲವೆಂದರೆ ಏನರ್ಥ ಸ್ವಾಮಿ? ಹೀಗಾದರೆ ಅವರು ಬೆಳೆ ಏನು ಬೆಳೆಯುತ್ತಾರೆ? ಅವನು ಬೇರೆ ಕಡೆ ಸಾಲಸೋಲ ಮಾಡಿ ಕಬ್ಬನ್ನೋ, ತೊಗರಿಯನ್ನೋ ಅಥವಾ ಬೇರೆ ಬೆಳೆಯನ್ನು ಹಾಕಿರಬಹುದು. ಇನ್ನು ಎಸ್‌ಸಿ/ಎಸ್‌ಟಿ ಸಮಾಜದವರಿಗಾಗಿ ಈಗಾಗಲೇ ಬೋರ್‌ವೆಲ್‌ಗಳನ್ನು ಕೊರೆದಿದ್ದರೂ ಕೂಡ ಕಳೆದ ನಾಲ್ಕು ವರ್ಷದಿಂದಲೂ ಆ ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಟ್ಟಿಲ್ಲ. ನಾಲ್ಕು ವರ್ಷವಾದರೂ ವಿದ್ಯುತ್ ಸಂಪರ್ಕವನ್ನು ಕೊಟ್ಟಿಲವೆಂದರೆ ಏನರ್ಥ ಹೇಳಿ? ವಿದ್ಯುತ್ ಸಂಪರ್ಕವನ್ನು ಕೊಡುವುದಕ್ಕಾಗುವುದಿಲ್ಲವೆಂದರೆ ನೀವು ಹೇಳಿಬಿಡಿ, ನಾಲ್ಕು ಅಥವಾ ಇನ್ನೂ ಐದು ವರ್ಷ ಎಸ್‌ಸಿ/ಎಸ್‌ಟಿ ಸಮಾಜದವರ, ಹಿಂದುಳಿದ ವರ್ಗದ ಸಮಾಜದವರ ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ಸರ್ಕಾರಿ ಆದೇಶವನ್ನು ಹೊರಡಿಸಿಬಿಡಿ. ಹೇಗೆ ನೀವು ದೇವಸ್ಥಾನದ ಪೂಜಾರ್‌ಗಳಿಗೆ ಆದೇಶವನ್ನು ಹೊರಡಿಸಿದ್ದೀರಲ್ಲಾ ಆ ತರಹ ಜಿ.ಓ. ಇಶ್ಯೂ ಮಾಡಿಸಿಬಿಡಿ. ಇನ್ನು ಸಮುದಾಯ ಭವನವನ್ನು ಅಥವಾ ಬೇರೆ ಇನ್ನೇನಾದರೂ ಕಟ್ಟುವುದಕ್ಕಾಗಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ಎಸ್‌ಸಿ/ಎಸ್‌ಟಿ ಕಾರ್ಪೊರೇಶನ್‌ಗೆ, ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಗಳಿಗೆ ಕೊಟ್ಟಿದ್ದೀರಿ. ಎಷ್ಟು ದಿನ ಬೇಕು ಸ್ವಾಮಿ ಹಣವನ್ನು ರಿಲೀಸ್ ಮಾಡುವುದಕ್ಕೆ? ಬೇರೆ ಜನಾಂಗದವರದ್ದು ಹಾಳು ಬಿದ್ದುಹೋಗಲಿ, ಕ್ಷೌರಿಕ ಕೆಲಸವನ್ನು ಮಾಡುವ ಸವಿತಾ ಸಮಾಜದವರ ಬಗ್ಗೆ ಸರ್ಕಾರಿ ಆರ್ಡರ್ ಆಗಿದೆ. ಸರ್ಕಾರಿ ಆರ್ಡರ್ ಆದಮೇಲೆ ಆ ಇಲಾಖೆಯವರು ಮಾಜಿ ಪ್ರಧಾನಿಗಳನ್ನು ಕರೆಸಿ ಫೌಂಡೇಶನ್‌ನ್ನು ಹಾಕಿಸಿಬಿಟ್ಟರು. ಆ ಚೆಕ್ ಬರೆಯುವುದಕ್ಕೆ ಕಡತ ಎಂ.ಡಿ. ಯವರ ಹತ್ತಿರ ಹೋಗಿ ಎರಡು ತಿಂಗಳಾಗಿದೆ. ಚೆಕ್ ಬರೆಯುವುದಕ್ಕೂ ಕೂಡ ಏನಾದರೂ ದುಡ್ಡುಗಿಡ್ಡು ಕೊಡಬೇಕೇ ಎಂದು ಕೇಳಿ ಸ್ವಾಮಿ. ನಾನು ಸವಿತಾ ಸಮಾಜದವರಿಗೆ ಬೇಕಾದರೆ ಹೇಳುತ್ತೇನೆ, ಸವಿತಾ ಸಮಾಜದವರಿಗೆ ನಾನೇ ಒಂದಷ್ಟು ದುಡ್ಡು ಕೊಟ್ಟು ಆ ಎಂ.ಡಿ.ಗೆ. ಏನಾದರೂ ದುಡ್ಡು ಕೊಡಬೇಕೆಂದಿದ್ದರೆ ಅವರಿಂದ ಕೊಡಿಸುತ್ತೇನೆ ಸ್ವಾಮಿ. ಈ ರೀತಿ ಏಕೆ ಮಾಡುತ್ತೀರಿ? ನಿಮಗೆ ಮಾಡುವುದಕ್ಕಾಗದಿದ್ದರೆ ಯೋಜನೆಯನ್ನು ರದ್ದು ಮಾಡಿ. ದೊಡ್ಡವರಿಗೆ ಕೊಡಬೇಕಾಗಿರುವುದು ಹಾಳು ಬಿದ್ದುಹೋಗಲಿ, ಆ ಸವಿತಾ ಸಮಾಜದವರು ಇಡೀ ರಾಜ್ಯದಲ್ಲಿ ಎಷ್ಟು ಪರ್ಸೆಂಟ್ ಇದ್ದಾರೆ ಸ್ವಾಮಿ? ಅವರಿಗೆ ಕೊಡಬೇಕಾದಂಥ ಹಣದ ಬಗ್ಗೆ ಸರ್ಕಾರದ ಕಾರ್ಯದರ್ಶಿ ಆರ್ಡರ್ ಇಶ್ಯು ಮಾಡುತ್ತಾರೆ. ಒಬ್ಬ ಮಾಜಿ ಪ್ರಧಾನ ಮಂತ್ರಿಗಳ ಕೈಯಿಂದ

ಫೌಂಡೇಶನ್‌ನ್ನೂ ಕೂಡ ಹಾಕಿಸುತ್ತಾರೆ. ಆರ್ಡರ್ ಆದಮೇಲೆ ಹಣ ರಿಲೀಸ್ ಮಾಡುವ ಚೆಕ್‌ಗೆ ಸಂಬಂಧಪಟ್ಟಂಥ ಕಡತವನ್ನು ಎರಡ್ಮೂರ ತಿಂಗಳು ಎಂ.ಡಿ.ಯವರು ಇಟ್ಟುಕೊಳ್ಳುತ್ತಾರೆಂದರೆ ಏನರ್ಥ ಸಾರ್?

(ಈ ಹಂತದಲ್ಲಿ ಉಪಾಧ್ಯಕ್ಷರಾದ ಶ್ರೀ.ಎನ್. ಯೋಗೀಶ್‌ಭಟ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ದಯಮಾಡಿ ಇದರ ಬಗ್ಗೆ ನೀವು ಹೇಳಿ. ಸಮಾಜ ಕಲ್ಯಾಣ ಇಲಾಖೆ ಮಂತ್ರಿಗಳು ಹೇಳಲಿ ಅಥವಾ ತಾವೇ ಹೇಳಿ. ನಾನು ಹೇಳಿದ್ದು ನಿಜವಲ್ಲವೆಂದು ನೀವು ಹೇಳಿಬಿಟ್ಟರೆ ನೀವು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಇನ್ನು ಕುರುವಿಶೆಟ್ಟಿ ಸಮಾಜದವರಿಗೆಂದು ಸಮುದಾಯ ಭವನವನ್ನು ಕಟ್ಟುವುದಕ್ಕೆ ಹೇಳಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ಕಳೆದ ಎರಡು ವರ್ಷದಿಂದ ರೆಕಾರ್ಡ್ ಮೇಲಕ್ಕೆ ಹೋಗುವುದು ಕೆಳಕ್ಕೆ ಬರುವುದು, ಮೇಲಕ್ಕೆ ಹೋಗುವುದು ಕೇಳಕ್ಕೆ ಬರುವುದು, ಇದೇ ಆಗಿದೆಯಷ್ಟೆ. ಈ ಕುರುವಿಶೆಟ್ಟಿ ಸಮಾಜದವರ ಬಗ್ಗೆ ಮಾಡನಾಡುವುದಕ್ಕೆ ಆ ಸಮಾಜದ ಶಾಸಕರ್‍ಯಾರಾದರೂ ಇಲ್ಲಿ ಇದ್ದಾರೆಯೆ? ಕುರುವಿಶೆಟ್ಟಿ, ಸಮಾಜದವರಿರಬಹುದು ಅಥವಾ ಸವಿತಾ ಸಮಾಜದವರಿರಬಹುದು, ಅವರ ಪ್ರತಿನಿಧಿಗಳಾಗಿ ಯಾರಾದರೂ ಇಲ್ಲಿ ಇದ್ದಾರೆಯೆ ಸ್ವಾಮಿ? ಯಾರಾದರೂ ಇಲ್ಲಿ Assemblyಯೊಳಗೆ ಬಂದು ಮಾತನಾಡುವಂತಹ ಪರಿಸ್ಥಿತಿಯಲ್ಲಿ ಇದ್ದಾರ? ನಿಮ್ಮ ಇಲಾಖೆಯಲ್ಲಿ ಯಾವ ರೀತಿ ಕಾರ್ಯಕ್ರಮ ನಡೆಯುತ್ತಿದೆ ಎಂದು ಹೇಳಬೇಕು. ಮಾನ್ಯ ಸಭಾಧ್ಯಕ್ಷರೆ, ಹೋದ ಸಾರಿ ನೀವೇ ಇದ್ದಿರಿ. ಇಲ್ಲಿ ಈಗ ಮಾನ್ಯ ಯಡಿಯೂರಪ್ಪ ಸಾಹೇಬರು ಇಲ್ಲ. 2011-12ನೇ ಸಾಲಿನ ಬಜೆಟ್‌ನಲ್ಲಿರುವ ಪ್ರಕಾರ ಕಾರ್ಯಕ್ರಮ ರೂಪಿಸಬೇಕಾಗಿದೆ. ಮಳೆ ಬೆಳೆ ಬರುತ್ತಿದೆ. ಮೂರು ತಿಂಗಳೊಳಗೆ ಬಜೆಟ್‌ನಲ್ಲಿ ಏನೇನು ಇಟ್ಟಿದ್ದೇವೆ, ಆ ಎಲ್ಲಾ ಕಾರ್ಯಕ್ರಮಗಳು ಆಗಬೇಕೆಂದು ಹೇಳಿದಿರಿ. ನೀವು ಬಜೆಟ್ ಮಾಡಿ ಆರು ತಿಂಗಳಾಯಿತು, ಯಾವ್ಯಾವ ಇಲಾಖೆಯವರು ಏನೇನು ಕಾರ್ಯಕ್ರಮ ರೂಪಿಸಿದ್ದಾರೆಂದು ಹೇಳಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಮಾನ್ಯ ಅಧ್ಯಕ್ಷರೆ, ನಾವು ಈಗ ಬೇಡಿಕೆಗಳ ಮೇಲೆ ಮಾಡನಾಡಬೇಕಾಗಿದೆ. ಆದರೆ ನಮಗೆ ಒಂದು ನಿರ್ವಹಣಾ ಮುಂಗಡ ಪತ್ರವನ್ನು ಕೊಟ್ಟಿಲ್ಲ, ಒಂದು ವಾರ್ಷಿಕ ವರದಿ ಇಲ್ಲ. ನಾವು ಹೇಗೆ ಮಾತನಾಡಬೇಕು? ನೀವು ಇಲಾಖೆಯವರಿಗೆ ಹೇಳಿ. 2012-2013ನೇ ಸಾಲಿನ Performance Budget ಒಂದ್ದೂ ಕೊಟ್ಟಿಲ್ಲ. ವಾರ್ಷಿಕ ವರದಿ ಕೂಡ ಒಂದೂ ಕೊಟ್ಟಿಲ್ಲ. ನಾವು ಚರ್ಚೆ ಮಾಡಬೇಕೇ ಅಥವಾ ಇಲ್ಲವೇ ಎಂದು ಹೇಳಿ. ಬಜೆಟ್‌ನ ಅಂಕಿ-ಅಂಶಗಳು ಮತ್ತು ಸರ್ಕಾರ ಮಾಡಿರುವ

ಸಾಧನೆ ಬಗ್ಗೆ ಏನೂ ಹೇಳಬಾರದು ಎಂದು ಇದ್ದರೆ ಅಷ್ಟೆ ಮಾಡಲಿ. ಮಾನ್ಯ ಅಧ್ಯಕ್ಷರೆ, ನಾನು ಹೋಗಿ ನೋಡಿದೆ, 2011–12ನೇ ಸಾಲಿನ Performance Budget ಕೊಟ್ಟು, ಅದರ ಮೇಲೆ ಮಾತನಾಡಿ ಎಂದರೆ, ಈಗ ನಾವು 2012–13ನೇ ಸಾಲಿನಲ್ಲಿದ್ದೇವೆನ್ನುವುದನ್ನು ಸರ್ಕಾರ ಮರೆತು ಹೋಗಿದೆ ಎಂದು ಅನಿಸುತ್ತದೆ. ಮಾನ್ಯ ಅಧ್ಯಕ್ಷರೆ ನೀವು ಸಂಬಂಧಪಟ್ಟವರಿಗೆ Direction ಕೊಡಿ. ನಾವು ಸೋಮವಾರ ಮಾತನಾಡ ಬೇಕೆಂದರೆ ನಮಗೆ Information ಆದರೂ ಕೊಡಬೇಕು. Let them give the Performance Budget ಮತ್ತು ವಾರ್ಷಿಕ ವರದಿ ಇಲಾಖೆ ಏನೇನು ಕೆಲಸ ಮಾಡಿದೆ, ಮಾಡುತ್ತಿದೆ ಎಂದು ನಾವು ನೋಡಿ ಮಾತನಾಡಬೇಕಲ್ಲವೆ?

ಶ್ರೀ.ಕೆ.ಎಂ.ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ನಿಯಮಾವಳಿ ಪ್ರಕಾರ 21 ದಿವಸದೊಳಗೆ ಪ್ರತಿಯೊಂದು ಇಲಾಖೆಯವರು ಎಲ್ಲಾ ಮಾಹಿತಿಯನ್ನು ಕೊಡಬೇಕು, ಮಾನ್ಯ ಸದಸ್ಯರುಗಳು ನಂತರ ಚರ್ಚೆ ಮಾಡಬೇಕು. ಇದು ನಿಯಮ.

ಅಧ್ಯಕ್ಷರು:– ಎಲ್ಲಾ ಮಾಹಿತಿಯನ್ನು ಕೊಡಿ, ಕೇಳುತ್ತಿದ್ದಾರೆ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:– ಆ ಮಾಹಿತಿ ಏನು ಇಲ್ಲವೆಂದರೆ ನಾವು ಏನೂ ಮಾತನಾಡುವುದಕ್ಕೆ ಆಗುವುದಿಲ್ಲ, ನಾವು ಏನು ಮಾತನಾಡಬೇಕು? ಹೇಳಿ.

ಶ್ರೀ.ಕೆ.ಎಸ್.ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಪ್ರಸ್ತಾಪಮಾಡುತ್ತಿದ್ದಾರೆ, ಅದನ್ನು ಆದಷ್ಟು ಬೇಗ ಒದಗಿಸುತ್ತೇನೆ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:–ಮಾನ್ಯ ಅಧ್ಯಕ್ಷರೆ,ಆದಷ್ಟು ಬೇಗ ಅಂದರೆ ಸೋಮವಾರವೇ ಸಿಕ್ಕುವುದು. ಸೋಮವಾರ ಸಿಕ್ಕರೆ ನಮಗೆ ಮಾತನಾಡವುದಕ್ಕೆ ಆಗುವುದಿಲ್ಲ. We have to get it by Monday. ನಮ್ಮ ರೂಮುಗಳಿಗೆ ಕಳುಹಿಸಿ. ಸೋಮವಾರದ ಒಳಗಡೆ ನಮ್ಮ ರೂಮಿನಲ್ಲಿ ಇರಬೇಕು. ಏಕೆಂದರೆ ಅದನ್ನು ಓದಿಕೊಳ್ಳುವುದಕ್ಕೆ ನಮಗೆ ನಾಲ್ಕು ಗಂಟೆಯಾದರೂ ಬೇಕಲ್ಲ.

ಶ್ರೀ.ಕೆ.ಎಂ.ಶಿವಲಿಂಗೇಗೌಡ:– ಈ ಸದನವನ್ನು ಮುಂದೂಡಿ 21 ದಿವಸ ನಡೆಸಬೇಕಾಗುತ್ತದೆ. ನೀವು ಯಾವತ್ತು ನಮಗೆ ಮಾಹಿತಿ ಕೊಡುತ್ತೀರೋ, ಅಲ್ಲಿಂದ 21 ದಿವಸ ಸದನ ನಡೆಯಬೇಕಾಗುತ್ತದೆ.

ಅಧ್ಯಕ್ಷರು:– ಆಯಿತು, ಕೊಡಿಸುತ್ತೇನೆ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:-ಮಾನ್ಯ ಅಧ್ಯಕ್ಷರೆ, ನಾಳೆ ಸಾಯಂಕಾಲದೊಳಗೆ ನಮ್ಮ ರೂಮಿಗೆ ಕಳುಹಿಸುವುದಕ್ಕೆ ಹೇಳಿ.

ಅಧ್ಯಕ್ಷರು:- ಆಯಿತು,ಮಾನ್ಯ ರೇವಣ್ಣನವರೆ, ನೀವು ಮಾತನಾಡಿ ಮುಗಿಸಿಬಿಡಿ.

ಶ್ರೀ.ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಮಗೆ ಅನುಕೂಲವಾಗಲಿ ಎಂದು ಹೇಳುತ್ತಿದ್ದೇನೆ, ಒಂದು ಕಡೆ ನೀವು ಪ್ರಸ್ತಾಪ ಮಾಡದೆ ಬೇರೆ ರಾಜ್ಯ ಮಡಿದ್ದಾರೆಂದು ಪೇಪರ್‌ನಲ್ಲಿ ಬರೆದಿದ್ದಾರೆ. ಪ್ರಸ್ತಾಪ ಮಾಡದೇ ಈ ಪರಿಸ್ಥಿತಿ ಇರುವಾಗ ನಾವು ನಿಮಗೆ ಅನುಕೂಲವಾಗಲಿ ಎಂದು ಕೆಲವು ವಿಚಾರವನ್ನು ಹೇಳುತ್ತೇವೆ. ರೇವಣ್ಣ ಹೇಳುವುದು ಬೇಡವೆಂದರೆ ಹೇಳುವುದಿಲ್ಲ. ಈಗ ನೀವು ಬೇಡಿಕೆಗಳ ಮೇಲೆ ಚರ್ಚೆ ಎಂದು ಹಾಕಿಕೊಂಡಿದ್ದೀರಿ. ಈಗ ಬರಗಾಲ ಬಗ್ಗೆ ಚರ್ಚೆ ಇದೆ. ಕೃಷಿ ಮತ್ತು ತೋಟಗಾರಿಕೆ ಬೇಡಿಕೆ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಮಾನ್ಯ ಕೃಷಿ ಮಂತ್ರಿಗಳು ಇಲ್ಲಿ ಇಲ್ಲ, ಎಲ್ಲೋ ಹೋದರು. ಕೃಷಿ ಮತ್ತು ತೋಟಗಾರಿಕೆಗೆ ಈ ವರ್ಷದ ಬಜೆಟ್‌ನಲ್ಲಿ ಹಣ ಎಷ್ಟಿದೆ ಮತ್ತು ಯಾವ್ಯಾವ ಕಾರ್ಯಕ್ರಮವನ್ನು ರೂಪಿಸಿದ್ದೀರಿ ಎಂದು ದಯಮಾಡಿ ತೋರಿಸಿ. ಬಜೆಟ್ ಮಂಡನೆ ಮಾಡಿ ಆರು ತಿಂಗಳಾಯಿತಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಹಾಗೂ ಕಂದಾಯ ಇಲಾಖೆ, ಈ ವರ್ಷ ಈ ಮೂರು ಇಲಾಖೆಗಳಲ್ಲಿ ಏನೇನು ಕಾರ್ಯಕ್ರಮ ರೂಪಿಸಿದ್ದೀರಿ ಎಂದು ಹೇಳಿ. ನೀವು ಬೇಡಿಕೆಯನ್ನು ಇಟ್ಟಿದ್ದೀರಿ ತಾನೇ? ಯಾವ್ಯಾವುದಕ್ಕೆ ಎಷ್ಟೆಷ್ಟು ಹಣ ಇಟ್ಟಿದ್ದೀರಿ, ಏನೇನು ಕಾರ್ಯಕ್ರಮ ರೂಪಿಸಿದ್ದೀರಿ ಎನ್ನುವ ಇಲಾಖಾವಾರು ಮಾಹಿತಿ ಬೇಡವೇ? ನಾವು ಮಾಹಿತಿಯನ್ನು ಓದಿಕೊಂಡು ಬರುವುದಾದರೂ ಬೇಡವೇ? ಏನೂ ಬೇಡ, ನೀವು ಸುಮ್ಮನೆ ಕೈ ಎತ್ತಿ ಟಿಎ/ಡಿಎ ತೆಗೆದುಕೊಂಡು ಹೋಗಿ ಎಂದು ಮಾನ್ಯ ಸಭಾಧ್ಯಕ್ಷರು Direction ಕೊಡಿ, ಅದೇ ರೀತಿ ಮಾಡುತ್ತೇವೆ. ಈ ಸದನದ ಕಲಾಪ 10 ದಿವಸ ಇರುತ್ತದೆ. ಮಾನ್ಯ ಈಶ್ವರಪ್ಪನವರು ಮನಸ್ಸು ಮಾಡಿ ಮೂರು ದಿವಸ ಸದನದ ಕಲಾಪವನ್ನು extend ಮಾಡಿಸಿದರು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಈಶ್ವರಪ್ಪನವರು extend ಮಾಡಿ ಎಂದು ಹೇಳಿದರು. ಅದಕ್ಕೆ ಸಂತೋಷ ಪಡುತ್ತೇನೆ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಇಲಾಖೆ ಬೇಡಿಕೆಗಳ ಬಗ್ಗೆ ಮಂಡನೆ ಮಾಡುವಾಗ ಏನು ಕಾರ್ಯಕ್ರಮ ರೂಪಿಸಿದ್ದೀರಿ? ನಿಮ್ಮ ಹಣಕಾಸು ಇಲಾಖೆಯವರು ಏನು ಮಾಡುತ್ತಾರೆಂದರೆ ಎಲ್ಲದ್ದಕ್ಕೂ 500 ಕೋಟಿ, 300 ಕೋಟಿ ರೂಪಾಯಿ ಎಂದು ಇಡುತ್ತಾರೆ, ಆದರೆ ಹಣವನ್ನು release ಮಾಡಿ ಎಂದಾಗ ಹಣವನ್ನು release ಮಾಡುವುದಿಲ್ಲ.

ನೀವು ಆರು ತಿಂಗಳಾದರೂ ಕಾರ್ಯಕ್ರಮ ರೂಪಿಸಿಲ್ಲವೆಂದರೆ, ಸುಮ್ಮನೆ ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಳ್ಳುವುದು, ಕೊನೆಗೆ ಬೇಕಾಗಿರುವ ಇಲಾಖೆಗಳಿಗೆ ಮರು ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ Suplementary Bill ಮಾಡುತ್ತೀರಿ. ಎಲ್ಲಾ ಇಲಾಖೆಗೆ ನೀವು ಸ್ಪಷ್ಟವಾಗಿ Direction ಕೊಡಬೇಕು. ಇಲಾಖೆಯವರು ವರದಿಗಳನ್ನು ಕೊಡದಿದ್ದರೆ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಮಾನ್ಯ ಸಭಾಧ್ಯಕ್ಷರೆ ಮನವಿ ಮಾಡುವುದು ಇಷ್ಟೇ, ಯಾವುದೇ ಬೇಡಿಕೆ ಬಗ್ಗೆ ಇವತ್ತೇ ಶುರು ಮಾಡಿ, ನಾಳೆ ನಾಡಿದ್ದು ಕೂಡ ಚರ್ಚೆಯಾಗಲಿ, ನಾವೇನೂ ಬೇಡ ಎನ್ನುವುದಿಲ್ಲ. ನಾವು ಅದಕ್ಕೆ ಪೂರ್ಣ ಸಹಕಾರ ಕೊಡುತ್ತೇವೆ. ಆದರೆ ಈ ವರ್ಷಕ್ಕೆ ಏನು ಕಾರ್ಯಕ್ರಮ ರೂಪಿಸಿದ್ದೀರಿ ಎಂದು ಇಲಾಖಾವಾರು ತಿಳಿಸಬೇಕು. ಆರು ತಿಂಗಳಿಗೆ ಎಷ್ಟು ಹಣವನ್ನು release ಮಾಡಿದ್ದೀರಿ? ಈ ಸದನದಲ್ಲಿರುವ ಗೌರವಾನ್ವಿತ ಸದಸ್ಯರುಗಳ ಶಾಸಕರ ನಿಧಿ ಆರು ತಿಂಗಲಾಗಿದೆಯಲ್ಲ, ಹಣ release ಆಗಿದೆಯೇ? ಬಜೆಟ್ ಆಗಿ ನಾಲ್ಕು ತಿಂಗಳಾಯಿತು. ಆ ಹಣ ಯಾವಾಗ ಖರ್ಚು ಮಾಡುವುದು? ಜನ ನಮ್ಮ ಹತ್ತಿರ ಬಂದು ಒಂದು ಕೋಟಿ ರೂಪಾಯಿ ಬಂದಿದೆ, ದುಡ್ಡು ಕೊಡಿಸಿ ಎಂದು ಕೇಳುತ್ತಾರೆ. ಅವರು ಸಾಲಸೋಲ ಮಾಡಿ ಕೆಲಸ ಮಾಡಿಸಿರುತ್ತಾರೆ. ನಿಮ್ಮಲ್ಲಿ ಹಣ ಇಲ್ಲವೆಂದರೆ ಕಾರಣ ಏನಿದೆ? ತೊಂದರೆ ಏನಾದರೂ ಇದೆಯೇ? ನಿಮಗೆ ಹಣಕಾಸಿನ ತೊಂದರೆ ಇದ್ದರೆ ಹೇಳಿ, ಈ ವರ್ಷ ಯಾವುದು ದುಡ್ಡು ಇಲ್ಲ, ಕರ್ನಾಟಕ ರಾಜ್ಯದಲ್ಲಿ ನಾಲ್ಕು ವರ್ಷ ನಮ್ಮ ಸರ್ಕಾರ ಬಂದ ಮೇಲೆ ಟ್ರೆಜರಿ ಖಾಲಿಯಾಗಿದೆ, ಅದರಿಂದ ಈ ವರ್ಷ ಯಾವ ಕಾರ್ಯಕ್ರಮ ಮಾಡುವುದಿಲ್ಲ ಎಂದು ದೇವಸ್ಥಾನದ ಬಗ್ಗೆ ಹೇಗೆ ಒಂದು Circular issue ಮಾಡಿದರೋ ಹಾಗೆ ಇದಕ್ಕೂ ಒಂದು Circular ಒಂದು ಪೇಜ್‌ನಲ್ಲಿ ಮಾಡಿ. ಆಗ ದುಡ್ಡು ಜಾಸ್ತಿ ಖರ್ಚಾಗುವುದಿಲ್ಲ. ಈ ವರ್ಷ ನಾವು ಯಾವುದೇ ಕಾರ್ಯಕ್ರಮವನ್ನು ಮಾಡುವುದಕ್ಕೆ ಆಗಲ್ಲ, ಯಾವುದೇ ಎಂಎಲ್‌ಎ ಗ್ರಾಂಟ್ ಆಗಲಿ, ಕುಡಿಯುವ ನೀರಿಗಾಗಲಿ, ರೇಷನ್‌ಗಾಗಲಿ ಇಲ್ಲ. ಮಾನ್ಯ ಜೀವ್‌ರಾಜ್‌ರವರಿಗೆ ರೇಷನ್ ಕಾರ್ಡು ಕೊಡಿಸುವುದಕ್ಕೆ ಹೇಳಿ. ತಹಸೀಲ್ದಾರ್‌ಗೆ ಹೇಳಿ ಕಡೆಗಳಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಬಡವರಿಗೆ ಒಂದು ವಾರದಲ್ಲಿ ಸಿಗುವ ಹಾಗೆ ಮಾಡುತ್ತೇವೆಂದು ಹೇಳಿದ್ದಾರೆ, ನೋಡೋಣ. ಮೊದಲು ಮಾನ್ಯ ಶೋಭಾ ಕರಂದ್ಲಾಜೆಯವರ ಖಾತೆಯಾಗಿತ್ತು, ಅವರಿಗೂ ಏಕೋ ಮಾಡುವುದಕ್ಕೆ ಆಗಲಿಲ್ಲ, ಅವರು ಕಂಪ್ಯೂಟರ್ ಹಿಡಿದು ಅವರ ಕಣ್ಣು ಬತ್ತಿ ಹೋಗಿದೆ. ನಮಗೆ ಹಸಿರು ಕಾರ್ಡು

ಬೇಡ ಇದೇ ಕೊಡಿಸಿ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡುವುದು ಇಷ್ಟೆ, ಈ ರಾಜ್ಯದಲ್ಲಿರುವ ರೈತರ ಸಾಲ ಸಂಪೂರ್ಣವಾಗಿ ಮನ್ನಾ ಮಾಡಬೇಕು. ಹೊಸ ಸಾಲ ಕೊಡುವಾಗ ಲಕ್ಷ ರೂಪಾಯಿಗೆ 0% ಇಂಟರೆಸ್ಟ್ ಮಾಡಿದ್ದೀರಿ, ಮೂರು ಲಕ್ಷ ರೂಪಾಯಿಯವರೆಗೆ 1%, ಮೂರು ಲಕ್ಷ ರೂಪಾಯಿ ಮೇಲಿನ ಸಾಲಕ್ಕೆ 13.50% Interest ಮಾಡಿದ್ದೀರಿ. ಅದನ್ನು ತೆಗೆದು ಹಾಕಿ. ರೈತರು 10 ಲಕ್ಷ ರೂಪಾಯಿ ಸಾಲ ತೆಗೆದುಕೊಳ್ಳಲಿ, 15 ರಿಂದ 20 ಲಕ್ಷ ರೈತರು ಒಂದು ಎಕರೆಯಲ್ಲಿ ಬೆಳೆ ಬೆಳೆಯಬೇಕಾದರೆ 5 ಲಕ್ಷ ರೂಪಾಯಿ ಸಾಲ ಬೇಕಾಗುತ್ತದೆ, 4 ಎಕರೆಯಲ್ಲಿ ಒಂದು ಬೆಳೆ ಬರಬೇಕಾದರೆ 10 ಲಕ್ಷ ರೂಪಾಯಿ ಬೇಕಾಗುತ್ತದೆ. ಆ ಸಾಲಕ್ಕೆ 0% ಬಡ್ಡಿ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ರೈತರು 10–20 ಲಕ್ಷ ರೂಪಾಯಿ ಸಾಲ ತೆಗೆದುಕೊಂಡರೆ 0% ಇಂಟರೆಸ್ಟ್ ಮಾಡಬೇಕೆಂದು ನಾನು ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡನ್ನು ಒತ್ತಾಯ ಮಾಡುತ್ತೇನೆ. ಇಲ್ಲ, ಮಾಡುವುದಕ್ಕೆ ಆಗುವುದಿಲ್ಲವೆಂದರೆ ನಮ್ಮಲ್ಲಿ ಹಣವಿಲ್ಲ ದಿವಾಳಿ ಆಗಿದೆಯೆಂದು ಹೇಳಿಬಿಡಿ. ಇವತ್ತು ಕುಡಿಯುವ ನೀರಿಗೆ ಒಂದು ವಿಧಾನಸಭಾ ಕ್ಷೇತ್ರಕ್ಕೆ ಎರಡು ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು. ಕೆಲವು ತುರ್ತು ಕಾಮಗಾರಿ ಕೆಲಸ ತೆಗೆದುಕೊಳ್ಳುವುದಕ್ಕೆ ಶಾಸಕರುಗಳಿಗೆ ಕನಿಷ್ಟ ಎರಡು ಕೋಟಿ ರೂಪಾಯಿ ಬಿಡುಗಡೆ ಮಾಡಿ. ಅದು ಗ್ರಾಮೀಣ ಪ್ರದೇಶದ ರಸ್ತೆಯಿರಬಹುದು, ಉದ್ಯೋಗ ಖಾತ್ರಿಯಲ್ಲಿ ಕೂಲಿಕಾರರು ರಸ್ತೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅದರ ಜೊತೆಗೆ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಪಶು ಸಂಗೋಪನಾ ಇಲಾಖೆಯಲ್ಲಿ ಎಲ್ಲಾ ನೌಕರರನ್ನು ಭರ್ತಿ ಮಾಡುವುದಕ್ಕೆ ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹಣಕಾಸು ಇಲಾಖೆಗೆ ಹೇಳಬೇಕಾಗುತ್ತದೆ. ಪಶು ಸಂಗೋಪನಾ ಇಲಾಖೆಗೆ ಸಂಬಂಧಪಟ್ಟಂತೆ ಕಾಲೇಜು ಸೀಟುಗಳು ಬಗ್ಗೆ ಹೇಳುವುದಾದರೆ 300 ಸೀಟುಗಳು ಇರುವುದನ್ನು ಕನಿಷ್ಟ 600 ಸೀಟುಗಳನ್ನು ಮಾಡಿ. ಎಲ್ಲಾ ಕಾಲೇಜುಗಳಲ್ಲಿ ಸೀಟುಗಳನ್ನು ಡಬಲ್ ಮಾಡಿ ಎಂದು ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕಾಗುತ್ತದೆ. ಮಾನ್ಯ ಜಯಚಂದ್ರರವರು ರಾಜ್ಯ ಸರ್ಕಾರವನ್ನು ಬಯ್ಯುವುದು ಬೇಡ. ಕೇಂದ್ರ ಸರ್ಕಾರಕ್ಕೆ ಐದು ಜನ ಮಂತ್ರಿಗಳನ್ನು, ಮಾನ್ಯ ವಿರೋಧ ಪಕ್ಷದ ನಾಯಕರು, ಉಪ ನಾಯಕರನ್ನು ಕರೆದುಕೊಂಡು ಮತ್ತೊಂದು ಸಾರಿ ವಿಶೇಷವಾಗಿ ಮನವಿ ಮಾಡಬೇಕು. ಹಾಸನದ ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ನಾನು ನಿನ್ನೆ ಹೇಳಿದ್ದೆ. ಬೆಂಗಳೂರಿನಲ್ಲಿ ಯಾವ ರೀತಿ ಇದೆ, ಅದೇ ರೀತಿ ಕೊಡಗು ಮತ್ತು ಹಾಸನದಲ್ಲಿ ಆಡಳಿತಾತ್ಮಕ ದೃಷ್ಟಿಯಿಂದ ಮಾಡಬೇಕೆಂದು ಹೇಳುತ್ತಾ, ಅದಕ್ಕೆ ಸಂಬಂಧಪಟ್ಟ

ಬಿಲ್‌ನ್ನು ಯಾವುದೇ ಕಾರಣಕ್ಕೂ ತರುವುದಕ್ಕೆ ಬಿಡುವುದಿಲ್ಲ, ತಂದರೆ ದೊಡ್ಡ ಹೋರಾಟ ಮಾಡುತ್ತೇವೆ. ಮತ್ತೆ ಹಾಸನದಿಂದಲೇ ಪ್ರಾರಂಭವಾಗುತ್ತದೆ. ಏಕೆಂದರೆ ಈಗ ಹಾಸನದಲ್ಲಿ ಆಲೂಗಡ್ಡೆ Package ಮಾಡಿ ಒಬ್ಬರು ಮುಖ್ಯಮಂತ್ರಿಗಳು ಹೋದರೆಂದು ಹೇಳಿದರು. ಹಾಸನದ ಕೃಷಿ ಕಾಲೇಜು ವಿಚಾರದಲ್ಲಿ ಏನಾದರೂ ಮಾಡುವುದಕ್ಕೆ ಹೋಗಿ ಇನ್ನೊಬ್ಬ ಮುಖ್ಯಮಂತ್ರಿ ಹೋಗುವುದು ಬೇಡ. ಆದುದರಿಂದ ಕೂಡಲೇ ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗ ಹೋಗಲಿ. ಡೈರಿ ಪೇಮೆಂಟ್ ಬಗ್ಗೆ ಹೇಳುವುದಾದರೆ ಸ್ಕ್ಯಾಪ್ ಪೌಡರ್‌ಗೆ ದುಡ್ಡನ್ನು ಸರ್ಕಾರದಿಂದಲೇ ಕೊಡಬೇಕು ಮತ್ತು ಏಳು ವಾರ ಬಂದ್ ಮಾಡಿದ್ದೀರಿ, ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತಾ, ನನಗೆ ಬರಗಾಲದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಮಾನ್ಯ ಜಯಚಂದ್ರರವರೆ ಮಾತನಾಡಿ, ಇನ್ನು ಬಹಳ ಜನ ಸದಸ್ಯರು ಮಾತನಾಡುವವರು ಇದ್ದಾರೆ.

ಶ್ರೀ.ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ತಾವು ಯಾವ ರೀತಿ ಪ್ಲಾನ್ ಮಾಡಿದ್ದೀರಿ, ಇವತ್ತೆ ರಿಪ್ಲೈ ಇದೆಯೇ?

ಅಧ್ಯಕ್ಷರು:- ಇವತ್ತು ಇಲ್ಲ, ಸೋಮವಾರ ಬೆಳಿಗ್ಗೆ ಸರ್ಕಾರದಿಂದ ಉತ್ತರವಿದೆ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ, ಯಾರಿಗೂ Deny ಮಾಡುವುದಿಲ್ಲ. ಯಾರ್‍ಯಾರು ಮಾತನಾಡಬೇಕೋ ಮಾತನಾಡಿ.

ಶ್ರೀ.ಟಿ.ಬಿ.ಜಯಚಂದ್ರ:- ಊಟಕ್ಕೆ Break ಇದೆಯೋ, ಇಲ್ಲವೋ? ಸಭೆಯನ್ನು Continuous ಆಗಿ ಮಾಡೋಣವೇ?

ಅಧ್ಯಕ್ಷರು:- ಮಾನ್ಯ ಈಶ್ವರಪ್ಪನವರೆ, ಸಭೆ Continuous ಆಗಿ ಮಾಡೋಣವೇ?

ಶ್ರೀ.ಕೆ.ಎಸ್.ಈಶ್ವರಪ್ಪ:-Continuous ಆಗಿ ಮಾಡೋಣ

ಅಧ್ಯಕ್ಷರು:-ಮಾಡೋಣ

ಶ್ರೀ.ಕೆ.ಎಸ್.ಈಶ್ವರಪ್ಪ:-ಮಾನ್ಯ ಅಧ್ಯಕ್ಷರೆ, ಇವತ್ತು ಯಾರ್‍ಯಾರು ಮಾತನಾಡುತ್ತಾರೋ ಅವರೆಲ್ಲರೂ ರಾತ್ರಿ ಎಷ್ಟು ಹೊತ್ತು ಆಗುತ್ತದೋ ಅಗಲಿ, ಸೋಮವಾರ ಬೆಳಿಗ್ಗೆ ಉತ್ತರ ಕೊಡೋಣ.

ಶ್ರೀ.ಟಿ.ಬಿ.ಜಯಚಂದ್ರ:- ಊಟಕ್ಕೆ Break ಮಾಡುತ್ತೀರಾ, ಇಲ್ಲವಾ?

ಶ್ರೀ.ಕೆ.ಎಸ್.ಈಶ್ವರಪ್ಪ:-ಮಾನ್ಯ ಸದಸ್ಯರು ತುಂಬಾ ಜನರು ಮಾತನಾಡ ಬೇಕಾಗುವುದರಿಂದ ಊಟಕ್ಕೆ ಹೋಗಿ ಬಂದು ಮಾಡುತ್ತಾ ಇರಲಿ.

ಅಧ್ಯಕ್ಷರು:–ಈಗ ಮಾನ್ಯ ಜಯಚಂದ್ರರವರು ಮಾತನಾಡಲಿ, ಅಮೇಲೆ ನೋಡೋಣ.

ಶ್ರೀ.ಟಿ.ಬಿ.ಜಯಚಂದ್ರ(ಸಿರಾ):– ಮಾನ್ಯ ಅಧ್ಯಕ್ಷರೆ, ನಾವು ಬಹಳ ಪರಿ–ಪರಿಯಾಗಿ ಈ ವಿಷಯ 60ರ ಅಡಿಯಲ್ಲಿ ಚರ್ಚೆಯಾಗಬೇಕೆಂದು ಕೇಳಿದೆವು. ಇಲ್ಲಿನ ಬರ ಪರಿಸ್ಥಿತಿ ಏನು ಎನ್ನುವಂಥದ್ದನ್ನು ರಾಜ್ಯದ ಜನತೆಗೆ ಅಲ್ಲ, ರಾಷ್ಟ್ರಕ್ಕೂ ಮತ್ತು ಕೇಂದ್ರ ಸರ್ಕಾರಕ್ಕೂ ಕೂಡ ಮನವರಿಕೆ ಮಾಡಬೇಕೆಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೆವು. ಆದರೆ ಸರ್ಕಾರ ಚರ್ಚೆಗೆ ಮುಕ್ತ ಮನಸ್ಸು ಹೊಂದಿದೆ ಎಂದು ಹೇಳಿದರೂ, ಅದರ ನಿಯಮಾವಳಿಗಳಲ್ಲಿ ಮಾತ್ರ ಸಡಿಲ ಮಾಡುವುದಕ್ಕೆ ತಯಾರಿಲ್ಲವೆಂದು ಹೇಳಿದರೆ, ಯಾವ ಕಾರಣಕ್ಕೋಸ್ಕರ ಈ ರೀತಿಯಾದ ನಿಟ್ಟಿನಲ್ಲಿ ಪಟ್ಟು ಹಿಡಿಯತ್ತಾರೆಂಬುದು ಇನ್ನು ನನಗೆ ಅರ್ಥವಾಗಿಲ್ಲ. ಈ ವಿಷಯವಾಗಿ ಈಗಾಗಲೇ ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಶ್ರೀಮಾನ್ ರೇವಣ್ಣನವರು ಮಾತನಾಡಿದ್ದಾರೆ. ಈ ವಿಷಯವನ್ನು ಮಾತನಾಡಬೇಕಾದಾಗ ಇವತ್ತು ಬರಗಾಲಬಂದಿದೆ. ರಾಜ್ಯದಲ್ಲಿ ಬರಗಾಲ ಬಂದಾಗ ತತ್‌ಕ್ಷಣವಾಗಿ ಏನು ಕ್ರಮ ತೆಗೆದುಕೊಳ್ಳಬೇಕೆನ್ನುವ ಎಲ್ಲಾ ವಿಚಾರಗಳನ್ನು ಹೇಳಿದ್ದಾರೆ. ಆದರೆ ಬರಗಾಲ ಅಂದರೆ ಹೇಗೆಂದು ಹೇಳಿದರೆ, ಕಳೆದ ವರ್ಷ 2011–12ನೇ ಸಾಲಿನಲ್ಲಿ 123 ತಾಲ್ಲೂಕುಗಳಿಗಿಂತಲೂ ಹೆಚ್ಚು ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ ಎಂದು ಸರ್ಕಾರ ಅಧಿಕೃತವಾದ ಘೋಷಣೆ ಮಾಡಿ Relief ಕಾಮಗಾರಿಯನ್ನು ತೆಗೆದುಕೊಂಡಿತು. ಇದು ಆದಮೇಲೆ 2012–13ನೇ ಸಾಲಿನಲ್ಲಿ ಮುಂಗಾರಿಗಿಂತ ಮುಂಚೆ ಬರುವಂಥ ಮಳೆ, ವಾಡಿಕೆಯಂತೆ ರೈತರ ಭೂಮಿಯನ್ನು ಹದ ಮಾಡುವಂಥ ಮಳೆ ಬರಲಿಲ್ಲ. ಇಂಥ ಪರಿಸ್ಥಿತಿಯನ್ನು ಕಳೆದ ಹತ್ತು ವರ್ಷಗಳಲ್ಲಿ ನೋಡಿರಲಿಲ್ಲ, ಮುಂಗಾರಿಗಿಂತ ಮುಂಚೆ ಬರುವಂಥ ಮಳೆ ಬರದೇ ಇರುವ ಕಾರಣದಿಂದ ರೈತರಿಗೆ ಯಾವುದೇ ರೀತಿಯಲ್ಲೂ ಭೂಮಿಯನ್ನು ಹದ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಕೃಷಿ ಇಲಾಖೆಯ ಅಂದಾಜಿನ ಪ್ರಕಾರ ಸುಮಾರು 70 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಮುಂಗಾರು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾರೆಂದು ಇರುವಂಥದ್ದು. ಆದರೆ ಮುಂಗಾರು ಮಳೆ ಬರಲಿಲ್ಲ, ಮಳೆ ಬಂದಿದ್ದು ಯಾವಾಗ ಎಂದರೆ, ಒಂದೇ ಒಂದು ಸಾರಿ, ಅದರಲ್ಲೂ ನಮ್ಮ ಹಳ್ಳಿಯಲ್ಲಿ ನಂಬಿಕೆ ಏನು ಇದೆಯೆಂದರೆ, ಪ್ರತಿ ವರ್ಷ ಕೂಡ "ಭರಣಿ ಮಳೆ ಬಂದರೆ, ಧರಣಿ ಎಲ್ಲಾ ಬೆಳೆ" ಎಂದು ಹೇಳುವಂಥ ಮಾತು ಇದೆ, ಈ ಮಾತು ಸತ್ಯವಾಗುತ್ತಿತ್ತು. ಆದರೆ ಇತ್ತೀಚಿನ ದಿವಸಗಳಲ್ಲಿ ಆ ಮಾತು ಸತ್ಯವಾಗುತ್ತಿಲ್ಲ. ಈ ರೀತಿ ಏಕೆ ಸತ್ಯವಾಗುತ್ತಿಲ್ಲವೆನ್ನುವ ಬಗ್ಗೆ ಕೂಡ ಸರ್ಕಾರ ವಿವೇಚನೆ

ಮಾಡಬೇಕಾಗುತ್ತದೆ. ಒಂದು ದಿವಸ ಭರಣಿ ಮಳೆ ಬಂದ ಮೇಲೆ, ಇಲ್ಲಿಯವರೆಗೂ ಒಂದು ದಿವಸವೂ ಮಳೆ ಬರಲಿಲ್ಲ. ನಿನ್ನೆ ಮೊನ್ನೆ ಎಲ್ಲೋ ಅಲ್ಪಸ್ವಲ್ಪ ಮಳೆ ಆಗಿರಬಹುದು. ಇನ್ನು ಹತ್ತು ದಿವಸಗಳು ಕಳೆದರೆ, ಮುಂಗಾರಿನಲ್ಲಿ ಬಿತ್ತುವಂಥ ಕಾರ್ಯಕ್ರಮ ಸಂಪೂರ್ಣವಾಗಿ ಸ್ಥಗಿತಗೊಂಡ ಹಾಗೆ, ಅಂದರೆ ಬರಗಾಲ ನಿಶ್ಚಿತ. ನಾವು ಬರಗಾಲ ನಿಶ್ಚಿತವೆಂದು ಹೇಳುವಾಗ ಸರ್ಕಾರಕ್ಕೆ ಮಾನದಂಡವೇನು? ಕಂದಾಯ ಸಚಿವರಲ್ಲಿ ಕೇಳುವುದೇನೆಂದರೆ ಒಂದು ತಿಂಗಳಲ್ಲಿ ಸುಮಾರು 20 ದಿವಸಗಳು Dry spell, ಅಂದರೆ ಮಳೆ ಬಾರದೇ ಇದ್ದರೆ, ಬೆಳೆ ಒಣಗಿ ಹೋಗುವಂಥ ಸಂದರ್ಭ ಬಂದರೆ, ಅದನ್ನು ಅಧಿಕೃತವಾಗಿ ಬರಗಾಲವೆಂದು ಘೋಷಣೆ ಮಾಡುವುದಕ್ಕೆ ಅವಕಾಶವಿತ್ತು. ಈ ಎರಡು ತಿಂಗಳ ಹಿಂದೆ ಬಂದಂಥ ಒಂದು ಮಳೆ ಬಿಟ್ಟರೆ ಇನ್ನು ಎಲ್ಲೂ ಮಳೆ ಬರಲಿಲ್ಲ. ಈ ರೀತಿ ಯಾವ್ಯಾವ ತಾಲ್ಲೂಕುಗಳಲ್ಲಿ ಮಳೆ ಬರಲಿಲ್ಲವೆನ್ನುವಂಥದ್ದರ ಬಗ್ಗೆ ನಿಯಮಾವಳಿಯಲ್ಲಿ ಅವಕಾಶವಿರುವಾಗ ತಾವು ಬರಗಾಲವೆಂದು ಏಕೆ ಘೋಷಣೆ ಮಾಡಲಿಲ್ಲ? ಈ ವಿಷಯ ತಮಗೂ ಗೊತ್ತಿರುವಂಥದ್ದು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಸಂಬಂಧ ಯಾವ ರೀತಿಯಲ್ಲಿ ಇರುತ್ತದೆ? ಬರಗಾಲವೆಂದು ಹೇಳಿದಾಗ ಕೇಂದ್ರಸರ್ಕಾರದವರು ಹೇಳುವುದೇನೆಂದರೆ, ನಾವು ರಾಜ್ಯಕ್ಕೆ ಒಂದು ಸಮಿತಿಯನ್ನು ಕಳುಹಿಸುತ್ತೇವೆ. ಈ ಸಮಿತಿಯು ವರದಿಯನ್ನು ಕೊಟ್ಟ ಮೇಲೆ 13ನೇ ಹಣಕಾಸಿನಲ್ಲಿ ಏನು ಬರಬೇಕಾಗುತ್ತದೋ ಅದನ್ನು ಕೊಡುತ್ತಾರೆ. ಇದು Procedure ಇರುವಂಥದ್ದು. ಆದರೆ ತಾವು ನಮಗೆ ಹಣ ಬೇಕೆಂದು ಹೇಳುವುದಕ್ಕೆ ಆಧಾರ ಏನು? ತಾವು ಯಾವ ಮಾನದಂಡದಲ್ಲಿ ಕೆಲಸ ಮಾಡಿದ್ದೀರಿ? ನಾನು ತಮ್ಮನ್ನು ನೇರವಾಗಿ ಕೇಳುವುದೇನೆಂದರೆ, ಯಾವ ಕಾರಣಕ್ಕೋಸ್ಕರವಾಗಿ ನಿಮ್ಮ ಇಲಾಖೆಗಳು ಇದುವರೆಗೂ ಬರಗಾಲವೆಂದು ಘೋಷಣೆ ಮಾಡದೇ ಇರುವುದಕ್ಕೆ ಕಾರಣಗಳೇನು? ಅಂಥ ಬಲವಾದ ಕಾರಣಗಳು ಇತ್ತು. ಹೌದ್ದು ನಾನು ರಾಜಕೀಯವಾಗಿ ಒಪ್ಪುತ್ತೇನೆ. ಇದರ ಕಡೆಗೆ ಯಾರಿಗೂ ಗಮನವಿರಲಿಲ್ಲ. ಕಳೆದ ಎರಡು ತಿಂಗಳಲ್ಲಿ ಆಡಳಿತವೆನ್ನುವಂಥದ್ದು ಕುಸಿದು ಹೋಗಿತ್ತು, ಆಡಳಿತವಿರಲಿಲ್ಲ, ಮಂತ್ರಿಗಳು ಅಧಿಕೃತವಾಗಿ ಕುಳಿತು ಕೆಲಸ ಮಾಡಲಿಲ್ಲ. ರಾಜ್ಯದ ಬಗ್ಗೆ, ಇದರ ಬಗ್ಗೆ ಯೋಚನೆ ಮಾಡಲಿಲ್ಲ. ನಾನು ತಮ್ಮ ಒಳಜಗಳದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ತಾವು ಸ್ವಲ್ಪ ವಿವೇಚನೆಯಿಂದ ರಾಜ್ಯದಲ್ಲಿ ಎಂತಹ ಪರಿಸ್ಥಿತಿ ಇದೆಯೆಂಬುದನ್ನು ಅರ್ಥಮಾಡಿಕೊಂಡಿದ್ದರೆ, ಖಂಡಿತವಾಗಿಯೂ ಇಷ್ಟು ಹೊತ್ತಿಗೆ ಬರವೆಂದು ಘೋಷಣೆ ಮಾಡಬಹುದಾಗಿತ್ತು. ತಾವು ಆ ರೀತಿ ಬರವೆಂದು ಘೋಷಣೆ ಮಾಡುವುದಕ್ಕೆ ಹೋಗಲೇ ಇಲ್ಲ. ಇವತ್ತು ಪರಿಸ್ಥಿತಿ ಯಾವ ರೀತಿ ಇದೆ, ಅದನ್ನು

ನೀವು ಯಾವ ರೀತಿಯಾಗಿ ಅರ್ಥ ಮಾಡಿಕೊಳ್ಳಬೇಕೆಂದರೆ, ಈಗಾಗಲೇ ಸರ್ಕಾರದವರು ಸಮಿತಿಗಳನ್ನು ಮಾಡಿದ್ದಾರೆ. ತಾವು ಕೆಡಿಪಿ ಸಭೆಗಳನ್ನು ಮಾಡುತ್ತೀರಿ, ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿಗಳನ್ನು ಮಾಡುತ್ತೀರಿ. ಆದರ ಮುಖೇನ ರಾಜ್ಯದಲ್ಲಿ ಕೆಳಹಂತದಲ್ಲಿರುವಂಥ ಪರಿಸ್ಥಿತಿಗಳು ಏನೆಂಬುದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಒಂದು ಅವಕಾಶವಾಗುತ್ತದೆ. ಆದರೆ ಇವರು ಮಾಡದ್ದು ಏನು? ತಾವು ಅಧಿಕಾರಿಗಳ ಸಭೆಗಳನ್ನು ಎಷ್ಟು ಸಾರಿ ಮಾಡಿದ್ದೀರಿ? ಇದು ಏನಾಯಿತು ಎಂಬುದು ಬಹಳ ಮುಖ್ಯವಾದ ವಿಚಾರ. ಈ ಕೆಡಿಪಿ ಸಭೇಗಳು ಬಹಳಷ್ಟು ಕಡೆಗಳಲ್ಲಿ ನಡೆಯಲಿಲ್ಲ. ಕಳೆದ–ಎರಡು ವರ್ಷಗಳಲ್ಲಿ ಒಂದು ಜಿಲ್ಲೆಯಲ್ಲೂ ಮೀಟಿಂಗ್‌ಗಳು ನಡೆಯಲಿಲ್ಲ. ಚಿತ್ರದುರ್ಗ ಜಿಲ್ಲೆಯೊಂದು ಬಿಟ್ಟರೆ, ಬಹುಶಃ ಇನ್ನು ಯಾವ ಜಿಲ್ಲೆಗಳಲ್ಲೂ ಕೆಡಿಪಿ ಸಭೆಗಳು ನಡೆಯಲಿಲ್ಲ. ನಮ್ಮ ಜಿಲ್ಲೆಯಲ್ಲಿ ಒಂದೇ ಒಂದು ಸಭೆಯೂ ನಡೆಯಲಿಲ್ಲ. ಮಾನ್ಯ ಸುರೇಶ್‌ಕುಮಾರ್‌ರವರು ಇದ್ದಾಗ ಮೂರು ಸಭೆಗಳು ನಡೆದಿರುವುದು ಬಿಟ್ಟರೆ, ಈ ವರ್ಷ ಒಂದು ಸಭೆಯೂ ನಡೆಯಲಿಲ್ಲ. ತಾವು ತಮ್ಮ ರಾಜಕೀಯ ಕಚ್ಚಾಟದಲ್ಲಿರುತ್ತೀರಿ, ಅದರಲ್ಲೆ ತಾವು ತಲ್ಲೀನರಾಗಿರುತ್ತೀರಿ, ನಿಮಗೆ ಕುರ್ಚಿ ಬಹಳ ಮುಖ್ಯವಾಗಿದೆ, ನೀವು ಮಾಡಿಕೊಳ್ಳಿ. ಒಂದು ರಾಜಕೀಯ ಪಕ್ಷವಾಗಿ ಅದಕ್ಕೆ ಹೋರಾಟ ಮಾಡುವಂಥದ್ದು ಸ್ವಾಭಾವಿಕ, ಮಡಿ, ಆದರೆ ಅಧಿಕಾರಿಗಳು ಏನು ಮಾಡುತ್ತಿದ್ದರು? ಆಧಿಕಾರಿಗಳು ಯಾವ ಕಾರಣಕ್ಕೋಸ್ಕರ ಇವತ್ತು ಸಭೆಗಳನ್ನು ಮಾಡುವುದಕ್ಕೆ ಹೋಗಲಿಲ್ಲವೆನ್ನುವಂಥದ್ದು ಬಹಳ ಮುಖ್ಯ. ಇವತ್ತು ಅಧಿಕಾರಿಗಳ ನೇತೃತ್ವದಲ್ಲಿರುವಂಥ ಸಭೆಗಳಲ್ಲಿ ಒಂದೇ ಒಂದು ಸಭೆಯಲ್ಲೂ Review ಮಾಡಲಿಲ್ಲ, ಈ ರೀತಿ Review ಮಾಡದೇ ಇರುವ ಪರಿಣಾಮದಿಂದ ಇವತ್ತು ರಾಜ್ಯದಲ್ಲಿ ವಾಸ್ತವಿಕ ಸಂಗತಿ ಏನೆಂಬುದು ಸರ್ಕಾರಕ್ಕೆ ಮನದಟ್ಟು ಆಗಲಿಲ್ಲ. ತಾವು ಆ ಕಾರಣಕ್ಕೋಸ್ಕರ ಇವತ್ತು ಬರವೆಂದು ಘೋಷಣೆ ಮಾಡುವುದಕ್ಕೆ ಹೋಗಲಿಲ್ಲವೆಂದಾಗ, ಸರ್ಕಾರ ಸಂಪೂರ್ಣ ವೈಫಲ್ಯವಿದೆ, ಇವತ್ತು ಜನರು ನೊಂದಿದ್ದಾರೆ, ಕಷ್ಟಕ್ಕೆ ಈಡಾಗಿದ್ದಾರೆಂದರೆ, ಇದಕ್ಕೆ ಮೂಲ ಕಾರಣ ಸರ್ಕಾರ ನೇರವಾಗಿ ಹೊಣೆ ಹೊರಬೇಕಾಗುತ್ತದೆ. ಇನ್ನೊಂದು ವಿಚಾರವೇನೆಂದರೆ, Immediate ಆಗಿ ಏನು Measure ತೆಗೆದುಕೊಳ್ಳಬೇಕೆನ್ನುವುದಕ್ಕಿಂತ ಹೆಚ್ಚಾಗಿ, ವಾಸ್ತವಿಕವಾಗಿ ಗ್ರಾಮೀಣ ಪ್ರದೇಶಗಳಲ್ಲಿರುವಂಥ ಚಿತ್ರ ಏನೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಈಶ್ವರಪ್ಪನವರು ಅಧಿವೇಶನ ನಡೆಯುವಂಥ ಸಂದರ್ಭದಲ್ಲಿ ಬರಗಾಲದ ವೀಕ್ಷಣೆಗೋಸ್ಕರ ನಮ್ಮ ಜಿಲ್ಲೆಗೂ, ನಮ್ಮ ತಾಲ್ಲೂಕಿಗೂ ಬರುತ್ತಿದ್ದಾರೆಂಬುದು ಸಂತೋಷದ ವಿಚಾರವಾಗಿದೆ. ತಾವು ಬನ್ನಿ, ಅಲ್ಲಿನ ವಾಸ್ತವಿಕ ಸಂಗತಿ

ಏನೆಂಬುದು ಗೊತ್ತಾಗುತ್ತದೆ. ತಾವು ಇಲಿಯವರೆಗೂ ಹಳ್ಳಿಗಳನ್ನು ನೋಡುವಂಥ ಅವಕಾಶಗಳಾಗಿರಲಿಲ್ಲ. ನಾಳೆಯಿಂದ ನೀವು ಬರುತ್ತಿದ್ದೀರಲ್ಲ, ಬಂದಾಗ ಪರಿಸ್ಥಿತಿ ಏನು ಎನ್ನುವುದು ನಿಮಗೇ ಗೊತ್ತಾಗುತ್ತದೆ. ಬಹಳ ಮುಖ್ಯವಾಗಿ ಎಲ್ಲರೂ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಮಾತನಾಡಿದ್ದಾರೆ. ಕುಡಿಯುವ ನೀರಿಗೆ ನಾವು ಯಥೇಚ್ಛವಾಗಿ ಹಣವನ್ನು ಬಿಡುಗಡೆ ಮಾಡಿತ್ತಿದ್ದೇವೆ, ದುಡ್ಡಿಗೆ ತೊಂದರೆಯಿಲ್ಲ ಎನ್ನುವ ಹೇಳಿಕೆಗಳು ನಿಮ್ಮಿಂದ ನಿರಂತರವಾಗಿ ಬರುತ್ತಿವೆ. ಕಳೆದ ನಾಲ್ಕು ತಿಂಗಳು ರಾಜ್ಯದಲ್ಲಿ ತೀವ್ರವಾದ ಬರಗಾಲವಿತ್ತು, ಮಳೆ ಬರಬೇಕಾಗಿತ್ತು, ಬರಲಿಲ್ಲ. ಹಾಗಾಗಿ ನೀವು ಕಡುಯುವ ನೀರಿಗೋಸ್ಕರ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎನ್ನುವುದು ಬಹಳ ಮುಖ್ಯ. ಇವತ್ತು ವಾಸ್ತವಿಕ ಪರಿಸ್ಥಿತಿ ಏನಿದೆ ಎಂದರೆ, ಮುಂಗಾರಿನಲ್ಲಿ ಮಳೆ ಬಂದಾಗ ಅಂತರ್ಜಲದ ಮಟ್ಟ ಮೇಲಕ್ಕೆ ಹೋಗುತ್ತದೆ. Surface Water ಇದ್ದಾಗ ಅದು ಕುಡಿಯುವುದಕ್ಕೆ ಯೋಗ್ಯವಾಗಿರುತ್ತದೆ. ಮಳೆ ಬರಲಿಲ್ಲವೆಂದರೆ ನೀರು ಕೆಳಮಟ್ಟಕ್ಕೆ ಹೋಗುತ್ತದೆ. ನೀರು ಕೆಳಮಟ್ಟಕ್ಕೆ ಹೋದಾಗ ಅಲ್ಲಿ ಎಂಥ ನೀರು ಸಿಗುತ್ತದೆ ಎನ್ನುವುದು ಮುಖ್ಯವಾದಂಥ ವಿಚಾರ. ಇವತ್ತು ನೀವು ಉಪ ಮುಖ್ಯಮಂತ್ರಿ ಗಳಾಗಿದ್ದೀರಿ, ಕಂದಾಯ ಇಲಾಖೆಯ ಸಚಿವರಾಗಿದ್ದೀರಿ, ಗ್ರಾಮೀಣಾಭಿವೃದ್ಧಿ ಇಲಾಖೆಯ ಹೊಣೆಯನ್ನೂ ತಾವೇ ಹೊತ್ತಿದ್ದೀರಿ. ಆ ಕಾರಣಕ್ಕೋಸ್ಕರ ತಮಗೆ ಹೇಳುತ್ತಿದ್ದೇನೆ, ಇವತ್ತು ಅಂತರ್ಜಲದ ಮಟ್ಟ ಕೆಳಹಂತಕ್ಕೆ ಹೋಗಿದೆ. ಈ ವಿಚಾರವನ್ನು ಸರ್ಕಾರ ವಿಶೇಷವಾಗಿ ಗಮನಿಸಬೇಕಾಗಿದೆ. ಹಿಂದೆಂದೂ ಕಾಣದೇ ಇದ್ದ ರೀತಿಯಲ್ಲಿ ನೀರು ಕೆಳಹಂತಕ್ಕೆ ಹೋಗಿದೆ. ಕುಡಿಯುವ ನೀರಿನ ಪರಿಸ್ಥಿತಿ ಯಾವ ರೀತಿ ಇದೆ, ಕುಡಿಯುವುದಕ್ಕೆ ನೀರು ಯಾವ ರೀತಿ ಸಿಗುತ್ತಿದೆ. ಎನ್ನುವುದಕ್ಕೆ ನಾನು ಒಂದು ಸಮೀಕ್ಷೆಯನ್ನು ಮಾಡಿಸಿದೆ. ಎರಡು ತಿಂಗಳಿಂದ ನನ್ನ ಕ್ಷೇತ್ರದಲ್ಲಿ ಏನಾಗಿರಬಹುದು ಎನ್ನುವುದಕ್ಕೆ ಶಿರಾ ತಾಲ್ಲೂಕನ್ನು ಮುಖ್ಯವಾಗಿಟ್ಟುಕೊಂಡು ನಾನು ಸಮೀಕ್ಷೆ ಮಾಡಿಸಿದೆ. ನಮ್ಮಲ್ಲಿ 461 Habitations ಅಂದರೆ ಜನವಸತಿ ಪ್ರದೇಶಗಳು ಬರುತ್ತವೆ. ಅಲ್ಲಿ Water quality ಏನಿದೆ ಎನ್ನುವುದನ್ನು ನೋಡಿದಾಗ, 366 ಹಳ್ಳಿಗಳಲ್ಲಿ ನೀರು ಕುಡಿಯಲ್ಲು ಯೋಗ್ಯವಾಗಿಲ್ಲ. ಒಂದು ಕಡೆ Fluoride, ಇನ್ನೊಂದು ಕಡೆ Nitrate, ಇನ್ನೊಂದು ಕಡೆ ಕುಡಿಯಲು ಸಾಧ್ಯವೇ ಇಲ್ಲದ ರೀತಿಯಲ್ಲಿ Iron contents ಇವೆ. ಕೆಲವು ಕಡೆಗಳಲ್ಲಿ ನೀರು ಪರವಾಗಿಲ್ಲ ಎಂದರೆ, ಅಲ್ಲಿ Bacterial Infection. ಇವು ಹೊಸಹೊಸ ರೀತಿಯ ಸಮಸ್ಯೆಗಳು. ಇದು ಯಾರಿಗೆ ಅರ್ಥವಾಗುತ್ತದೆ? ಇದನ್ನು ನಾನು ಸಮೀಕ್ಷೆ ಮಾಡಿಸಿದ್ದು, ನಾಳೆ

ನೀವು ನಮ್ಮಲ್ಲಿಗೆ ಬರುತ್ತಿದ್ದೀರಲ್ಲ, ಬಂದಾಗ ನಿಮಗೆ ನಾನು ಅಧಿಕೃತ ಮಾಹಿತಿಯನ್ನು ಕೊಡುತ್ತೇನೆ. 366 ಹಳ್ಳಿಗಳಲ್ಲಿ ನೀರು ಕುಡಿಯಲು ಯೋಗ್ಯವಾಗಿಲ್ಲ ಎಂದರೆ ಜನಗಳ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಹೌದು, ನೀವು ಹಣವನ್ನು ಬಿಡುಗಡೆ ಮಾಡಿದಿರಿ. ಬಿಡುಗಡೆ ಮಾಡುವುದಕ್ಕೆ ಮೂರು ವಿಧಾನಗಳಿವೆ. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಯೋಜನೆ ಮಾಡುವ ಕೇಂದ್ರ ಸರ್ಕಾರದ ಒಂದು ಯೋಜನೆಯಿದೆ. ಒಂದು ವರ್ಷಕ್ಕೆ ಎಷ್ಟು ಹಣ ಬೇಕಾಗುತ್ತದೆ ಎಂದು ಹೇಳಿ, ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡುವ N.D.R.F/S.D.R.F. ಯೋಜನೆಯಿದೆ. ಅದರ ಜೊತೆಗೆ, ಗ್ರಾಮೀಣಾಭಿವೃದ್ಧಿ ಇಲಾಖೆಯಿಂದು ಬಿಡುಗಡೆಯಾಗುವ ಹಣ. ಈ ಮೂರು ಇಲಾಖೆಗಳಿಂದ ಹಣ ಬಿಡುಗಡೆಯಾಗುತ್ತದೆ. ನಮ್ಮಲ್ಲಿ ಸಮಸ್ಯಾತ್ಮಕ ಹಳ್ಳಿಗಳಿವೆ ಎಂದು ಕಂಡುಬಂದ ನಂತರ ನಾವು ಇಲ್ಲಿಯವರೆಗೆ ಸುಮಾರು 10 ಸಭೆಗಳನ್ನು ಮಾಡಿದ್ದೇವೆ. ಇದುವರೆಗೆ ನಾವು ಕೇವಲ 52 ಹಳ್ಳಿಗಳನ್ನು ಮಾತ್ರ Tackle ಮಾಡುವುದಕ್ಕೆ ಸಾಧ್ಯವಾಗಿದೆ. ಅಂದರೆ 52 ಹಳ್ಳಿಗಳಲ್ಲಿ ಕಾಮಗಾರಿ ನಡೆಯುತ್ತಿದೆ, ಇದುವರೆಗೂ ಅದು ಮುಗಿಯಲಿಲ್ಲ, ಅಲ್ಲಿಯ ಜನ ನೀರು ಕುಡಿಯಲಿಲ್ಲ. ಏಕೆ ಈ ರೀತಿಯಾಯಿತು? ಸರ್ಕಾರದಲ್ಲಿರುವಂಥ ಲೋಪದೋಷಗಳನ್ನು ಅರ್ಥಮಾಡಿಕೊಳ್ಳಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜೊತೆಜೊತೆಗೆ ಯೋಜನೆಗಳನ್ನು ರೂಪಿಸಿದಾಗ ಮಾತ್ರ ಇವುಗಳನ್ನೆಲ್ಲ ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಕೊಳವೆಬಾವಿಗಳನ್ನು ಕೊರೆಯತಕ್ಕಂಥವರು ನೀವು. ಅದಕ್ಕೆ Pipeline Motor ಕೊಡುವುದು Deputy Commissioner ರವರಿಗೆ ಬರುವಂಥ ಗ್ರ್ಯಾಂಟಿನಲ್ಲಿ. ಯಾರು ಎಲ್ಲಿ ಕೊಳವೆ ಬಾವಿಯನ್ನು ಕೊರೆಯುತ್ತಾರೋ, ಯಾರು ಯಾವಾಗ ಮೋಟರ್ ಹಾಕುತ್ತಾರೋ, ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲ. ಬೇಕಾದರೆ ನೀವೇ ನಿಮ್ಮ ಅಧಿಕಾರಿಗಳಿಂದ ರಾಜ್ಯದಲ್ಲಿರುವ ಪರಿಸ್ಥಿತಿಯ ಬಗ್ಗೆ ವರ್ತಮಾನವನ್ನು ತರಿಸಿಕೊಳ್ಳಿ. ಆದರೆ ಅಧಿಕಾರಿಗಳು ಹೇಳಿದ್ದೆಲ್ಲವೂ ಕರೆಕ್ಟಾಗಿದೆ ಎಂದು ನೀವು ತಿಳಿಯಬೇಡಿ. ಏಕೆಂದರೆ, ಅವರಿಗೆ Executive Engineer ಅಥವಾ Deputy Commissioner ವರ್ತಮಾನವನ್ನು ಕೊಡುತ್ತಾರೆ. ಆದರೆ ಕೆಳಹಂತದಲ್ಲಿ ಏನಾಗಿದೆ ಎನ್ನುವುದು ಅವರಿಗೆ ಗೊತ್ತಿರುವುದಿಲ್ಲ. ಕಾಗದದ ಮೇಲೆ ಎಲ್ಲ ಅಂಕಿಅಂಶಗಳನ್ನು ಕೊಡುತ್ತಾರೆ. ನೀವು ಅದನ್ನೇ ನಂಬಿ ಕೆಡಬೇಡಿ. ಅದನ್ನು ನಂಬಿ, ಜನರಿಗೆ ತೊಂದರೆಯಾಗುವುದು ಬೇಡ. ವಾಸ್ತವಿಕವಾದ ಸಂಗತಿಯನ್ನು

ಹೇಳಬೇಕೆಂದರೆ, ಇವತ್ತಿನವರೆಗೂ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಿಲ್ಲ. 15–20 ವರ್ಷಗಳ ಹಿಂದೆ ಬೋರ್‌ವೆಲ್‌ಗಳನ್ನು 250–300 ಅಡಿಗಳಷ್ಟು ಕೊರೆಯುತ್ತಿದ್ದೆವು. ಆದರೆ ಇವತ್ತು ಅಂತರ್ಜಲ ಕಡಿಮೆಯಾಗಿದೆ, ಏಕೆಂದರೆ ನಾವು ಮುಂಗಾರು ಮಳೆಯನ್ನು ನೋಡಲೇ ಇಲ್ಲ. ಹಾಗಾಗಿ, ಈಗ ನಾವು ನೀರಿನ Source ಅನ್ನು ಕೆರೆಯ ಹತ್ತಿರದಲ್ಲೋ ಅಥವಾ ಊರಿಂದ 2–3 ಕಿಲೋಮೀಟರ್ ದೂರದಲ್ಲಿ ಹುಡುಕಬೇಕಾಗಿದೆ. ಊರಿಂದ 2–3 ಕಿಲೋಮೀಟರ್ ದೂರದಲ್ಲಿ ಕೊಳವೆಬಾವಿಗಳನ್ನು ಕೊರೆದಿದ್ದೇವೆ. ಅಲ್ಲಿಂದ ಊರಿಗೆ ನೀರು ತರಬೇಕೆಂದರೆ ನಾಲ್ಕರಿಂದ ಐದು ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಇಲ್ಲಿಯವರೆಗೆ ನಾನು Tackle ಮಾಡಿರುವುದು ಕೇವಲ 52 ಹಳ್ಳಿಗಳು ಮಾತ್ರ. ಆದರೆ ನಾನು Identify ಮಾಡಿರುವುದು 126 ಹಳ್ಳಿಗಳು. ನಾನು ಉಳಿದ ಹಳ್ಳಿಗಳಿಗೆ ಇನ್ನೂ ಹೋಗುವುದಕ್ಕೆ ಆಗಲೇ ಇಲ್ಲ. ಅದು ಇನ್ನೂ ಬರೀ Action Planನಲ್ಲಿಯೇ ಇದೆ. ಇನ್ನೂ ನಾವು ಎಷ್ಟು ದಿನ ಹೀಗೆ ಸುಧಾರಿಸಲು ಆಗುತ್ತದೆ? ಜನ ನೀರಿಲ್ಲದೆ ಎಷ್ಟು ದಿವಸ ಬದುಕುವುದಕ್ಕೆ ಸಾಧ್ಯವಾಗುತ್ತದೆ? ತಾವೇ ಯೋಚನೆ ಮಾಡಿ. ಈ ಸಾರಿ N.D.R.F. ಅಂದರೆ National Water Project ಗಳಿಗೆ ಕೇಂದ್ರ ಸರ್ಕಾರ ಕೊಟ್ಟಿರುವ 850 ಕೋಟಿ ರೂಪಾಯಿಗಳಿದೆ. ಈ 850 ಕೋಟಿ ರೂಪಾಯಿ ಜೊತೆಗೆ Last Year Opening Balance ಇರುತ್ತದೆ. ಅದಕ್ಕೆ Action Planಎಲ್ಲಿ ಆಗಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಆದರೆ ನಾನಂತೂ ಕುಳಿತುಕೊಂಡು ನಮ್ಮಲ್ಲಿಗೆ ಅದನ್ನು Approve ಮಾಡಿಸಿದ್ದೇನೆ. ಅದು Onlineನಲ್ಲಿಯೇ Approve ಆಗಿ ಬರುತ್ತದೆ. ಅದರಲ್ಲಿ ಕೂಡಲೇ ಕೆಲಸ ಮಾಡುವುದಕ್ಕೆ ಒಂದು Time Limit ಕೊಡಿ. 15 ದಿವಸಗಳೊಳಗೆ ಕೆಲಸ ಪ್ರಾರಂಭ ಮಾಡಬೇಕು ಎಂದು ಹೇಳಿ. ಅದಕ್ಕೆ ನೀವು Package ಮಾಡುತ್ತೀರೋ, Tender ಕರೆಯುತ್ತೀರೋ ನಿಮಗೆ ಬಿಟ್ಟದ್ದು Short Term Tender ಕರೆದು ಈ ಕೆಲಸವನ್ನು ಪ್ರಾರಂಭ ಮಾಡಿ. ಅವರಿಗೆ ನಾಲ್ಕು ತಿಂಗಳ ಮೇಲೆ ಸಮಯ ಕೊಡಬೇಡಿ. ಅದಕ್ಕೆ ನಿಮ್ಮ ಹತ್ತಿರ ದುಡ್ಡಿದೆ. ದುಡ್ಡಿರುವಾಗ ಮೂರು ತಿಂಗಳಲ್ಲಿಯೇ ಕೆಲಸ ಮುಗಿಸಿ ಎನ್ನುವ ಆದೇಶವನ್ನು ಕೊಟ್ಟು ಕೆಲಸ ಮಾಡಿದರೆ ಸ್ವಲ್ಪಮಟ್ಟಿಗೆ ಸಮಸ್ಯೆಯನ್ನು ಬಗೆಹರಿಸಬಹುದು. ಇವತ್ತು ಬೆಳೆಗಳ ಪರಿಸ್ಥಿತಿ ಏನಾಗಿದೆ ಎಂದರೆ, ನಮ್ಮಲ್ಲಿ ಒಂದೇ ಬೆಳೆ ಅಂದರೆ Mono Cropping System ಇರುವಂಥ ಸುಮಾರು 70–85 ತಾಲ್ಲೂಕುಗಳಿವೆ. ನಮ್ಮಲ್ಲಿ ಶೇಂಗಾ ಬಿಟ್ಟರೆ ಬೇರೆ ಬೆಳೆ ಬೆಳೆಯುವುದಕ್ಕೆ ಸಾಧ್ಯವೇ ಇಲ್ಲ. ಈ ರೀತಿಯ ಪರಿಸ್ಥಿತಿ ಇರುವಾಗ ಇನ್ನು ಬೇರೆ ಏನು ಬೆಳೆ

ಬೆಳೆಯುವುದಕ್ಕೆ ಸಾಧ್ಯ? ಎಲ್ಲೋ ಕೆಲವು ಕಡೆ ಸ್ವಲ್ಪ ರಾಗಿ ಹಾಕಬಹುದು ಅಥವಾ ಜೋಳ ಹಾಕಬಹುದು. ಅದು ದನಕರುಗಳಿಗೋಸ್ಕರವೇ ಹೊರತು ಅದರಿಂದ ಮನುಷ್ಯರಿಗೆ ಸಹಾಯವಾಗುವುದಿಲ್ಲ. ಮುಂಗಾರು ಸಂಪೂರ್ಣ ವಿಫಲವಾಗಿದೆ. ನಮ್ಮ ರಾಜ್ಯದಲ್ಲಿರುವ 1 ಲಕ್ಷದ 70 ಸಾವಿರ ಹೆಕ್ಟೇರ್‌ನಲ್ಲಿ 70 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಬರಲಿಲ್ಲ. ನಂತರ ಉಳಿಯುವುದು ಹಿಂಗಾರು ಮತ್ತು ಬೇಸಿಗೆ ಬೆಳೆ. ಅದರಲ್ಲಿ ಹಿಂಗಾರು ಬಹಳ ಕಡಿಮೆ. ಬೇಸಿಗೆ ಬೆಳೆ 28ರಿಂದ 30 ಹೆಕ್ಟೇರ್‌ನಲ್ಲಿ ಸಿಗುತ್ತದೆ ಅಷ್ಟೇ. ಇದೇ ರೀತಿಯಾಗಿ ಮಳೆಯ ಪರಿಸ್ಥಿತಿ ಮುಂದುವರೆದರೆ, ಬೇಸಿಗೆ ಬೆಳೆಯೂ ಇಲ್ಲ, ಹಿಂಗಾರು ಬೆಳೆಯೂ ಇಲ್ಲ. ಸರ್ಕಾರ Anticipate ಮಾಡಬೇಕಾಗಿರುವುದು ಏನೆಂದರೆ, ಮುಂಗಾರು ವಿಫಲವಾಯಿತು. ಹಿಂಗಾರು ಏನಾಗಬಹುದು ಅಥವಾ ಬೇಸಿಗೆ ಬೆಳೆ ಏನಾಗಬಹುದು ಎನ್ನುವದನ್ನು ಯೋಚಿಸಿ, ನೀವು ಕ್ರಿಯಾ ಯೋಜನೆಯನ್ನು ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೀರೋ ಅಥವಾ ನೀವೇ ಮಾಡುತ್ತೀರೋ, ಒಟ್ಟಿನಲ್ಲಿ ಅದನ್ನು ಮಾಡಬೇಕಾಗಿರುವ ಧರ್ಮ ನಿಮ್ಮದು. ಅದು ಆಗುತ್ತಿಲ್ಲ. ನಾನು ಮತ್ತೆ ಮತ್ತೆ ಹೇಳಬೇಕಾಗಿಲ್ಲ. ಈಶ್ವರಪ್ಪನವರೇ, ನಾನು ನಿಮಗೆ ದಯಮಾಡಿ ಒಂದು ವಿಷಯವನ್ನು ಹೇಳುತ್ತೇನೆ, ಇವತ್ತು ನೀವು ಉಪ ಮುಖ್ಯಮಂತ್ರಿಗಳಾಗಿದ್ದೀರಿ. ಉಪ ಮುಖ್ಯಮಂತ್ರಿ ಎಂದರೆ ಅದು ರಾಜಕೀಯವಾಗಿ ಕೊಟ್ಟಿರುವಂಥ ಲೇಪನವಷ್ಟೇ. ನಮ್ಮ ಸಂವಿಧಾನದಲ್ಲಿ ಉಪಮುಖ್ಯಮಂತ್ರಿ ಎನ್ನುವ ಹುದ್ದೆಯಿಲ್ಲ. ರಾಜಕೀಯವಾದಂಥ ಕಾರಣಗಳಿಗೋಸ್ಕರ ಅದನ್ನು ಮಾಡಿಕೊಳ್ಳುತ್ತಾರೆ. ಅಂದರೆ, ನಿಮ್ಮಲ್ಲಿ Seniority establish ಮಾಡುವುದಕ್ಕೋಸ್ಕರ ಅದನ್ನು ಮಾಡಿದ್ದು, ಸಂವಿಧಾನವನ್ನೇ ತಿರುಚತಕ್ಕಂಥ ಕೆಲಸ ಇವತ್ತು ಆಗುತ್ತಿದೆ. ಅದು ಆ ಪಕ್ಷ, ಈ ಪಕ್ಷ ಎಂದು ಅಲ್ಲ, ಎಲ್ಲ ಪಕ್ಷಕ್ಕೂ ಅದು ಸೀಮಿತವಾಗಿದೆ. ಇವತ್ತು ನೀವು ಕ್ಯಾಬಿನೆಟ್ ಸಚಿವರಾಗಿದ್ದೀರಿ, ಹಿರಿಯ ಸಚಿವರಾಗಿದ್ದೀರಿ. ಹಿರಿಯರು ಎಂದು ಹೇಳುವ ಬದಲು ಉಪಮುಖ್ಯಮಂತ್ರಿ ಎಂದು ಕರೆಯುತ್ತಾರೆ. ನೀವು ದಯಮಾಡಿ ನಿಮ್ಮ ಅಧ್ಯಕ್ಷತೆಯಲ್ಲಿ ಒಂದು ಸಮೀತಿಯನ್ನು ಮಾಡಿ. ಗ್ರಾಮೀಣಾಭಿವೃದ್ಧಿ ಇಲಾಖೆ ನಿಮ್ಮ ಹತ್ತಿರವೇ ಇದೆ, ಕಂದಾಯವೂ ನಿಮ್ಮ ಬಳಿಯೇ ಇದೆ. ಹೀಗಿರುವಾಗ ನೀವು ಸಣ್ಣ ನೀರಾವರಿ ಮತ್ತು ಇನ್ನಿತರ ಬೇರೆ ಬೇರೆ ಇಲಾಖೆಯವರನ್ನು ಸೇರಿಸಿಕೊಂಡು, ಸಚಿವ ಸಂಪುಟದ ಒಂದು ಉಪ ಸಮಿತಿಯನ್ನು ಮಾಡಿ, ಅದರ ಅಧಿಕಾರವನ್ನು ನೀವು ತೆಗೆದುಕೊಳ್ಳಿ. ನಮ್ಮ ಪಕ್ಷ ಅಧಿಕಾರಿದಲ್ಲಿದ್ದಾಗ, ಒಳ್ಳೆಯ ಬೆಳೆ ಆದಂಥ ಸಂದರ್ಭದಲ್ಲೂ ನಾನು ಕೃಷಿ ಸಚಿವನಾಗಿದ್ದೆ, ಬರಗಾಲ ಬಂದಂಥ ಸಂದರ್ಭದಲ್ಲೂ ಕೃಷಿ ಸಚಿವನಾಗಿದ್ದೆ. ಆದರೆ, ನಮಗೂ ನಿಮಗೂ

ವ್ಯತ್ಯಾಸವೇನೆಂದರೆ, ಆಡಳಿತಾತ್ಮಕವಾಗಿ ಏನಾಯಿತೆಂಬ ಬಗ್ಗೆ ಕಡತ ತರಿಸಿ ನೋಡಿ. ನಾನು Cabinet Sub Committee Chairmanಆಗಿದ್ದಾಗ, I had all the powers to release the money. ಈಗ ಹಣಕಾಸು ಮಂತ್ರಿಗಳು ಯಾವತ್ತೂ ನಿಮಗೆ ಕೊಡುವುದಿಲ್ಲ. ಈಗ ಈಶ್ವರಪ್ಪನವರಿಗೆ ಜಗದೀಶ್ ಶೆಟ್ಟರ್‌ರವರು ಕೊಡಬಹುದು. ಹಣಕಾಸು ಬಿಡುಗಡೆ ಮಾಡುವ ಅಧಿಕಾರವನ್ನು ನೀವು ಪಡೆದು ತತ್‌ಕ್ಷಣ ಕ್ರಮ ತೆಗೆದುಕೊಳ್ಳುವ ಕೆಲಸ ಮಾಡಿದರೆ ಉಪ ಸಮಿತಿಯ ಮೂಲಕ ರಾಜ್ಯದ ಜನರಿಗೆ ನೇರವಾಗಿ ಸ್ಪಂದಿಸುವ ಅವಕಾಶ ಆಗುತ್ತದೆ. ದಯವಿಟ್ಟು ಈ ರೀತಿಯಾದ ಆಡಳಿತಾತ್ಮಕವಾಗಿರುವ ವಿಚಾರದಲ್ಲಿ ನೀವು ಗಮನಹರಿಸುವ ಕೆಲಸವನ್ನು ಮೊದಲು ಮಾಡಬೇಕು. ಅದನ್ನು ಮಾಡಿದಾಗ ಮಾತ್ರ ಇದು ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲ. ಹಿಂದಿನ ಅಧಿವೇಶನದಲ್ಲಿ ನಿಮ್ಮ ಕಳಕಳಿ ಏನಿತ್ತು? ನೀವು ಹಿಂದೆ ಗೋಹತ್ಯೆಯ ನಿಷೇಧದ ಕಾನೂನಿಗೆ ಹೋರಾಟ, ಹಾರಾಟ ಮಾಡಿದಿರಿ. ಹೌದು. ಗೋ ಹತ್ಯೆ ನಿಷೇಧದ ಕಾನೂನನ್ನು ಕಳುಹಿಸಬೇಕಾದಾಗ ನೀವು ಆಡಿದಂಥ ಮಾತುಗಳೇನು? ಗೋ ಸಂಪತ್ತಿನ ರಕ್ಷಣೆ ಮಾಡಬೇಕು ಎಂದು ಎಲ್ಲಾ ಸ್ವಾಮೀಜಿಗಳೂ ಮಸೂದೆಗೋಸ್ಕರ ಬೀದಿಗೆ ಬಂದರು. ಇವತ್ತು ಎಲ್ಲ ಕಸಾಯಿಖಾನೆಗೆ ಹೋಗುತ್ತಿವೆಯಲ್ಲ, ಇವತ್ತು ಎಲ್ಲಿ ಹೋಯಿತು ನಿಮ್ಮ ವೀರ ಪೌರುಷ? ಆ ಕಾನೂನೇಕೆ ಇವತ್ತು ಮರೆತು ಹೋಯಿತು? ಈಗೇನಾದರೂ ನೀವು ಹಳ್ಳಿಗಳಿಗೆ ಹೋದಾಗ ಆ ಗೋ ಹತ್ಯೆ ನಿಷೇಧದ ಕಾನೂನು ಬಗ್ಗೆ ಮಾಡನಾಡಿ. ಜನರ ಪ್ರತಿಕ್ರಿಯೆ ಏನಿರುತ್ತದೆಂಬುದನ್ನುನೋಡಿ. ಅವತ್ತೇನೋ ನೀವು ರಾಜಕಾರಣ–ಕ್ಕೋಸ್ಕರ ಮಾಡಿರಬಹುದು. ಆದರೆ, ಇವತ್ತೇನಾಗಿದೆ? ನಿಜವಾದ ನಿಮ್ಮ ಬಣ ಇವತ್ತು ಬಯಲಾಗಲು ಅವಕಾಶವಾಗಿದೆ. ಗೋವನ್ನು ರಕ್ಷಣೆ ಮಾಡತಕ್ಕಂಥ ಕೆಲಸವಾಗಬೇಕಾಗಿದೆ. ವಾಸ್ತವಿಕ ಸಂಗತಿ ಹೇಳುತ್ತೇನೆ. ನನ್ನ ಕ್ಷೇತ್ರ ಆಂಧ್ರಪ್ರದೇಶಕ್ಕೆ 12 ಕಿ.ಮೀ. ದೂರದಲ್ಲಿದೆ. 12 ಕಿ.ಮೀ. ದೂರವಿರುವುದರಲ್ಲಿ ಆಂಧ್ರಪ್ರದೇಶದಲ್ಲಿ ಒಂದು ಕಸಾಯಿಖಾನೆ ಇದೆ. ನೋಡೋಣವೆಂದು ನಾನು ಗುಡಿಬಂಡೆಗೆ ಹೋಗಿದ್ದೆ. ಕೋಲಾರದ ಗುಡಿಬಂಡೆಯಲ್ಲಿ, ಆ ರಾಜ್ಯದಲ್ಲೊಂದು ಗುಡಿಬಂಡೆ ಎನ್ನುವ ಸ್ಥಳವಿದೆ. ಒಂದು ದಿನಕ್ಕೆ ಒಂದು, ಎರಡು ಗೋವುಗಳು ಕಸಾಯಿಖಾನೆಗೆ ಹೋಗುತ್ತಿದ್ದದ್ದು ಇವತ್ತು 40–50 ಹೋಗುತ್ತಿವೆ, ಅದೂ ಕೂಡ ಸಂಪೂರ್ಣವಾಗಿ ಕರ್ನಾಟಕದಿಂದಲೇ ಹೋಗುತ್ತಿವೆ. ಕಾರಣವೇನಂದರೆ, ಯಾವುದೇ ರೀತಿಯಲ್ಲೂ ಕೂಡ ಗೋವುಗಳು ತಮ್ಮ ಕಣ್ಣ ಮುಂದೆ ಸಾಯುವುದನ್ನು ನೋಡುವುದಕ್ಕೆ ರೈತರು ತಯಾರಿಲ್ಲ. ಏನಾದರಾಗಲಿ ನಮ್ಮ ಮುಂದೆ ಅವು ಸಾಯುವುದು ಬೇಡ, ಎಂಥದ್ದಾದರೂ ಆಗಲಿ ಎಂದು ಹೇಳಿ

ಅವುಗಳನ್ನು ಕಸಾಯಿಖಾನೆಗೆ ನಿರಂತರವಾಗಿ ಕಳುಹಿಸತಕ್ಕಂಥ ಪ್ರಕ್ರಿಯೆ ನಡೆಯುತ್ತಿದೆ. ನಾನು ಒಂದು ಗೋಶಾಲೆ ತೆರೆದೆ. ನಾನು ಐದೂವರೆ ತಿಂಗಳು ಅಲ್ಲಿ ಎರಡು ಗೋ ಶಾಲೆ ನಡೆಸಿದೆ. ನಾಳೆ ಬನ್ನಿ ನಾನು ಅಲ್ಲಿಗೆ ಕರೆದುಕೊಂಡು ಹೋಗುತ್ತೇನೆ. ಕೊನೆಗೆ ಐದೂವರೆ ತಿಂಗಳು ನಡೆಸಿ, ಮೊನ್ನೆ ಮಳೆ ಬಂತು ಎಂದು ನಿಲ್ಲಿಸಿದೆ. ಇದರಿಂದ ಜನರ ಹಾಹಾಕಾರ ನೋಡಲಿಕ್ಕಾಗಲಿಲ್ಲ. ಎಲ್ಲೂ ಇಲ್ಲದಿರುವ ಪ್ರಾಣಿ ಸಂಪತ್ತು, ಗೋ ಸಂಪತ್ತು ಇರಬಹುದು, ಕುರಿ ಇರಬಹುದು, ಬಹುಶಃ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹೆಚ್ಚು ಕುರಿಗಳು ಇರುವುದು ಸಿರಾದಲ್ಲಿ. ಇವತ್ತು ಹೆಚ್ಚು ಗೋವು ಸಂಪತ್ತಿರುವುದು ನಮ್ಮಲ್ಲಿ. ಕೋಲಾರ ಮತ್ತು ಬೆಂಗಳೂರು ಸೇರಿ ದಿವಸಕ್ಕೆ 12 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತದೆಂದು ಬಚ್ಚೇಗೌಡರು ಹೇಳುತ್ತಿದ್ದರು. ತುಮಕೂರಿನವರು ನಾವು ಕೋಲಾರದವರಿಂದ ನೋಡಿ ಕಲಿತು ಇವತ್ತು ಅವರನ್ನು ಮೀರಿಸುತ್ತಿದ್ದೇವೆ. ಇವತ್ತು ನಾವು 9 ರಿಂದ 10 ಲಕ್ಷ ಲೀಟರ್‌ಗೂ ಹೆಚ್ಚು ಹಾಲು ಉತ್ಪಾದನೆಗೆ ತಲುಪಿದ್ದೇವೆ. ಜನರಿಗೆ ಇದೊಂದು ಉಪ ಕಸುಬಾಗಿದೆ. ಜನರ ಜೀವನ ಇವತ್ತೇನಾದರೂ ನಡೆಯುತ್ತಿದೆ ಎಂದರೆ, ಆ ಕಾರಣಕ್ಕೋಸ್ಕರ. ಇವತ್ತು ನಮ್ಮಲ್ಲಿ ಆ ಸಂಪತ್ತಿದೆ. ಆ ಸಂಪತ್ತಿದ್ದಾಗ್ಯೂ ಕೂಡ ತಾವು ಹೇಳುವ ರೀತಿಯಲ್ಲಿ ಮೇವು ಕೊಡುವುದಕ್ಕಾಗುತ್ತಿಲ್ಲ. ಮೇವಿಗೋಸ್ಕರ ಪರಿಪರಿಯಾಗಿ ಇವತ್ತೆಲ್ಲರೂ ಕೇಳಿಕೊಂಡೆವು. ಆದರೆ, ಇದು ಯಾರಿಗೂ ಅರ್ಥವಾಗಲಿಲ್ಲ. ಕೊನೆಗೆ, ನಾನು ಮೇವನ್ನು ಆಂಧ್ರಪ್ರದೇಶದಿಂದ ತರಿಸುತ್ತಿದ್ದೇನಿ. ಒಂದು ಲಾರಿಯಲ್ಲಿ ಮೂರೂವರೆ, ನಾಲ್ಕು ಟನ್ ಮೇವು ಬರುತ್ತದೆ. ಮೂರುವರೆಯಿಂದ ನಾಲ್ಕು ಟನ್ ಇರುವಂಥ ಒಂದು ಲೋಡ್‌ಗೆ 35 ರಿಂದ 40 ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಅಂದರೆ, ಒಂದು ಟನ್‌ಗೆ 10 ಸಾವಿರ ರೂಪಾಯಿ ಆಗುತ್ತದೆ. ನೆಲ್ಲುಹುಲ್ಲು ಕೂಡ 10 ಸಾವಿರ ರೂಪಾಯಿಗಳಿಗಿಂತ ಕಡಿಮೆಗೆ ಸಿಗುತ್ತಿಲ್ಲ. ಶಿವಮೊಗ್ಗಕ್ಕೂ ಕೂಡ ಕಳುಹಿಸಿದ್ದೆವು. ಅಲ್ಲೂ ಕೂಡ ನಮಗೆ ಸಿಗಲಿಲ್ಲ. ಕೊನೆಗೆ ನಿನ್ನೆ ಟಿ.ನರಸೀಪುರದಿಂದ ಮೂರು ಲೋಡ್ ಮೇವು ತರಿಸಿದ್ದೇನೆ. ಪ್ರತಿನಿತ್ಯ ನಾನು ಮಾನಿಟರ್ ಮಾಡಿ ಮೇವು ತರಿಸಿ ದನಗಳನ್ನು ಸಾಕುತ್ತಿದ್ದೇನೆ. ಪಟ್ಟನಾಯಕನಹಳ್ಳಿಗೆ ನೀವು ನಾಳೆ ಬರುತ್ತಿದ್ದೀರಿ. ಇವತ್ತು ಅಲ್ಲಿ ಮೂರು ಸಾವಿರಕ್ಕೂ ಹೆಚ್ಚು ದನಗಳು ಬಂದಿವೆ. ಮಳೆ ಬರುವ ವಾತಾವರಣ ಕಾಣುತ್ತಿದೆ ಆದರೆ ಮಳೆ ಬರುತ್ತಿಲ್ಲ. ಏನು ಮಾಡುತ್ತಾರೆ? ಅಲ್ಲಿಗೆ ಬಂದಿರುವ ಗೋಪಾಲಕರು ಸುಮಾರು ಒಂದು ಸಾವಿರ ಜನರಿದ್ದಾರೆ. ಅವರಿಗೂ ಊಟ ಕೊಡುವ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಇದನ್ನೆಲ್ಲ ಸರ್ಕಾರ ಏಕೆ ಮಾಡಬಾರದಾಗಿತ್ತು? ಇದು ವಾಸ್ತವಿಕವಾಗಿರುವ ಸಂಗತಿ. ಅದನ್ನು ಅರ್ಥ

ಮಾಡಿಕೊಳ್ಳಿ. ಈಗ ಮೇವು ಕೊಡುವ ಪ್ರಶ್ನೆ ಬರುತ್ತದೆ. ನಾವು ಕೊಡತಕ್ಕಂಥದ್ದು 5 ಕೆ.ಜಿ. ಮೇವು. ಇದನ್ನು ತೂಕ ಹಾಕಿ ಕೊಡುತ್ತೇವೆ. ಆದರೆ 5 ಕೆ.ಜಿ. ಸಾಕಾಗುವುದಿಲ್ಲ. 10 ಕೆ.ಜಿ. ಮೇವು ಕೊಡಿ ಎಂದು ರೈತರು ಹೇಳುತ್ತಾರೆ, ಆದರೆ ಅಷ್ಟು ಕೊಡುವುದಕ್ಕೆ ಆಗುತ್ತಿಲ್ಲ. 10 ಕೆ.ಜಿ.ಯಷ್ಟು ಕೊಡೋಣವೆಂದರೆ ಇವತ್ತು ಮೇವು ಸಿಗುತ್ತಿಲ್ಲ. ಇದಕ್ಕೆ ಏನು Plan ಮಾಡುತ್ತೀರೋ ಗೊತ್ತಿಲ್ಲ. ಇಡೀ ಕರ್ನಾಟಕದಲ್ಲಿ Irrigation area ದಲ್ಲಿ ಬಿಟ್ಟರೆ ಇನ್ನು ಎಲ್ಲೂ ಕೂಡ ಮೇವು ಇಲ್ಲ. Irrigation area ಯಾವ್ಯಾವುದು ಎಂದರೆ, ಶಿವಮೊಗ್ಗ ಮತ್ತು ಬೆಳಗಾಂ. ಬೆಳಗಾಂನಲ್ಲಿ ಏನೂ ತೊಂದರೆ ಇಲ್ಲ. ಕೃಷಿ ಮಂತ್ರಿಯವರು ಆ ಕಡೆಯವರಾಗಿರುವುದರಿಂದ ಅವರಿಗೆ ಮೇವಿನ ತೊಂದರೆ ಏನೂ ಗೊತ್ತಿಲ್ಲ. ನಿಮಗೂ ಕಷ್ಟ ಗೊತ್ತಾಗುವುದಿಲ್ಲ. ಆದರೆ, ಬಯಲು ಪ್ರದೇಶದಲ್ಲಿರುವ ಜಾನುವಾರುಗಳ ಸಲುವಾಗಿ ಮೇವನ್ನು ತರಿಸುವ ಕೆಲಸವನ್ನು ಯಾವುದೇ ರೀತಿಯಲ್ಲಾದರೂ ಮಾಡಬೇಕು. ಇನ್ನು, ಹೊಸದಾಗಿ ಒಂದು Government Order ಆಗಿದೆ. 13ನೇ ಹಣಕಾಸಿನ ಆಯೋಗದಲ್ಲಿ 16th January 2012ರಲ್ಲಿ Revision of items and norms of assistance from the State Disaster Relief Fund (SDRF) and National Disaster Relief Fund ಎಂದು ಒಂದು ಆದೇಶವನ್ನು ಮಾಡಿದ್ದೀರಿ. ಅದರ ಪ್ರಕಾರ ಈ ಆದೇಶಕ್ಕೆ ನೀವು ಬದ್ಧರು. ಈ ಆದೇಶದಲ್ಲಿ ಏನಿದೆ ಎಂದರೆ, ನಿಮಗೆ ಏನೂ ಸಿಗದಿದ್ದಂಥ ಸಂದರ್ಭದಲ್ಲಿ ಬೂಸವನ್ನಾದರೂ ಕೊಡುವುದಕ್ಕೆ ಅವಕಾಶವಿದೆ. ಬೂಸಾ ಎಂದರೆ, Provision for fodder-Feed concentrate in cattle camps – Large animals up to 32 per day, small animals 16 per day. ಇದನ್ನು ನೀವು ಕೊಡುವುದಕ್ಕೆ ಅವಕಾಶವಿದ್ದಾಗ ಇಲ್ಲಿಯವರೆಗೆ ನಿಮ್ಮ ಯಾರಾದರೂ Deputy Commissioners cattle feed ಅನ್ನು ತರಿಸಿಕೊಡುವುದಕ್ಕೆ ತೊಂದರೆ ಏನಾಗಿತ್ತು? ಮೇವು ಸಿಗುವುದಿಲ್ಲ, ಸರಿ, cattle feed ತರುವುದಕ್ಕೆ ನಿಮಗೆ ಕಷ್ಟವಾಗಿತ್ತು? ಬೆಳಗ್ಗೆ ಎದ್ದರೆ ಗುಜರಾತ್‌ಗೆ ಹೋಗುತ್ತೀರಲ್ಲಾ ಮೋದಿಯವರನ್ನು ನೋಡುವುದಕ್ಕೆ, ಅಲ್ಲಿಂದ ಏಕೆ cattle feed ಅನ್ನು ತರಿಸಬಾರದು? ಮಾನ್ಯ ಈಶ್ವರಪ್ಪನವರೆ, ಡಾ: ಅಬ್ದುಲ್ ಕಲಾಂರವರು ಗುಜರಾತ್‌ಗೆ ಹೋಗಿ ಏನು ಹೇಳಿದ್ದಾರೆಂದರೆ, ಇಡೀ ಇಂಡಿಯಾದಲ್ಲಿಯೇ GDP Growth ಗುಜರಾತ್‌ನಲ್ಲಿ 9% ಕರ್ನಾಟಕದಲ್ಲಿ 3% ಇದೆ. ಗುಜರಾತ್ ತರಹ ಇಡೀ ದೇಶದಲ್ಲಿ ಆಗಬೇಕೆಂದು ಡಾ: ಅಬ್ದುಲ್ ಕಲಾಂರವರು ಹೇಳಿದ್ದಾರೆ. ಆ ರಾಜ್ಯದವರು ನಮಗಿಂತ ಕಷ್ಟದಲಿರುವಂಥವರು.

ಆದರೂ ಕೂಡ ಈ ಸಾಧನೆಯನ್ನು ಮಾಡಿದ್ದಾರೆ ಕಳೆದ 10 ವರ್ಷಗಳಲ್ಲಿ ಮಾಡಿರತಕ್ಕಂಥ ಕೆಳಸಗಳಿಂದಾಗಿ ಅವರು ಇದನ್ನು ಮಾಡುವುದಕ್ಕೆ ಸಾಧ್ಯವಾಗಿದೆ. ಅಂದರೆ, It is a Policy. ಸರ್ಕಾರದವರು ನೀವು ಯಾವ ರೀತಿಯಾಗಿ ತೀರ್ಮಾನ ತೆಗೆದುಕೊಳ್ಳುತ್ತೀರಿ ಎನ್ನುವಂಥದ್ದು ಬಹಳ ಮುಖ್ಯ. ಇವತ್ತು ಅಲ್ಲಿಂದಲೇ cattle feed ಅನ್ನು ತರಿಸಿ ಕೊಡಿಸಿ ದನಗಳನ್ನು ರಕ್ಷಣೆ ಮಾಡುವ ಕೆಲಸವನ್ನು ಮಾಡಿ. 13ನೇ ಹಣಕಾಸಿನಲ್ಲಿ ಏನೋ ಈ ಆದೇಶಕ್ಕೆ ಒಪ್ಪಿಕೊಂಡಿದ್ದೀರಿ. ಅವಕಾಶವಿದೆ, ಕೊಡುವುದಕ್ಕೆ ಏನು ತೊಂದರೆಯಾಗಿದೆ? ದಯಮಾಡಿ ಇದರ ಬಗ್ಗೆ ಯೋಚನೆ ಮಾಡಿ. ನೀವು Cabinet Sub Committee ಯಲ್ಲಿ ಕುಳಿತು ಇವನ್ನೆಲ್ಲ ಚರ್ಚೆ ಮಾಡಬಹುದು, ಇಲ್ಲವೆಂದರೆ ಎಲ್ಲಿ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಈ ವರ್ಷ ಭರಣಿ ಮಳೆ ಬರುತ್ತದೆ ಎಂದು ನಂಬಿ 20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಿದರು. ಆದರೆ, ಜನರು ಕೆಟ್ಟರು. 20 ಲಕ್ಷ ಹೆಕ್ಟೇರ್‌ಗೆ Crop Insurance ಮಾಡಬೇಕು. Crop Insurance ಮಾಡುವ ಅವಕಾಶವನ್ನು 15–20 ದಿವಸಗಳವರೆಗೆ extend ಮಾಡಿದಿರಿ. ಇನ್ನೂ ಮಳೆ ಬರುತ್ತದೆ ಬರುತ್ತದೆ ಎಂದು ಮಾನ್ಯ ಶರದ್ ಪವಾರ್‌ರವರು ಹೇಳುತ್ತಿದ್ದಾರೆ. ಅವರು ಈ ತಿಂಗಳಲ್ಲಿ ಮಳೆ ಬರುತ್ತದೆ ಎಂದು ಹೇಳಿದವರು ಈಗ ಆಗಸ್ಟ್ ತಿಂಗಳಲ್ಲಿ ಮಳೆ ಬರುತ್ತದೆಂದು ಹೇಳುತ್ತಿದ್ದಾರೆ. ಆಕಸ್ಮಾತ್ ಏನಾದರೂ ಮಳೆ ಬಂದರೆ ಇನ್ನೂ ಕೂಡ ರೈತರು ಬಿತ್ತನೆ ಮಾಡುವುದಕ್ಕೆ ತಯಾರಿದ್ದಾರೆ. ಬೆಳೆ ಬೆಳೆದೇ ಬೆಳೆಯುತ್ತಾರೆ. ಬೆಳೆ ಬೆಳೆಯುವಾಗ ಅವರು ನಿಮ್ಮನೂ ಕೇಳುವುದಿಲ್ಲ ನಮ್ಮನ್ನೂ ಕೇಳವುದಿಲ್ಲ, ಬಿತ್ತನೆ ಮಾಡುತ್ತಾರೆ. ಏಕೆಂದರೆ, ರೈತನೇ ಒಬ್ಬ ದೊಡ್ಡ ವಿಜ್ಞಾನಿ. ಯಾವ ಸಂದರ್ಭದಲ್ಲಿ ಯಾವ ಮಳೆ ಬಂದಾಗ ಯಾವ ಬೆಳೆ ಬೆಳೆಯಬಹುದೆಂಬ ಬಗ್ಗೆ ಅನವಿಗಿಂತ ಹೆಚ್ಚಿನ ಪರಿಣಿತಿ ನಮ್ಮ ಇಲಾಖೆಗೆ ಇದೆಯೆಂದರೆ ನಾನು ಒಪ್ಪುವುದಿಲ್ಲ. ಈ ಕೃಷಿ ಇಲಾಖೆ ನಾಮ್ ಕೆ ವಾಸ್ತೆ ಇರುವಂಥದ್ದು. ಕೃಷಿ ಇಲಾಖಾಯಿಂದಲೇ problem, ಕೃಷಿ ಇಲಾಖಾಯನ್ನೇ ವಜಾ ಮಾಡಿದರೆ ಬಹಳ ಚೆನ್ನಾಗಿ ಇರುತ್ತಿತ್ತೋ ಏನೋ ಎಂದು ನಾನು ಕೃಷಿ ಮಂತ್ರಿಯಾಗಿ ಹೇಳುತ್ತಿದ್ದೆ. ಆದ್ದರಿಂದ ರೈತರು ಬುದ್ಧಿವಂತರಿದ್ದಾರೆ, ಬೆಳೆ ಬೆಳೆಯುವುದಕ್ಕೆ ಬಿತ್ತನೆ ಮಾಡುತ್ತಾರೆ. ಒಂದೇ ಒಂದು ಕೆಲಸ ಮಾಡಬೇಕಾಗಿರುವುದೇನೆಂದರೆ, Crop Insurance ಮಾಡಿಸುವುದನ್ನು ಕೊನೆಯ ಪಕ್ಷ ಈ Month End ವರೆಗಾದರೂ ಅಂದರೆ ಇನ್ನು 10 ದಿವಸಗಳಾದರೂ ಮುಂದಕ್ಕೆ ಹಾಕಿಸುವಂಥದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಕಳೆದ ವರ್ಷ Crop

Insurance ಮಾಡಿದರು. ಸಂಪೂರ್ಣವಾಗಿ 123 ತಾಲ್ಲೂಕುಗಳು ಬರಗಾಲಕ್ಕೆ ತುತ್ತಾದವು. ಬೆಳೆ ಬರಲಿಲ್ಲ. ಬೆಳೆ ಬರದಾಗ್ಯೂ ಕೂಡ Insurance declare ಆದರೂ ಕೂಡ ಇವತ್ತಿನವರೆಗೂ ಬಿಡುಗಡೆಯಾಗಿಲ್ಲ. ಬಿಡುಗಡೆಯಾಗಿದ್ದರೆ ರೈತರಿಗೆ ಸಹಾಯವಾಗುತ್ತಿರಲಿಲ್ಲವೇ? ರಾಜ್ಯ ಸರ್ಕಾರ ತನ್ನ ಪಾಲೇನಿತ್ತು ಆ ಪಾಲನ್ನು ತುಂಬುವುದರಲ್ಲಿ ವಿಫಲವಾಗಿರುವ ಹಿನ್ನೆಲೆಯಲ್ಲಿ ಇವತ್ತು Insurance Company ಯವರು ಹಣವನ್ನು ಬಿಡುಗಡೆ ಮಾಡುತ್ತಿಲ್ಲ. ಅವತ್ತು ಮುತ ಕ್ಷೇತ್ರಕ್ಕೆ ನಮ್ಮ ಜಿಲ್ಲೆಗೆ ಸುಮಾರು 10 ಕೋಟಿ ರೂಪಾಯಿ ಬರುತ್ತದೆ. Declare ಆಗಿದೆ. ಆದರೆ, ರಾಜ್ಯ ಸರ್ಕಾರ ಕಳೆದ ವರ್ಷದ ತನ್ನ ಪಾಲನ್ನು ತುಂಬದೇ ಇದ್ದಾಗ ಹಣ ಹೇಗೆ ಬಿಡುಗಡೆಯಾಗುತ್ತದೆ? ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿದ್ದೀರಿ. ಏನು ಮಾಡೋಣ? ಪತ್ರಿಕೆಯಲ್ಲಿ ಬರೆಯುತ್ತಾರೆಂದು ಜನ ಓದಿಕೊಳ್ಳಬೇಕು. ಹಳ್ಳಿಯಲ್ಲಿ ನಿಜಾಂಶವೇನೆಂಬುದು ಗೊತ್ತಾಗುತ್ತದೆ. ನಮ್ಮ Insurance ಹಣವನ್ನು ಕಟ್ಟುವುದಕ್ಕೆ ಈ ಸರ್ಕಾರದಲ್ಲಿ ಹಣ ಇದೆಯೇ, ಸರ್ಕಾರ ಇದೆಯೇ ಎಂದು ಅಲ್ಲಿ ಮಾತನಾಡುತ್ತಾರೆ. ಅದಾಗಬಾರದು. ಕಳೆದ ವರ್ಷದ ರಾಜ್ಯದ ಪಾಲೇನಿದೆ, ಆ ಪಾಲಿನ Insurance ಹಣವನ್ನು ಕಟ್ಟಿ ಬಿಡುಗಡೆ ಮಾಡಿಕೊಡಿಸುವ ಕೆಲಸ ಮಾಡಿ. ಈ ವರ್ಷಕ್ಕೆ ನೀವು Insurance date extend ಮಾಡಿ. ನೀವು ಹೊರಡಿಸಿರುವ ಆದೇಶವನ್ನು ನಾನು ಮೊನ್ನೆ ನೋಡಿದೆ. Loanee Farmers ಗೆ ಮಾತ್ರ extend ಮಾಡಿದ್ದಾರೆ, Non-Loanee Farmersಗೆ extend ಮಾಡಿಲ್ಲ. ಏಕೆ? ಸಾಲ ತೆಗೆದುಕೊಂಡವರಿಗೆ ಮಾತ್ರ ಅವಕಾಶ. ಸಾಲ ಯಾರಿಗೆ ಸಿಗುತ್ತದೆ? ಯಾರಿಗೆ ಶಕ್ತಿ ಇರುತ್ತದೆಯೋ, ಯಾವ ಜಾತಿಗೆ ಶಕ್ತಿ ಇರುತ್ತದೆಯೋ ಅವರಿಗೆ ಮಾತ್ರ ಸಿಗುತ್ತದೆ. ಎಲ್ಲರಿಗೂ ಎಲ್ಲಿ ಸಿಗುತ್ತದೆ? ಜನ ಸಾಮಾನ್ಯರಿಗೆ ಸಾಲ ಸಿಗುವ ಮಟ್ಟಕ್ಕೆ ಇವತ್ತು ನಮ್ಮಲ್ಲಿಲ್ಲ. ಇವತ್ತು ಸಹಕಾರಿ ಕ್ಷೇತ್ರ ಎನ್ನುವುದು ಸಹಕಾರ ಮನೋಭಾವ ಇಲ್ಲದಿರುವ ಕ್ಷೇತ್ರವಾಗಿರುವ ಹಿನ್ನೆಲೆಯಲ್ಲಿ ದಯವಿಟ್ಟು ನೀವು ಆ ಕ್ಷೇತ್ರಕ್ಕೆ, Loanee and Non-Loanee Farmers ಗೆ Insurance ಅನ್ನು extend ಮಾಡುವ ಅವಕಾಶ ಮಾಡಿ. ಇದಕ್ಕೋಸ್ಕರ ಕೇಂದ್ರ ಸರ್ಕಾರ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದ ಮುಂದೆ ಹೋಗಿ ಹಠ ಹಿಡಿದು ಮಾಡಿಸುವ ಕೆಲಸ ಮಾಡಿ. ನನಗೂ ಕೂಡ ಇಂಥದ್ದೇ ಒಂದು ಸಂದರ್ಭ ಬಂದಾಗ ನಿತೀಶ್‌ಕುಮಾರ್‌ರವರು ಕೇಂದ್ರದ ಕೃಷಿ ಸಚಿವರಾಗಿದ್ದಾಗ ಯಾವ ರಾಜ್ಯಕ್ಕಿಲ್ಲದಿದ್ದರೂ ಕೂಡ ನಮ್ಮ ಜಿಲ್ಲೆಗೆ ಮಾಡಿಕೊಂಡು ಬಂದೆವು. ಅವರು ಒಂದು ತಿಂಗಳು extend ಮಾಡಿದರು. ಕಳೆದ ತಿಂಗಳು Lapse ಆಗಿದೆ, 20

ದಿವಸದವರೆಗೆ extend ಮಾಡಿ. ಅಂದರೆ ಇವತ್ತು Last Date ಇನ್ನು 10 ದಿವಸಗಳವರೆಗೆ ಮುಂದಕ್ಕೆ ಹಾಕುವ ಕೆಲಸ ಮಾಡಿದರೆ ಅಲ್ಪಸ್ವಲ್ಪ ಏನಾದರೂ ಮಳೆ ಬಂದರೆ ಪ್ರಯೋಜನವಾಗುತ್ತದೆ ಎಂಬುದೊಂದು ಉದ್ದೇಶ. ಬಹಳ ಮುಖ್ಯವಾಗಿ, ರೈತರ ಪರಿಸ್ಥಿತಿ ಏನು ಎನ್ನುವ ಬಗ್ಗೆ, Insurance ಏನು ಮಾಡಬೇಕೆನ್ನುವ ಬಗ್ಗೆ ಈಗಾಗಲೇ ಸಿದ್ದರಾಮಯ್ಯನವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. 1999ರಲ್ಲಿ ನಾನು ಕೃಷಿ ಸಚಿವನಾಗಿದ್ದ ಸಂದರ್ಭದಲ್ಲಿ ಮೊದಲನೇ ವರ್ಷ ಮೊದಲಬಾರಿಗೆ Insurance introduce ಆಯಿತು. ಈಗಾಗಲೇ 12-13 ವರ್ಷವಾಯಿತು. ಆಗ ನಾವು ಒಂದು ಹೋಬಳಿಯನ್ನು ಘಟಕವನ್ನಾಗಿ ಮಾಡುತ್ತಿದ್ದೆವು. ಹೋಬಳಿಯನ್ನು ಘಟಕವನ್ನಾಗಿ ಮಾಡಿ Crop estimation ನಲ್ಲಿ Loss and Profit Calculate ಮಾಡಿ ಮಾಡುತ್ತಿದ್ದೆವು. ಆಗ ನಾನು ವಿಧಾನಸಭೆಯಲ್ಲಿ ನಿಮ್ಮ ಜಾಗದಲ್ಲಿ ಕುಳಿತು ಮಾತನಾಡಿದ್ದೇನೆಂದರೆ, ಇನ್ನು 10 ವರ್ಷಗಳೊಳಗಾಗಿ ಗ್ರಾಮ ಪಂಚಾಯಿತಿ ಮಟ್ಟಕ್ಕೆ ನಾವು ತೆಗೆದುಕೊಂಡು ಹೋಗುತ್ತೇವೆ ಎನ್ನುವ ಮಾತು ಹೇಳಿದ್ದೆ. ಏಕೆಂದರೆ, ನಮ್ಮ ಹತ್ತಿರ Ground Reality Data ಇಲ್ಲ, ಆ Data Generate ಮಾಡುವುದಕ್ಕೆ ಸಮಯ ಬೇಕಾಗುತ್ತದೆ, ಮುಂದಿನ ದಿನಗಳಲ್ಲಿ ಮಾಡುತ್ತೇವೆಂದು Statistics Department ನವರು ಹೇಳಿದ್ದರು. ನಾನೂ ಆ ಮಾತು ಹೇಳಿದ್ದೆ. ಆದರೆ, ನಮ್ಮ ನಂತರ ಬಂದಂಥ ನೀವುಗಳು, ನಿಮ್ಮ ಸರ್ಕಾರಗಳು ಅದನ್ನು ಜಾರಿಗೊಳಿಸಬೇಕಾಗಿತ್ತು, ಅದನ್ನು ಮಾಡಲಿಲ್ಲ. ಅದನ್ನು ಜಾರಿಗೊಳಿಸದೇ ನೀವು ಗ್ರಾಮ ಪಂಚಾಯಿತಿ ಮಟ್ಟಕ್ಕೆ ತೆಗೆದುಕೊಂಡು ಹೋಗದಿದ್ದರೆ ನೀವು ರೈತರಿಗೆ ಪರಿಹಾರ ಕೊಡುವುದಕ್ಕೆ ಸಾಧ್ಯವಿಲ್ಲ. ಇದು ಏಕೆ ಅವಶ್ಯಕ ಇದೆ ಎಂದರೆ, ಬಹುಶಃ ಶೇ.70ರಷ್ಟು ಮಳೆಯನ್ನು ನಂಬಿ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳಿರುವುದು ರಾಜಸ್ಥಾನದ ನಂತರ ಕರ್ನಾಟಕ ಮಾತ್ರ. ಅಂದರೆ ಕರ್ನಾಟಕದಲ್ಲಿ ಇಷ್ಟಿದ್ದಾಗ, ಮಳೆಯನ್ನು ನಂಬಿ ಬೆಳೆ ಬೆಳೆಯುವ ರೈತನಿಗೆ ಸಹಾಯವಾಗಬೇಕಾದರೆ, ನೀವೇನು ಮಾಡಬೇಕೆಂದರೆ, Insurance Scheme ಗಳನ್ನು Strengthen ಮಾಡಬೇಕು. Ground Reality ಗೆ ಹತ್ತಿರವಾಗಿರುವ ರೀತಿಯಲ್ಲಿ ಅಂದರೆ ಗ್ರಾಮ ಪಂಚಾಯಿತಿ ಮಟ್ಟಕ್ಕೆ, ಹಳ್ಳಿ ಮಟ್ಟಕ್ಕೆ ತೆಗೆದುಕೊಂಡು ಹೋದರೆ ಇನ್ನೂ ಒಳ್ಳೆಯದು ಎನ್ನುವುದನ್ನು ನೀವು ಯೋಚನೆ ಮಾಡಬೇಕು. Chronicle Districts ಇರುತ್ತವೆ. ಸಿರಾ, ಮಧುಗಿರಿ, ಪಾವಗಡ, ಇಲ್ಲಿ ನೀವು ಹೇಳಲೇಬೇಕಾಗಿಲ್ಲ. ಅಲ್ಲಿ ಮಳೆ ಬರುವುದೇ ಇಲ್ಲ, ಅವು ಯಾವತ್ತೂ Chronicleಇವೆಲ್ಲಾ Centrally declared backward

taluks. ಅಂಥ ತಾಲ್ಲೂಕುಗಳಲ್ಲಿ ನೀವು ಸಾರಾಸಗಟಾಗಿ ಹಳ್ಳಿ ಮಟ್ಟದಲ್ಲಿ Implement ಮಾಡುವುದಕ್ಕೆ ನಿಮ್ಮ ಹತ್ತಿರ Generation, Data ಇದೆ, ಮಾಡಿ. ಆ ಕೆಲಸ ಮಾಡಿದರೆ ಸ್ವಲ್ಪ ಮಟ್ಟಿಗೆ ಏನಾದರೂ ಪ್ರಯೋಜನವಾಗುತ್ತದೆ. ನಾವು ಮಳೆ ಬರಲಿಲ್ಲವೆಂದು ಹೇಳುತ್ತೇವೆ. ನಾವು ಸರ್ಕಾರವನ್ನು ಟೀಕೆ ಮಾಡುವುದರ ಜೊತೆಗೆ ಎಲ್ಲೋ ಒಂದು ಕಡೆಗೆ ನಾನು ಹೇಳುತ್ತೇನೆ, ಏಕೆ ಮಳೆ ಬರಲಿಲ್ಲವೆನ್ನುವ ವಿಚಾರವನ್ನೂ ಹೇಳಬೇಕು. ಮಳೆ ಬರಲಿಲ್ಲವೆಂದರೆ, ಗುಜರಾತಿನಲ್ಲಿ ಆದ ಭಾಷಣವನ್ನು ನಾನು Internet ನಲ್ಲಿ ತೆಗೆದು ನೋಡಿದೆ. Really, I appreciate the initiative taken by the Gujarat Government. ಏನೆಂದರೆ, ಕಳೆದ 8 ವರ್ಷಗಳಿಂದ ಅವರೇನು ಮಾಡಿದ್ದಾರೆಂದರೆ, ಅವರು Drip Irrigation ಗೆ ಕೊಟ್ಟಿರುವ ಆದ್ಯತೆಯಿಂದನೀರನ್ನು ಸಂರಕ್ಷಣೆ ಮಾಡುವುದಕ್ಕೆ ಸಾಧ್ಯವಾಯಿತು, ವಿದ್ಯುಚ್ಛಕ್ತಿಯನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಯಿತು. ಶ್ರೀಮತಿ ಶೋಭಾ ಕರಂದ್ಲಾಜೆಯವರು ನಿರಂಜರ ಜ್ಯೋತಿ ಯೋಜನೆಯನ್ನು ಅಲ್ಲಿ ನೋಡಿಕೊಂಡು ಬಂದು ಜಾರಿ ಮಾಡಿದ್ದೀರಿ. ಈಗ ಆ ಇಲಾಖೆ ನಿಮ್ಮ ಬಳಿಯೇ ಇದೆ, ಬೇಗ ಆ ಕೆಲಸ ಮಾಡಿ ಮುಗಿಸಿ. At the same time, irrigation ಗೆ ಕೊಡುವ ನೀರು ಸಾಕಾಗುವುದಿಲ್ಲ. ನೀವು Compulsory ಯಾವ ತಾಲ್ಲೂಕಿನಲ್ಲಿ ಮಳೆ ಬರುತ್ತಿಲ್ಲ, 100% Drip Irrigation ಗೆ ಹಣ ಕೊಡುವ ಕೆಲಸ ಮಾಡಿದೆ ಒಳ್ಳೆಯದು. ನಿಮಗೆ NRHM, Agriculture Mission ನಲ್ಲಿ ಹಣವಿದೆ. ಇದರ ಜೊತೆಗೆ, ರಾಜ್ಯ ಸರ್ಕಾರವೂ ಸೇರಿದರೆ 300 ಕೋಟಿ ರೂಪಾಯಿಗಳಿಂದ 400 ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಆಗುವುದಕ್ಕೆ ಸಾಧ್ಯವಿಲ್ಲ. ಅಷ್ಟು ಕೊಟ್ಟರೆ, ನೀವು Electricity Save ಮಾಡಬಹುದು, ನೀರನ್ನೂ ಸಂರಕ್ಷಣೆ ಮಾಡಬಹುದು. ಈಶ್ವರಪ್ಪನವರೆ, ಇವತ್ತೇನಾಗಿದೆ ಎಂದರೆ, ಜುಲೈ ಮುಗಿಯುತ್ತಾ ಬಂದರೂ ಕೂಡ ಮಡಿಕೇರಿಯಲ್ಲಿ ಮಳೆ ಇಲ್ಲ. ಹವಾಮಾನದ ವ್ಯತ್ಯಾಸದ ಬಗ್ಗೆ ಜನ ಮಾಸ್ಕೋ, UNESCO ನಲ್ಲಿ ಮಾತನಾಡುತ್ತಾರೆ. ಕರ್ನಾಟಕದಲ್ಲಿ ಮಳೆ ಬರಲಿಲ್ಲ ಏನು ಮಾಡಬೇಕೆಂದು ಅಲ್ಲಿ ಕುಳಿತು ಜನ ಮಾತನಾಡುತ್ತಾರೆ. Long Term Plan ಏನು? Long Term Plan ಮಾಡಬೇಕು. ಪಶ್ಚಿಮ ಘಟ್ಟಗಳನ್ನು ಬಹಳ ಸುರಕ್ಷಿತವಾಗಿಡತಕ್ಕಂಥದ್ದು ಮಾಡಬೇಕು. 1600 ಕಿ.ಮೀ. ಉದ್ದ ಇರತಕ್ಕಂಥದ್ದು ಅದು ಹಿಮಾಲಯಕ್ಕಿಂತಲೂ ಕೂಡ ಹಳೆಯದಾಗಿರುವ ಪಶ್ಚಿಮಘಟ್ಟ ಪ್ರದೇಶವನ್ನು ಇವತ್ತು ಜೀವ ರಕ್ಷಣೆಯಾಗಿದ್ದು ಅಲ್ಲಿ, ಜೀವ ಸೃಷ್ಟಿಯಾಗಿದ್ದು ಅಲ್ಲಿ, ಅದನ್ನು ರಕ್ಷಣೆ ಮಾಡಬೇಕೆಂದು ಚರ್ಚೆ ಮಾಡುವ

ಸಂದರ್ಭದಲ್ಲಿ, ನಮ್ಮ ಅಧ್ಯಕ್ಷರಿಂದ ಒಂದು ಹೇಳಿಕೆ ಬಂತು. ಏನೆಂದರೆ, ಕೊಡಗು ಒಂದು ಪ್ರತ್ಯೇಕ ರಾಜ್ಯ ಎಂದು. ಆಮೇಲೆ ಮಾತನಾಡಿ ಆ ತರಹ ಹೇಳಿಲ್ಲವೆಂದು ಹೇಳಿದರು.

(ಗೊಂದಲ)

ಶ್ರೀ.ಎಂ.ಪಿ. ಅಪ್ಪಚ್ಚು ರಂಜನ್:- ಮಾನ್ಯ ಜಯಚಂದ್ರರವರೆ,

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ:- ನಾನು 100% ನಿಮ್ಮ ಪರವಾಗಿ ಇದ್ದೇನೆ. ಆದರೆ, ಅಧ್ಯಕ್ಷರ ಮನಸ್ಸಿನಲ್ಲಿ ಏನು ನೋವಿದೆ.

(ಗೊಂದಲ)

ಶ್ರೀ.ಎಂ.ಪಿ. ಅಪ್ಪಚ್ಚು ರಂಜನ್:-ಮಾನ್ಯ ಅಧ್ಯಕ್ಷರ ಬಾಯಿಯಿಂದ ಪ್ರತ್ಯೇಕ ರಾಜ್ಯ ಎಂದು ಬರಲಿಲ್ಲ. ನಮ್ಮನ್ನು ಪ್ರತ್ಯೇಕವಾಗಿ ಬಿಟ್ಟುಬಿಡಿ ಎಂದು ಹೇಳಿದ್ದಾರಷ್ಟೇ, ಸುಮ್ಮನೇಕೆ ಈ ರೀತಿ Interpret ಮಾಡುತ್ತೀರಿ?

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ:-ನಾನೂ ಅಧ್ಯಕ್ಷರನ್ನು ಸಮರ್ಥನೆ ಮಾಡುತ್ತೇನೆ. ನೀವು ಏಕೆ ಹೇಳಿದಿರಿ ಎಂದರೆ, ನೀವು ನಿಮ್ಮ ಹೇಳಿಕೆಯಲ್ಲಿ, ಕಾಡನ್ನು ರಕ್ಷಣೆ ಮಾಡುವುದು ನಮಗೆ ಗೊತ್ತಿದೆ. ಇದು ನಿಮ್ಮ ಹೇಳಿಕೆ. ನಾನು ಪ್ರತ್ಯೇಕ ರಾಜ್ಯ ಎಂದು ಹೇಳಿಲ್ಲ ಎಂದು ಹೇಳಿದಿರಿ. ಆ ವಿಷಯ ಬೇಡ. ಆದರೆ, ಅದೊಂದನ್ನು ನಾನು ಟೀಕೆ ಮಾಡಿದೆ. ನೀವೇನು ಹೇಳಿದಿರಿ, ಪಶ್ಚಿಮಘಟ್ಟಗಳನ್ನು ವಿಶ್ವಪರಂಪರೆ ಪಟ್ಟಿಗೆ ಸೇರ್ಪಡೆ ಮಾಡುವುದನ್ನು ನಾವು ಹಿಂದಿನಿಂದಲೂ ವಿರೋಧಿಸುತ್ತಿದ್ದೇವೆ, ಅರಣ್ಯ ಸಂಪತ್ತನ್ನು ಉಳಿಸುವ ಬಗ್ಗೆ ನಮಗೆ UNESCO ಬಗ್ಗೆ ಹೇಳುವಂಥ ಅವಕಾಶ ಇಲ್ಲ. ನಿಮ್ಮ ಜಿಲ್ಲೆಯ ಅರಣ್ಯವನ್ನು ಅವರಿಗಿಂತ ನಾವೇ ಚೆನ್ನಾಗಿ ರಕ್ಷಣೆ ಮಾಡಿಕೊಡುತ್ತೇವೆಂದು ಸಿಟ್ಟಾದರು ಎಂದು ಬಂದಿದೆ. ಅದು ನಿಜ. ಅದು ಅವರ ನೋವು. ಇಲ್ಲಿಯವರೆಗೆ UNESCO ಬಂದಿರಲಿಲ್ಲ. ನಮ್ಮ ಕಾನೂನೇ ಇತ್ತು. ಮಳೆ ಏಕೆ ಬರಲಿಲ್ಲ?

ಅಧ್ಯಕ್ಷರು:- ಮಳೆ ಬರದಿರುವುದು ಇದೇನೂ ಹೊಸದಲ್ಲವಲ್ಲ.

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ:-ನೀವು ನಿಮ್ಮ ಪೀಠದಿಂದ ದಯಮಾಡಿ ಏನೂ ಹೇಳುವುದಕ್ಕೆ ಹೋಗಬೇಡಿ.

(ಗೊಂದಲ)

ಅಧ್ಯಕ್ಷರು:- ತಪ್ಪು ಸಂದೇಶ ಹೋಗುವುದು ಬೇಡ. ಕೊಡಗು ಜಿಲ್ಲೆಯಲ್ಲಿ ಈ ರೀತಿ ಮಳೆ ಇಲ್ಲದೆ ಆಗಿದ್ದು ಬಹಳ ಇದೆ.

(ಗೊಂದಲ)

ಅಧ್ಯಕ್ಷರು:– ಟೀಕೆಯ ಪ್ರಶ್ನೆ ಬರುವುದಿಲ್ಲ. ಕೊಡಗು ಜಿಲ್ಲೆಯಲ್ಲಿ ಈ ರೀತಿ ಮಳೆ ಬರದೇ ಇರವುದು ಇದು First Time ಅಲ್ಲ. 1986ರಲ್ಲಾಗಿದೆ, 2002ರಲ್ಲಾಗಿದೆ. ನನ್ನ ಹತ್ತಿರ 45 ವರ್ಷಗಳಿಂದ ಲೆಕ್ಕ ಇದೆ. ಈ ತರಹ ಮಳೆ ಕಡಿಮೆಯಾಗಿದ್ದು ಇದೆ. ಹಾಗೆಂದು ಹೇಳಿ ಅರಣ್ಯ ನಾಶವಾಗಿಲ್ಲ. ತಪ್ಪು ಸಂದೇಶವನ್ನು ಯಾರೂ ಕೊಡುವುದು ಬೇಡ. ಯಾವುದೋ ಉದ್ದೇಶವಿಟ್ಟುಕೊಂಡು ಹೇಳುವುದು ಸರಿಯಲ್ಲ.

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ:–ಉದ್ದೇಶದ ಪ್ರಶ್ನೆಯಲ್ಲ. ನಮ್ಮ ರಾಜ್ಯದಲ್ಲಿ ಇವತ್ತು ಮಳೆ ಏಕೆ ಬರುತ್ತಿಲ್ಲ?

(ಗೊಂದಲ)

ಶ್ರೀ.ಎಂ.ಪಿ. ಅಪ್ಪಚ್ಚು ರಂಜನ್:– ಜಯಚಂದ್ರರವರೆ, ದಯವಿಟ್ಟು ಒಂದು ನಿಮಿಷ Yield ಆಗಿ.

ಅಧ್ಯಕ್ಷರು:– ಅವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ.ಟಿ.ಬಿ.ಜಯಚಂದ್ರ:–ನಿಮಗೆ ಹಣ ಬಿಡುಗಡೆ ಮಾಡುವ ಅಧಿಕಾರವಿದೆ. ಮಳೆ ಬರಿಸುವ ಅಧಿಕಾರವಿಲ್ಲ.

ಅಧ್ಯಕ್ಷರು:– ಒಂದು ನಿಮಿಷ ಅವರಿಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ:–ನಾನು ಮಾತನಾಡಿದ ಮೇಲೆ ಹೇಳಲಿ. ನಾನು ನಿಮ್ಮ ಪರವಾಗಿಯೇ ಇದ್ದೇನೆ.

ಶ್ರೀ.ಎಂ.ಪಿ.ಅಪ್ಪಚ್ಚುರಂಜನ್:– ನಾನೂ ನಿಮ್ಮ ಪರವಾಗಿಯೇ ಮಾತನಾಡುತ್ತೇನೆ.

ಶ್ರೀ.ಟಿ.ಬಿ.ಜಯಚಂದ್ರ:–ನನ್ನ Final opinion ಏನೆಂದು ತಿಳಿಯದೆ ಮಾತನಾಡುತ್ತೀರಲ್ಲ.

ಶ್ರೀ.ಎಂ.ಪಿ.ಅಪ್ಪಚ್ಚುರಂಜನ್:– ಬರಕ್ಕೂ ಮರಗಿಡಗಳಿಗೂ ದೊಡ್ಡ ಸಂಬಂಧವೇನೂ ಇಲ್ಲ. 1974ರಲ್ಲಿ ನಮ್ಮ ಕೊಡಗು ಜಿಲ್ಲೆಯಲ್ಲಿ ಕೇವಲ 30 ಇಂಚು ಮಳೆ ಬಂದಿತ್ತು.

ನಮ್ಮ ಮಾದಾಪುರ ಏರಿಯಾಕ್ಕೆ ಆಗ ಮರಗಳು ಇರಲಿಲ್ಲವಾ? ತಮಗೆ ಕೆಲವು ಜನ ತಪ್ಪು ಮಾಹಿತಿ ಕೊಡುತ್ತಾರೆ. ನಮ್ಮ ಕೊಡಗು ಜಿಲ್ಲೆಯಲ್ಲಿ 1974 ರಲ್ಲಿ ಕೇವಲ 55 ಸಾವಿರ ಹೆಕ್ಟೇರ್ ಮಾತ್ರ ಕಾಫಿ ತೋಟ ಇತ್ತು. ಈಗ 1 ಲಕ್ಷದ 25 ಸಾವಿರ ಹೆಕ್ಟೇರ್ ಕಾಫಿ ತೋಟವಿದೆ. ನಿಮಗೆ ಒಂದು ಉದಾಹರಣೆ

ಹೇಳುವುದಾದರೆ, ಮೊನ್ನೆ ನಮ್ಮ ತೋಟದಲ್ಲಿ ತುಂಬಾ ಶೇಡ್‌ನ್ನು ಇಟ್ಟುಕೊಳ್ಳಬಾರದು ಎಂದು ಶೇಡ್‌ನ್ನು ತೆಗೆಯುವಂಥ ವ್ಯವಸ್ಥೆ ಮಾಡಿದರು. ಅಂಥ ಸಂದರ್ಭದಲ್ಲಿ ಒಂದು ಹತ್ತು ಎಕರೆಗೆ ಸುಮಾರು ನಾಲ್ಕು ಸಾವಿರ ಮರಗಳು ಸಿಕ್ಕಿದೆ. ಈ ಮಾತು ಏಕೆ ಹೇಳುತ್ತೇನೆಂದರೆ, ಮೊದಲು ಕುರುಚಲು ಕಾಡು ಇತ್ತು. ಇವತ್ತು ಒಂದುಕಾಲು ಲಕ್ಷ ಕಾಫಿ ತೋಟವಾಗಿರುವುದರಿಂದ ಒಂದು ಎಕರೆಯಲ್ಲಿ ನಾವು 400 ಮರಗಳನ್ನು ನೆಡಬೇಕಾಗುತ್ತದೆ. ಇಲ್ಲದಿದ್ದರೆ ಕಾಫಿ ತೋಟ ಬರುವುದಿಲ್ಲ. ಹೀಗಿರುವಾಗ ನೀವು 75 ಸಾವಿರ ಹೆಕ್ಟೇರ್‌ಗೆ ಎಷ್ಟು ಮರಗಳು ಬಂತು ಎಂದು ಯೋಚಿಸಿ. ಕೊಡಗಿನಲ್ಲಿ ಇವತ್ತು ಹೆಚ್ಚು ಮರಗಳು ಬಂದಿವೆ. ಕಡಿಮೆ ಏನು ಆಗಲಿಲ್ಲ. ನಾವು ಪರಿಸರವನ್ನು ಇವತ್ತಿಗೂ ಉಳಿಸಿಕೊಂಡು ಬಂದಿದ್ದೇವೆ, ಕಳೆದ ಹಲವಾರು ವರ್ಷಗಳಿಂದ ಉಳಿಸಿಕೊಂಡು ಬಂದಿದ್ದೇವೆ. ನಮ್ಮ ಪೂರ್ವಜರ ಕಾಲದಲ್ಲಿ ಏನಿತ್ತು ಎಂದರೆ, ದೇವರ ಕಾಡು ಎಂದು ಇತ್ತು. ಆ ದೇವರ ಕಾಡು ಮಾಡಿದ ಉದ್ದೇಶ ಏನೆಂದರೆ, ದೇವರ ಕಾಡು ಎಂದರೆ ಪರಿಸರ ಉಳಿಸಿಕೊಳ್ಳುವಂಥ ಮರ ಮುಟ್ಟುಗಳನ್ನು ಯಾರು ಕಡಿಯುವುದಿಲ್ಲ, ಅದು ಇವತ್ತಿಗೂ ಕೂಡ ಉಳಿಸಿಕೊಂಡು ಬಂದಿದೆ. ಯಾವ ಡೋಂಗಿ ಪರಿಸರವಾದಿಗಳಿಂದ ಅದು ಉಳಿಸಿಕೊಂಡು ಬಂದಿರುವುದಿಲ್ಲ. ನಮಗೆ ನಮ್ಮ ಚಿಂತೆಯಿದೆ ನಾವು ನಮ್ಮ ಕಾಡು ಮೂಲೆಯಲ್ಲಿ ಹುಟ್ಟಿ ಬೆಳೆದಂಥವರು. ಪರಿಸರವನ್ನು ಉಳಿಸಿಕೊಂಡು ಬಂದಂಥವರು. ಪರಿಸರವನ್ನು ಇನ್ನು ಉಳಿಸಿಕೊಂಡು ಹೋಗಬೇಕೆನ್ನುವ ಆಶೆಯಿದೆ. ಆದರೆ, ಕೆಲವೊಂದು ಡೋಂಗಿ ಪರಿಸರವಾದಿಗಳು ಫಾರಿನ್‌ನಿಂದ ಬರುವ ಹಣ ಲೂಠಿ ಮಾಡುವುದಕ್ಕೆ ಈ ರೀತಿಯ ಕೆಲಸ ಮಾಡುತ್ತಿದ್ದಾರೆಯೇ ಹೊರತು ಬೇರೆ ಯಾರೂ ಅಲ್ಲ. ನಮಗೆ ಯುನೆಸ್ಕೊ ಬೇಕಾಗಿಲ್ಲ. ನಾವು ಯಾವರೀತಿ ಇಷ್ಟರವರೆಗೆ ಪರಿಸರ ಉಳಿಸಿಕೊಂಡು ಬಂದಿದ್ದೇವೆ ಅದೇರೀತಿ ಉಳಿಸುವುದಕ್ಕೆ ನಾವು ತಯಾರಿದ್ದೇವೆ.

ಶ್ರೀ.ಟಿ.ಬಿ.ಜಯಚಂದ್ರ:- ನನಗೆ ನಿಮ್ಮನ್ನು ಕೆರಳಿಸಬೇಕೆನ್ನುವ ಉದ್ದೇಶವಿಲ್ಲ. ದಯಮಾಡಿ ಅರ್ಥ ಮಾಡಿಕೊಳ್ಳಿ. ಇಲ್ಲಿನ ವಾತಾವರಣದಲ್ಲಿ ಬದಲಾವಣೆಯಾಗುತ್ತಿರುವ ಹಿನ್ನಲೆಯಲ್ಲಿ.

(ಗೊಂದಲ)

ಶ್ರೀ.ಎಂ.ಪಿ.ಅಪ್ಪಚ್ಚುರಂಜನ್:- ವಾತಾವರಣ ಇಲ್ಲಿ ಮಾತ್ರ ಅಲ್ಲ. Through out world ನಲ್ಲಿ Changes ಆಗುತ್ತಿದೆ.

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ:- ಪರಿಸರವೆಂದರೆ ಮಡಿಕೇರಿ ಒಂದೇ ಅಲ್ಲ, ಎಲ್ಲಾ ಬರುತ್ತದೆ.

(ಗೊಂದಲ)

ಶ್ರೀ.ಎಂ.ಪಿ.ಅಪ್ಪಚ್ಚುರಂಜನ್:– ಪರಿಸರದ ಬಗ್ಗೆ ಇವರಿಗೇನು ಗೊತಿದೆ? ಇವರಿಗೆ ಕಾಡುಗಳ ಬಗ್ಗೆ ಏನು ಗೊತ್ತಿದೆ? ನಮಗೆ ಗೊತ್ತಿರುವಷ್ಟು ನಿಮಗೆ ಗೊತ್ತಿದೆಯೆ? ನಾವು ಪರಿಸರ ಉಳಿಸಿಕೊಂಡು ಬಂದಿರುವವರು.

(ಗೊಂದಲ)

ಶ್ರೀ.ಬಿ.ಕೆ.ಸಂಗಮೇಶ್ವರ್:– ನಾವು ಮಲ್ನಾಡಿನವರು ನಮಗೆ ಪರಿಸರದ ಬಗ್ಗೆ ಗೊತ್ತಿದೆ.

(ಗೊಂದಲ)

ಶ್ರೀ.ಎಂ.ಪಿ.ಅಪ್ಪಚ್ಚುರಂಜನ್:– ಕಾಡಿನ ವಿಚಾರ ನಮಗೆ ಯಾರು ಟೀಚ್ ಮಾಡುವುದು ಬೇಕಾಗಿಲ್ಲ. ನಾವು ತಿಳಿದುಕೊಂಡು ಬಂದಿದ್ದೇವೆ. ನಾವು ಹುಟ್ಟಿನಿಂದ ಕಾಡಿನಿಂದ ಬಂದವರು. ಮರಗಳನ್ನು ಬೆಳೆಸಿಕೊಂಡು ಬಂದವರು. ನಮಗೆ ಪರಿಸರದ ಬಗ್ಗೆ ಎಲ್ಲಾ ವಿಚಾರ ಗೊತ್ತಿದೆ.

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ:– ರೀ ನಾನು ಪಶ್ಚಿಮ ಪ್ರದೇಶದ ಅಳಿಯ ನನಗೆ ಎಲ್ಲಾ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು:– ಅದೇ ತಾಪತ್ರಯವಾಗಿರುವುದು.

(ಗೊಂದಲ)

ಶ್ರೀ.ಎಂ.ಪಿ.ಅಪ್ಪಚ್ಚುರಂಜನ್:– ನೀವು ಅಳಿಯ ಅಷ್ಟೆ. ನೀವು ಅಲ್ಲಿಯವರಲ್ಲವಲ್ಲ.

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ:– ನಾನು ಮದುವೆಯಾದಾಗ ಕಾಡು ಹೇಗೆ ಇತ್ತು ಈಗ ಹೇಗಿದೆ ಎಂಬುದು ನಮಗೆ ಗೊತ್ತಿದೆ. ಅದನ್ನೆಲ್ಲಾ ಬಿಡಿ. ನಾನು ಏನು ಹೇಳುವುದಕ್ಕೆ ಹೊರಟ್ಟಿದ್ದೇನೆಂದರೆ,

(ಗೊಂದಲ)

ಅಧ್ಯಕ್ಷರು:– ನೋಡಿ ಈ ವಾತಾವರಣ ಬದಲಾವಣೆಗೆ ಅಮೆರಿಕ ಕಾರಣ. ಆ 30% factories ನ್ನು close ಮಾಡಬೇಕು ಎನ್ನುವುದು ಅವರಿಗೆ ಎಲ್ಲಾ examinations ಆಗಿದೆ. ಅಲ್ಲಿ close ಮಾಡುವುದು ಬಿಟ್ಟು ಕರ್ನಾಟಕಕ್ಕೆ ಕೊಡಗಿಗೆ ಹೇಳುವುದು ಬೇಡ. ಅಮೆರಿಕದವರು factories close ಮಾಡುವುದಕ್ಕೆ ಹೇಳಿ. ವಾತಾವರಣ ಸರಿಯಾಗುತ್ತದೆ. ಅವರ ಸಂಚಿಗೆ ನಾವೇಕೆ ಬಲಿಯಾಗಬೇಕು? ಸ್ವಾಭಿಮಾನ ಇಟ್ಟುಕೊಳ್ಳೋಣ.

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ:- ಪಶ್ಚಿಮ ಘಟ್ಟ ಪರಾಂಪರಿಕವಾಗಿರತಕ್ಕಂಥ ಘಟ್ಟ ಪ್ರದೇಶವೆಂದು ಘೋಷಣೆ ಮಾಡುವುದಕ್ಕೆ ಹೊರಟಿರುವುದು ಕಾನೂನು ಅಲ್ಲ. ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮದೇ ರಾಜ್ಯದಲ್ಲಿ ನಾವೇ ಮಾಡಿರತಕ್ಕಂಥ ಕಾನೂನುಗಳು ಐದು ಇವೆ. Conservation Act, Forest Act, Wildlife Act, ಅದೇ Act ಇರುತ್ತದೆ. ಅದು ಕಾನೂನು ಅಲ್ಲ. ಅದು ಮಾನ್ಯತೆ ಅಷ್ಟೆ. ಅದು ಏನೆಂದರೆ, ಆ ಮಾನ್ಯತೆ ಇರುವುದರಿಂದ ನಿಮಗೆ ಆಗಾಗ್ಗೆ ಎಚ್ಚರಿಸುತ್ತಿರುತ್ತಾರೆ. ಏಕೆ ಹೇಳುತ್ತಾರೆಂದರೆ, ನಮ್ಮಲ್ಲಿರತಕ್ಕಂಥ ವಾತಾವರಣ ಬದಲಾವಣೆಯಾಗಲಿಕ್ಕೆ Ozone ಎನ್ನುವುದು ಕಡಿಮೆಯಾಗಲಿಕ್ಕೆ ಕಾರಣ ನಮ್ಮ ಪಶ್ಚಿಮ ಘಟ್ಟದಲ್ಲಿ ಉತ್ಪತ್ತಿಯಾಗತಕ್ಕಂಥ Oxygen ಇದೆಯಲ್ಲ ಅದನ್ನೆ ನಾವು ಕುಡಿದು ಬದುಕಿರುವುದು. Amazon Forest ನಲ್ಲಿರತಕ್ಕಂತ Oxygenನಲ್ಲಿ ಅಮೆರಿಕಾದವರು ಬದುಕಿದ್ದಾರೆ. ನಾವು ಪಶ್ಚಿಮಘಟ್ಟ ಮತ್ತು ಹಿಮಾಲಯದ ಘಟ್ಟದ ಪ್ರದೇಶಗಳಿಂದ ಬರತಕ್ಕಂಥ Oxygen ಮತ್ತು ನಮ್ಮಲ್ಲಿರತಕ್ಕಂಥ Oxygen ನಿಂದ Ozone ಅನ್ನು ರಕ್ಷಣೆ ಮಾಡಬೇಕಾಗಿರುವುದು; ನಿಜ, ನಾವು ಹೇಳುತ್ತೇವೆ, ಅಮೆರಿಕಾದಲ್ಲಿ ಇವತ್ತು ಪ್ರಕೃತಿಯ ಮೇಲೆ ದೌರ್ಜನ್ಯ ನಡೆಯುತ್ತಿದೆ. ಆದರೆ, ಅಷ್ಟೆ ಪ್ರಮಾಣದಲ್ಲೂ ಕೂಡ India ದಲ್ಲೂ ಕೂಡ ಆಗುತ್ತಿದೆ. ಹವಮಾನ ವ್ಯತ್ಯಾಸ ಆದಂಥ ಸಂದರ್ಭದಲ್ಲಿ ಬಹಳಷ್ಟು ತೊಂದರೆಯಾಗತಕ್ಕಂಥದ್ದು ಅದು ಕರ್ನಾಟಕಕ್ಕೆ ಎನ್ನುವ ಮಾತನ್ನು ಅದು ಈ ದೇಶಕ್ಕೆ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಹೊರಟಿದ್ದೇನೆ. ಇವತ್ತು ಹವಮಾನದ ವ್ಯತ್ಯಾಸದಲ್ಲಿ ಆದಷ್ಟು ಪ್ರಕೃತಿ ಕಡೆಗೆ ಭೂಮಿಯ ಕಡೆಗೆ ಹೋಗುವಂಥ ಅನಿವಾರ್ಯತೆ ನಮಗಿದೆ. ಭೂಮಿಯ ಕಡೆಗೆ ನಮ್ಮ ದೃಷ್ಟಿ ಇರಬೇಕಾದಂಥ ಸಂದರ್ಭದಲ್ಲಿ ಇವೆಲ್ಲದೂ ಕೂಡ ಚರ್ಚೆಗೆ ಬರುತ್ತದೆ. ಪರಾಂಪರಿಕ ಎಂದು ಘೋಷಣೆ ಮಡಿದಾಕ್ಷಣಕ್ಕೆ ನಮ್ಮ ಕಾನೂನು ಏನೂ ಬದಲಾಗುವುದಿಲ್ಲ ಅಥವಾ ಇನ್ನೇನು ಬರುವುದಿಲ್ಲ. ನಿಜ ನಾನು ಒಪ್ಪುತ್ತೇನೆ, ನಿಮ್ಮಲ್ಲಿರತಕ್ಕಂಥ NGO ಗಳು ಸ್ವಲ್ಪ ಲಾಭ ಮಾಡಿಕೊಳ್ಳುತ್ತಾರೆ ಎನ್ನುವುದು ನಿಮ್ಮ ಮಾತಿನ ಅರ್ಥ. ನಿಜ ಆ NGO ಗಳು ಏನು ಅನರ್ಥ ಮಾಡುತ್ತಾರೆ ಎನ್ನುವುದರ ಬಗ್ಗೆ.

(ಗೊಂದಲ)

ಶ್ರೀ.ಕೆ.ಜಿ.ಕುಮಾರಸ್ವಾಮಿ:- ರಾಜ್ಯದಲ್ಲಿರುವ ಎಲ್ಲಾ NGOಗಳು ಒಂದೇ ತರಹ ಇರಲ್ಲ.

(ಗೊಂದಲ)

ಶ್ರೀ.ಎಂ.ಪಿ.ಅಪ್ಪಚ್ಚುರಂಜನ್:- ವಿಶ್ವಪರಂಪರೆಗೆ ಸಂಬಂಧಪಟ್ಟ ಹಾಗೆ ಆ NGO ಗಳು ಯಾರು ಇರುತ್ತಾರೆ? ಅಲ್ಲಿ ಯಾರು ಏನು ಮಾಡುತ್ತಾರೆ? NGO ರವರೇ ಅಲ್ಲಿ ವಿಶ್ವಪರಂಪರೆಯನ್ನು ನಡೆಸುತ್ತಿರತಕ್ಕಂಥದ್ದು. ಅದು ಸರ್ಕಾರದ ಅಡಿಯಲ್ಲಿ ಇದೆಯೆ?

(ಗೊಂದಲ)

ಶ್ರೀ.ಟಿ.ಬಿ.ಜಯಚಂದ್ರ:- ಮಾನ್ಯ ಮಂತ್ರಿಗಳೇ ಒಂದು ತಿಳಿದುಕೊಳ್ಳಿ. ನಾನು ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ಅಧ್ಯಕ್ಷನಾಗಿದ್ದೇನೆ.

(ಗೊಂದಲ)

ಶ್ರೀ.ಎಂ.ಪಿ.ಅಪ್ಪಚ್ಚುರಂಜನ್:- ಅದು ಯಾವುದೇ ಸರ್ಕಾರಕ್ಕೆ ಒಳಪಡುವು-ದಾದರೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಅದು ಯಾವುದೇ ಸರ್ಕಾರಕ್ಕೆ ಒಳಪಡಿಸುವುದಿಲ್ಲ. ಅದೂ ಕೂಡ ಡೋಂಗಿ ಪರಿಸರವಾದಿಗಳೇ ಅಲ್ಲಿ ಮೆಂಬರ್ಸ್ ಇರುವುದು. ಅವರೇ ತೀರ್ಮಾನ ಮಾಡಬೇಕಾಗುತ್ತದೆ. ನೀವು ಅದನ್ನು ಕೂಡ Criticize ಮಾಡಬೇಕಾಗುತ್ತದೆ.

ಶ್ರೀ.ಟಿ.ಬಿ.ಜಯಚಂದ್ರ:- ನಿಮ್ಮ ಪರವಾಗಿ ಇದ್ದೇನೆಂದು ಹೇಳಿದರೂ ನೀವು ಅರ್ಥ ಮಾಡಿಕೊಳ್ಳದೇ ಸುಮ್ಮನೆ ಹೇಳುತ್ತಲೇ ಇದ್ದೀರಿ.

ಶ್ರೀ.ಎಂ.ಪಿ.ಅಪ್ಪಚ್ಚುರಂಜನ್:- ನೀವು ನಮ್ಮ ಪರವಾಗಿ ಇದ್ದೇನೆಂದು ಹೇಳಿಕೊಂಡೆ ಸುತ್ತಿ ಬಳಸಿ ಇಡುತ್ತೀರಿ ನಮಗೆ ಗೊತ್ತಿದೆ. ನೀವು ಬಹಳ ಬುದ್ದಿವಂತರು. ನಾನು ಕಳೆದ ಸಾರಿಯೂ ಕೂಡ ನಿಮ್ಮ ಮಾತನ್ನು ಗಮನಿಸಿದ್ದೇನೆ.

(ಗೊಂದಲ)

ಶ್ರೀ.ಕೆ.ಜಿ.ಕುಮಾರಸ್ವಾಮಿ:- ಯುನೆಸ್ಕೋ ಕೂಡ ಒಂದು NGO,ಅವರು ಕೂಡ ಇದೇ ರೀತಿ ಎಲ್ಲಾ ಕಾಡುಗಳಂತೆ ನಮ್ಮ ದೇಶದ ಕಾಡುಗಳ ಮೇಲೆ ಕಣ್ಣಿಟ್ಟುಕೊಂಡು ಇದು ಮಾಡುತ್ತಿದ್ದಾರೆ, ದಯಮಾಡಿ ನಮ್ಮ ಕರ್ನಾಟಕದಲ್ಲಿ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು:- ಬರಕ್ಕೆ ಬನ್ನಿ.

ಶ್ರೀ.ಟಿ.ಬಿ.ಜಯಚಂದ್ರ:- ಏನು ಅನಾಹುತ ಮಾಡುತ್ತಾರೆ ಎಂದರೆ.. ಬರ Immediate ಮಾಡುವುದರ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಬರ ಮುಂದೆ ಬಾರದ ಹಾಗೆ ಏನು ಮಾಡಬೇಕೆಂಬುದನ್ನು ನೀವು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು:-ನಿಮ್ಮ ಊರಿನಲ್ಲಿ ಮರ ಬೆಳಸಿ. ನಮ್ಮ ಊರಿನಲ್ಲಿ ನಾವು ಬೆಳೆಸುತ್ತೇವೆ. ನಿಮ್ಮ ಊರಿನಲ್ಲಿ ಸ್ವಲ್ಪ ಬೆಳಸಿ.

ಶ್ರೀ.ಎಂ.ಪಿ.ಅಪ್ಪಚ್ಚುರಂಜನ್:- ಎಲ್ಲಾ ಜಿಲ್ಲೆಗಳಲ್ಲಿ 30% ಅರಣ್ಯ ಬೆಳೆಸುವಂಥದ್ದನ್ನು ಮಾಡಿಬಿಡಲಿ. ನಮ್ಮಲ್ಲಿ ಈಗಾಗಲೇ 52% ಅರಣ್ಯವಿದೆ. ತಾವು ಸ್ವಲ್ಪ ಮರ ನೆಡಿ.

ಅಧ್ಯಕ್ಷರು:- ನಿಮ್ಮ ಶಿರಾದಲ್ಲಿ ದೊಡ್ಡ ಫಾರೆಸ್ಟ್ ಬೆಳೆಸುವುದಕ್ಕೆ ಕಾರ್ಯಕ್ರಮ ಹಾಕಿ. ನೀವು ಮರ ಬೆಳೆಸುವುದಕ್ಕೆ ಮೊದಲು ಕಲಿಯಿರಿ.

ಶ್ರೀ.ಟಿ.ಬಿ.ಜಯಚಂದ್ರ:- NGOಗಳ ಬಗ್ಗೆ ಹೇಳಲೇಬೇಕಾಗುತ್ತದೆ. ನನಗೆ ಗೊತ್ತು ನಿಮ್ಮ ಒಂದು ಊರಿನಲ್ಲಿ ರಸ್ತೆ ಮಾಡಲಿಕ್ಕೆ.

ಶ್ರೀ.ಕೆ.ಎಸ್.ಈಶ್ವರಪ್ಪ:- ಇವತ್ತು ಮುಗಿಸುವುದೊ ಸೋಮವಾರಕ್ಕೆ ಕಂಟಿನ್ಯೂ ಮಾಡುವುದೊ, ಏಕೆಂದರೆ ಎಲ್ಲಾ ಎಂಎಲ್ಎ ಗಳು ಹೋಗುತ್ತಿದ್ದಾರೆ. ಅವರೆಲ್ಲರೂ ಮಾತನಾಡಬೇಕೆಂದು ಅಪೇಕ್ಷಪಟ್ಟಿದ್ದಾರೆಂದು ನಾನು ಅಂದು ಕೊಂಡಿದ್ದೇನೆ. ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ನಿಮಗೆ ಬಿಡುತ್ತೇನೆ.

ಶ್ರೀ.ಟಿ.ಬಿ.ಜಯಚಂದ್ರ:- ಈಗ ಇಲ್ಲಿರುವ ಸಂಖ್ಯಾಬಲ ನೋಡಿದರೆ ಬಹುಶಃ ನನಗೂ ಮಾತನಾಡುವುದಕ್ಕೆ ಸ್ಫೂರ್ತಿಯಿಲ್ಲ. ತಾವು ಬೇಕಾದರೆ ಸೋಮವಾರ ಬೆಳಗ್ಗೆ 9-00, 9-30ಕ್ಕೆ ತೆಗೆದುಕೊಳ್ಳುವುದಾದರೆ, ಆ ದಿವಸ ಕನ್‌ಕ್ಲೂಡ್ ಮಾಡಿ ಬಿಡುತ್ತೇನೆ.

ಅಧ್ಯಕ್ಷರು:- ಸೋಮವಾರ 9-30ಕ್ಕೆ ಮಾಡುವುದಕ್ಕೆ ಆಗುವುದಿಲ್ಲ. ಎಲ್ಲಾ ಶಾಸಕರು ಊರಿನಿಂದ ಬರುವುದು ಲೇಟಾಗುತ್ತದೆ.

ಶ್ರೀ.ಕೆ.ಎಸ್.ಈಶ್ವರಪ್ಪ:-ಸೋಮವಾರ 9-30ಕ್ಕೆ ಮಾಡುವುದಕ್ಕಾ-ಗುವುದಿಲ್ಲ ಏಕೆಂದರೆ, ಶಾಸಕರು ಊರಿನಿಂದ ಬರಬೇಕಾಗುತ್ತದೆ. ಸೋಮವಾರ 11-00 ಗಂಟೆಗೆ ಶುರು ಮಾಡೋಣ, ಸೋಮವಾರ ಆದಷ್ಟು ಕಡಿಮೆ ಮಾಡಿ ಆ ದಿವಸವೇ ಉತ್ತರ ಮುಗಿಸುವಂತೆ ಮಾಡಿದರೆ ಒಳ್ಳೆಯದು.

ಅಧ್ಯಕ್ಷರು:-ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ.ಕೆ.ಎಸ್.ಈಶ್ವರಪ್ಪ:- ಎಲ್ಲಾ ಹೊರಟು ಹೋಗಿದ್ದಾರೆ.

ಅಧ್ಯಕ್ಷರು:-ಇವತ್ತಲ್ಲ.

ಶ್ರೀ.ಯು.ಟಿ.ಖಾದರ್:- ಸೋಮವಾರ ಬೆಳಗ್ಗೆ ಅವಕಾಶ ಕೊಡಿ.

ಶ್ರೀ.ಕೆ.ಎಂ.ಶಿವಲಿಂಗೇಗೌಡ:- ಇಲ್ಲ ನಾವೆಲ್ಲರೂ ಮಾತನಾಡಬೇಕು ದಯವಿಟ್ಟು ಅವಕಾಶ ಕೊಡಿ, ನಾವೆಲ್ಲಾ ನಮ್ಮ ಕಷ್ಟ ಸುಖ ಹೇಳಿಕೊಳ್ಳಬೇಕು.

ಶ್ರೀ.ಕೆ.ಎಸ್.ಈಶ್ವರಪ್ಪ:- ಸೋಮವಾರ ಮಾಡಿ.

ಅಧ್ಯಕ್ಷರು:-At Leastಇವರು ಮುಗಿಸಲಿ.

ಶ್ರೀ.ಕೆ.ಎಸ್.ಈಶ್ವರಪ್ಪ:– ಅವರ ಅಪೇಕ್ಷೆ ಎಲ್ಲಾ ಸದಸ್ಯರು ಇರಬೇಕು ಎನ್ನುವುದು ಇದೆ. ಅದು ಒಳ್ಳೆಯದು ತಪ್ಪಲ್ಲ. ಏಕೆಂದರೆ ತಾವು ಅನೇಕ ಒಳ್ಳೆಯ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೀರಿ.

ಅಧ್ಯಕ್ಷರು:–ಹಾಗಾದರೆ ನಿಮ್ಮ ಉತ್ತರ ಮಂಗಳವಾರಕ್ಕೆ ಹೋಗುತ್ತದೆ.

ಶ್ರೀ.ಕೆ.ಎಸ್.ಈಶ್ವರಪ್ಪ:– ಇಲ್ಲ ಇಲ್ಲ ಉತ್ತರ ಮಾತ್ರ ಸೋಮವಾರ ಆಗಲೇಬೇಕು.

ಅಧ್ಯಕ್ಷರು:–ಎಲ್ಲರಿಗೂ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ ಹೀಗಾಗಿ ನಾನು ಅವಕಾಶ ಕೊಡುತ್ತೇನೆ. ಬಹಳಷ್ಟು ಜನರಿಗೆ ನಾನು ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಹೀಗಾಗಿ ನಾನು ಅವಕಾಶ ಕೊಡಲೇಬೇಕು.

ಶ್ರೀ.ಕೆ.ಎಸ್.ಈಶ್ವರಪ್ಪ:– ಹೌದು. At Least ಸೋಮವಾರಕ್ಕೆ ಮುಗಿಯಬೇಕು. ಆ ತರಹದಲ್ಲಿ ಸಹಕಾರ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು:–ಊಟ ಮಾಡಿ ಬರುತ್ತಾರೆ ನೀವು ಮಾತನಾಡಿ.

ಶ್ರೀ.ಕೆ.ಎಸ್.ಈಶ್ವರಪ್ಪ:– ಇಲ್ಲ ಸಾರ್ ಎಲ್ಲಾ ಹೋರಟು ಹೋದರು. 9–30 ಕ್ಕೆ ಫಿಕ್ಸ್ ಆಗಿದ್ದರಿಂದ ಎಲ್ಲರ ಲೆಕ್ಕ ಮಧ್ಯಾಹ್ನಕ್ಕೆ ಮುಗಿಯುತ್ತದೆ ಎಂದು ತಿಳಿದುಕೊಂಡು ಎಲ್ಲರೂ ಹೊರಟು ಹೋಗಿದ್ದಾರೆ.

ಶ್ರೀ.ಕೆ.ಎಂ.ಶಿವಲಿಂಗೇಗೌಡ:– ಯಾರೂ ಇಲ್ಲ ಎಲ್ಲರೂ ಹೋಗಿದ್ದಾರೆ. ಊಟನೂ ಅಲ್ಲಿ ಇಲ್ಲ. ಜೊತೆಗೆ ಕೋರಂ ಕೂಡ ಇಲ್ಲ.

ಶ್ರೀ.ಕೆ.ಎಸ್.ಈಶ್ವರಪ್ಪ:– ಅದಕ್ಕೆ ಮಾನ್ಯ ವಿರೋಧ ಪಕ್ಷದ ಉಪ ನಾಯಕರಿಗೆ ಹೇಳುವುದಿಷ್ಟೆ ಸೋಮವಾರ ಮತ್ತೆ extend ಮಾಡುವುದಕ್ಕೆ ಅವಕಾಶ ಕೊಡಬೇಡಿ, ಉತ್ತರ ಸಮೇತವಾಗಿ ಸೋಮವಾರ ಮುಗಿಯಬೇಕು. ಅದಕೋಸ್ಕರ ಸೋಮವಾರ ಬೆಳಗ್ಗೆ ಅವರಿಗೆ ಪ್ರಾರಂಭದಲ್ಲಿ ಸ್ವಲ್ಪ ಸಮಯ ಕೊಟ್ಟು ನಂತರ ಉಳಿದ ಶಾಸಕರಿಗೆ ಅವಕಾಶ ಕೊಟ್ಟು ಮಧ್ಯಾಹ್ನಕ್ಕೆ ಉತ್ತರಕ್ಕೆ ಅವಕಾಶ ಕೊಡಬೇಕು.

ಶ್ರೀ.ಟಿ.ಬಿ.ಜಯಚಂದ್ರ:– ನನ್ನದೊಂದು ಸಲಹೆ ಇದೆ. Please you accommodate time. ಸೋಮವಾರ question hours ಮುಗಿಯುತ್ತಿದ್ದ ಹಾಗೆ,

ಅಧ್ಯಕ್ಷರು:–ಅದು ಆಗಲ್ಲ.

ಶ್ರೀ.ಟಿ.ಬಿ.ಜಯಚಂದ್ರ:– ಹಾಗಾದರೆ ತಾವು ಸೋಮವಾರ 10–00 ಗಂಟೆಗೆ ಅಸೆಂಬ್ಲಿ ಕರೆಯಿರಿ.

ಡಾ;ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:- ಸೋಮವಾರ 10-00ಗಂಟೆಗೆ ಅಸೆಂಬ್ಲಿ ಕರೆಯಿರಿ.

ಶ್ರೀ.ಕೆ.ಎಸ್.ಈಶ್ವರಪ್ಪ:- 10-00 ಗಂಟೆಗೆ ಅಸೆಂಬ್ಲಿ ಕರೆಯಿರಿ, 10-00 ಗಂಟೆಗೆ ನೀವಂತೂ ಬನ್ನಿ ಯಾರೂ ಬರಲಿ ಬಾರದಿರಲಿ.

ಶ್ರೀ.ಟಿ.ಬಿ.ಜಯಚಂದ್ರ:- ನಾನು 10-00 ಗಂಟೆಗೆ ಬರುತ್ತೇನೆ.

ಶ್ರೀ.ಕೆ.ಎಸ್.ಈಶ್ವರಪ್ಪ:- ಹೀಗೆ ಮಾಡೋಣ.10--00ಗಂಟೆಗೆ ಇವರು ಬಂದು ಶುರು ಮಾಡಲಿ. ಉಳಿದವರು ಬರುವಷ್ಟರಲ್ಲಿ ಇವರು ಮುಗಿಸುತ್ತಾರೆ.

ಶ್ರೀ.ಟಿ.ಬಿ.ಜಯಚಂದ್ರ:- ಆಯಿತು. ನಾಳೆ ನಮ್ಮ ಊರಿಗೆ ಬರುತ್ತಿದ್ದಾರೆ ನನಗೆ ಜಾಸ್ತಿ ದುಡ್ಡು ಕೊಡುತ್ತೇನೆಂದು ಹೇಳಿದರೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ.

ಶ್ರೀ.ಕೆ.ಎಸ್.ಈಶ್ವರಪ್ಪ:- ಏನೂ ಕೊಡುವುದಿಲ್ಲ. ನಾಳೆಯವರೆಗೆ ಮಾತನಾಡಿ.

(ಗೊಂದಲ)

ಶ್ರೀ.ಕೆ.ಎಸ್.ಈಶ್ವರಪ್ಪ:- ಈ ಮಾತಿಗೂ ದುಡ್ಡಿಗೂ ಸಂಬಂಧ ತರಬೇಡಿ. ಇಲ್ಲ ನಾನು ತಮಾಷೆ ಮಾಡಿದಷ್ಟೆ. ನೀವು ಬಹಳ ಅನುಭವಸ್ಥರು ಇದ್ದೀರಿ, ನೀವು ಖಂಡಿತ ಮಾತನಾಡಬೇಕು, ಸೋಮವಾರ ಬೆಳಗ್ಗೆ 10-00 ಗಂಟೆಗೆ ಬಂದು ನೀವು ಶುರು ಮಾಡಿ. ಉಳಿದ ಸದಸ್ಯರು ಬರುವಷ್ಟರಲ್ಲಿ ನಿಮ್ಮದು ಮುಗಿದರೆ ಅನುಕೂಲವಾಗುತ್ತದೆ ಅಷ್ಟೆ.

ಶ್ರೀ.ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ನನ್ನದೇನೂ ಜಾಸ್ತಿಯಿಲ್ಲ. ಆದ್ದರಿಂದ, ಸೋಮವಾರ ಬೆಳಿಗ್ಗೆ 10-00 ಗಂಟೆಗೆ ನನಗೆ ಅವಕಾಶ ಕೊಟ್ಟರೆ ಬೇಗ ಕನ್‌ಕ್ಲೂಡ್ ಮಾಡುತ್ತೇನೆ. ಸೋಮವಾರ ಅವರೆಲ್ಲರು ಬರುವುದರಿಂದ ಕೆಲವು ವಿಚಾರಗಳನ್ನು ಅವರಿಗೆ ಹೇಳುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, ಸೋಮವಾರ ಬೆಳಿಗ್ಗೆ ಮುಂದುವರಿಸುತ್ತೇನೆ.

ಅಧ್ಯಕ್ಷರು:- ಆಯಿತು. ಈಗ ಒಂದು ಪ್ರಕಟಣೆ.

3. ಪ್ರಕಟಣೆ

ಸದನದ ಕಲಾಪವನ್ನು ಮುಂದುವರೆಸುವುದರ ಬಗ್ಗೆ

ದಿನಾಂಕ:19-07-2012 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.